ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 1 ಗುರುವಾರ 2023

ಸಂಪುಟ: 44 | ಸಂಚಿಕೆ: 46 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರು ಜಿಲ್ಲೆಯಲ್ಲಿ ಶಾಲೆಗಳು ಆರಂಭ
■ಪುಟ–8

ಸಂಪುಟ ಸಭೆ ನಂತರ ನಾಳೆಯೇ
ಗ್ಯಾರಂಟಿಗಳು ಜಾರಿ

●ಮುಖ್ಯಮಂತ್ರಿ ಸಿದ್ದರಾಮಯ್ಯ ಪುನರುಚ್ಚಾರ ●ಯೋಜನೆ ಜಾರಿ ಹೊಣೆ ಮುಖ್ಯಮಂತ್ರಿ ಹೆಗಲಿಗೆ ●ನಾಳಿನ ಸಂಪುಟ ಸಭೆಯಲ್ಲಿ ಅಂತಿಮವಾಗಿ ನಿರ್ಧರಿಸಿ ಘೋಷಣೆ ಸಾಧ್ಯತೆ



ಬೆಂಗಳೂರು, ಮೇ 31(ಕೆಎಂಶಿ)– ಷರತ್ತುಗಳ ಅಳವಡಿಕೆಯೊಂದಿಗೆ ಐದು ಗ್ಯಾರಂಟಿಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಮುಂದಾಗಿದೆ.

ಗ್ಯಾರಂಟಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಬುಧವಾರ ಸೇರಿದ್ದ ಅನೌಪಚಾರಿಕ ಮಂತ್ರಿ ಪರಿಷತ್ ಸಭೆಯಲ್ಲಿ ಈ ತೀರ್ಮಾನ ಕೈಗೊಂಡಿದೆ. ಜನತೆಗೆ ನೀಡಿರುವ ಭರವಸೆಗಳನ್ನು ಅನುಷ್ಠಾನಗೊಳಿಸುವ ಪೂರ್ಣ ಹೊಣೆಗಾರಿಕೆಯನ್ನು ಮುಖ್ಯಮಂತ್ರಿ ಅವರ ಹೆಗಲಿಗೆ ಸಭೆ ಹಾಕಿದೆ.

ಐದು ಇಲಾಖೆಗಳು ಗ್ಯಾರಂಟಿಗಳನ್ನು ಅನುಷ್ಠಾನಗೊಳಿಸಲು ಇರುವ ಸಾಧಕ–ಬಾಧಕಗಳನ್ನು ಸಂಬಂಧಪಟ್ಟ ಸಚಿವರು ಹಾಗೂ ಇಲಾಖೆ ಕಾರ್ಯದರ್ಶಿಗಳು ಸಭೆಯ ಗಮನಕ್ಕೆ ತಂದಿದ್ದಾರೆ. ಯೋಜನೆ ಅನುಷ್ಠಾನಕ್ಕೆ ದೊಡ್ಡ ಪ್ರಮಾಣದ ಹಣದ ಅವಶ್ಯಕತೆ ಇದೆ. ಈ ವಿಭಾಗಕ್ಕೆ ಹಣ ಒದಗಿಸಲು ನಮ್ಮಲ್ಲಿ ಆರ್ಥಿಕ ಸಂಪನ್ಮೂಲ ಸಮರ್ಪಕವಾಗಿಲ್ಲ. ಹಣಕಾಸು ಇಲಾಖೆ ನಮಗೆ ಸಹಕರಿಸಿದರೆ, ಯೋಜನೆ ಅನುಷ್ಠಾನಗೊಳಿಸುವುದಾಗಿ ಎಲ್ಲಾ ಇಲಾಖೆ ಅಧಿಕಾರಿಗಳು ಸಭೆಯ ಗಮನಕ್ಕೆ ತಂದು ಕೈತೊಳೆದುಕೊಂಡಿದ್ದಾರೆ. ಪ್ರಧಾನ ಕಾರ್ಯದರ್ಶಿಗಳ ವರದಿಯ ಬಳಿಕ ಮುಖ್ಯ ಕಾರ್ಯದರ್ಶಿ ಅವರು ಸಂಪನ್ಮೂಲ ಕ್ರೋಢೀಕರಣದ ಬಗ್ಗೆ ವರದಿ ಮತ್ತು ▶6ನೇ ಪುಟಕ್ಕೆ

ಐದು ಗ್ಯಾರಂಟಿಗಳಿಗೆ ಬೇಕಾಗುವ ಹಣ

ಯೋಜನೆ	ಹಣ
ಗೃಹಲಕ್ಷ್ಮಿ	₹30000 ಕೋಟಿ
ಉಚಿತ ಪ್ರಯಾಣ	₹3200 ಕೋಟಿ
ಗೃಹಜ್ಯೋತಿ	₹8000 ಕೋಟಿ
ಯುವನಿಧಿ	₹3000 ಕೋಟಿ
ಅನ್ನಭಾಗ್ಯ	₹10000 ಕೋಟಿ

ಪಾಲಿಕೆ, ಮುಡಾ, ಸಬ್ ರಿಜಿಸ್ಟ್ರಾರ್ ಅಧಿಕಾರಿಗಳ
ಮನೆ, ಕಚೇರಿ ಮೇಲೆ ಲೋಕಾಯುಕ್ತ ದಾಳಿ

ಶೋಧನೆ ವೇಳೆ ಕೋಟ್ಯಾಂತರ ರೂ. ಚಿನ್ನಾಭರಣ, ವಾಹನ, ಮನೆ, ನಿವೇಶನ ಇನ್ನಿತರೆ ಆಸ್ತಿ ಪತ್ತೆ

ಮೈಸೂರು, ಮೇ 31(ಆರ್‌ಕೆ)– ಮೈಸೂರು ನಗರಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್, ಮುಡಾ ಮುಖ್ಯ ಹಣಕಾಸು ಅಧಿಕಾರಿ ಎನ್.ಮುತ್ತ, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ನಾಗೇಶ್ ಮತ್ತು ನಂಜನಗೂಡು ಉಪ ನೋಂದಣಾಧಿಕಾರಿ ಶಿವಶಂಕರಮೂರ್ತಿ ಅವರುಗಳ ನಿವಾಸ ಹಾಗೂ ಕಚೇರಿಗಳ ಮೇಲೆ ಬುಧವಾರ ಬೆಳ್ಳಂಬೆಳಗ್ಗೆ ಏಕ ಕಾಲಕ್ಕೆ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು ಕೋಟ್ಯಾಂತರ ರೂ. ಮೌಲ್ಯದ ಆಸ್ತಿ–ಪಾಸ್ತಿ ಪತ್ತೆ ಹಚ್ಚಿದ್ದಾರೆ.

ಇವರುಗಳ ವಿರುದ್ಧ ಆದಾಯ ಮೀರಿ ಆಸ್ತಿ ಗಳಿಸಿದ ಆರೋಪದ ಮೇರೆಗೆ ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದ ಲೋಕಾಯುಕ್ತ ಪೊಲೀಸರು, ಕಳೆದ ಕೆಲ ತಿಂಗಳಿಂದ ಈ ಅಧಿಕಾರಿಗಳ ಆಸ್ತಿಗೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಿಸಿ ಮೈಸೂರು ಲೋಕಾಯುಕ್ತ ಎಸ್ಪಿ ಸುರೇಶ್ ಬಾಬು ನಿರ್ದೇಶನದಂತೆ 32 ಅಧಿಕಾರಿಗಳನ್ನೊಳಗೊಂಡ ಎಂಟು ತಂಡಗಳು ಬೆಳ್ಳಂಬೆಳಗ್ಗೆಯೇ ದಾಳಿ ನಡೆಸಿವೆ.

ಪಾಲಿಕೆ ಎಸ್‌ಇ ಮಹೇಶ್: ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ನಗರ ಪಾಲಿಕೆ ಕಚೇರಿಯಲ್ಲಿನ ಪಾಲಿಕೆಯ ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್ ಅವರ ಕಚೇರಿ ಮತ್ತು ಕುವೆಂಪು ನಗರದ ಪ್ರಮತಿ ಶಾಲೆ ಹಿಂಭಾಗವಿರುವ ಅವರ ಮನೆ ಮೇಲೆ ದಾಳಿ ನಡೆಸಿದ ಪೊಲೀಸರು, 24.43 ಲಕ್ಷ ರೂ. ಮೌಲ್ಯದ 629 ಗ್ರಾಂ ಚಿನ್ನಾಭರಣ, 4.9 ಲಕ್ಷ ರೂ. ಮೌಲ್ಯದ 7 ಕೆ.ಜಿ. ಬೆಳ್ಳಿ ಪದಾರ್ಥ, 17 ಲಕ್ಷ ರೂ. ಮೌಲ್ಯದ ಬಿಎಂಡಬ್ಲ್ಯೂ ಕಾರು, 18 ಲಕ್ಷ ರೂ. ▶6ನೇ ಪುಟಕ್ಕೆ



ನಗರಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್ ನಿವಾಸ



ನಂಜನಗೂಡು ಉಪ ನೋಂದಣಾಧಿಕಾರಿ ಶಿವಶಂಕರಮೂರ್ತಿ ಮನೆ




ಮುಡಾ ಲೆಕ್ಕಾಧಿಕಾರಿ ಮುತ್ತ ಕಚೇರಿ



ಮುಡಾ ಎಇಇ ನಾಗೇಶ್ ಕಚೇರಿ

21 ಸಾವಿರ ಸರ್ಕಾರಿ ನೌಕರರ ಬಳಿಯೇ ಇದ್ದವು ಬಿಪಿಎಲ್ ಕಾರ್ಡ್: 11 ಕೋಟಿ ದಂಡ ವಸೂಲಿ



ಬೆಂಗಳೂರು: ಕರ್ನಾಟಕ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯು 4.6 ಲಕ್ಷ ನಕಲಿ ಬಿಪಿಎಲ್ ಕಾರ್ಡ್ ಹೊಂದಿರುವವರಿಂದ 13.5 ಕೋಟಿ ರೂಪಾಯಿ ದಂಡ ವಸೂಲಿ ಮಾಡಿದೆ. ವಿಪರ್ಯಾಸವೆಂದರೆ 21,232 ಸರ್ಕಾರಿ ನೌಕರರೇ ಬಿಪಿಎಲ್ ಕಾರ್ಡ್ ಪಡೆದಿದ್ದರು ಎಂಬುದು ಬೆಳಕಿಗೆ ಬಂದಿದ್ದು, ಅವರಿಂದ 11.2 ಕೋಟಿ ರೂ. ದಂಡ ಸಂಗ್ರಹಿಸಲಾಗಿದೆ. ನಕಲಿ ಬಿಪಿಎಲ್ ಕಾರ್ಡ್ ಹೊಂದಿರುವವರ ವಿರುದ್ಧ 2021ರ ಫೆಬ್ರವರಿ ತಿಂಗಳಿನಿಂದಲೇ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿತ್ತು. ಈಗಲೂ ಕಾರ್ಯಾಚರಣೆ ಮುಂದುವರಿಸಲಾಗಿದ್ದು, ಆಧಾರ್ ಸಂಖ್ಯೆಗಳನ್ನು ಬಳಸಿಕೊಂಡು ವಿವಿಧ ಇಲಾಖೆಗಳಿಂದ ಅಂತಹ ಅನರ್ಹ ಫಲಾನುಭವಿಗಳ ಡೇಟಾವನ್ನು ಸಂಗ್ರಹಿಸಲಾಗುತ್ತಿದೆ ಎಂದು ಹೆಚ್ಚುವರಿ ನಿರ್ದೇಶಕ (ವಿಜಿಲೆನ್ಸ್ ಮತ್ತು ಸಾರ್ವಜನಿಕ ವಿತರಣೆ) ಜ್ಞಾನೇಂದ್ರ ಕುಮಾರ್ ಗಂಗ್ವಾರ್ ಮಾಹಿತಿ ನೀಡಿರುವುದಾಗಿ ವರದಿಯಾಗಿದೆ. ಕಾರ್ಯಾಚರಣೆಗೆ ಸಾರಿಗೆ ▶8ನೇ ಪುಟಕ್ಕೆ

ರಾಗಿ ಬೆಳೆಗಾರರಿಗೆ ತಕ್ಷಣ ಹಣ ಪಾವತಿಸಲು ಕ್ರಮ ಕೈಗೊಳ್ಳಿ: ಮುಖ್ಯಮಂತ್ರಿ ಸೂಚನೆ



ಬೆಂಗಳೂರು: ರಾಗಿ ಬೆಳೆಗಾರರಿಗೆ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಸಮರ್ಪಕವಾಗಿ ಹಣ ಪಾವತಿಗೆ ತಕ್ಷಣ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಬುಧವಾರ ಬೆಂಗಳೂರಿನ ತಮ್ಮ ಗೃಹ ಕಚೇರಿ ಕೃಷ್ಣದಲ್ಲಿ ರೈತ ಸಮುದಾಯಗಳನ್ನು ಭೇಟಿ ಮಾಡಿ ಅವರ ಸಮಸ್ಯೆಗಳನ್ನು ಆಲಿಸಿದರು. ರಾಗಿ ಬೆಳೆಗಾರರಿಗೆ ಹಣ ಪಾವತಿಸುವಲ್ಲಿ ಆಗುತ್ತಿರುವ ವಿಳಂಬವನ್ನು ತಕ್ಷಣ ಬಗೆಹರಿಸಿ, ರೈತರಿಗೆ ಅನಾನುಕೂಲ ಆಗದಂತೆ ನೋಡಿಕೊಳ್ಳಬೇಕೆಂದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದರು.

ವಿದ್ಯಾರ್ಥಿಗಳ ಬಸ್ ಪಾಸ್ ಅವಧಿ ಜೂ.15ಕ್ಕೆ ವಿಸ್ತರಣೆ



ಬೆಂಗಳೂರು: ರಾಜ್ಯದ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಹಳೆ ಬಸ್ ಪಾಸ್ ಅವಧಿಯನ್ನು ವಿಸ್ತರಣೆ ಮಾಡಲಾಗಿದೆ. 2023–24ನೇ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯಂತೆ ಇಂದಿನಿಂದ ರಾಜ್ಯದ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಆರಂಭವಾಗಿವೆ. ಈ ಹಿನ್ನಲೆಯಲ್ಲಿ ಕೆಎಸ್‌ಆರ್‌ಟಿಸಿ, ವಿದ್ಯಾರ್ಥಿಗಳ ಹಳೆಯ ಬಸ್ ಪಾಸ್ ಅವಧಿ ವಿಸ್ತರಿಸಿದ್ದು, ಜೂ.15ರವರೆಗೆ ಹಳೆಯ ಬಸ್ ಪಾಸ್ ಬಳಸುವಂತೆ ಕೆಎಸ್‌ಆರ್‌ಟಿಸಿ ಆದೇಶ ಹೊರಡಿಸಿದೆ. ಇದು ಶಾಲಾ ಮತ್ತು ಕಾಲೇಜು ಎಲ್ಲಾ ವಿದ್ಯಾರ್ಥಿಗಳಿಗೆ ಅನ್ವಯವಾಗಲಿದೆ.

ನಿಗಮವು ಪ್ರತಿ 2023–24ನೇ ಸಾಲಿನ ವಿದ್ಯಾರ್ಥಿ ಉಚಿತ / ರಿಯಾಯಿತಿ ಬಸ್ ಪಾಸುಗಳನ್ನು ಇಡಿಸಿಎಸ್ ಇಲಾಖೆಯ ಸೇವಾಸಿಂಧು ತಂತ್ರಾಂಶದ ಮುಖಾಂತರ ಸಂಪೂರ್ಣ ಸಂಪೂರ್ಣ ಯಾಂತ್ರೀಕೃತವಾಗಿ ವಿತರಣೆ ಮಾಡಲು ಕ್ರಮ ವಹಿಸಲಾಗುತ್ತಿದ್ದು, ಇಡಿಸಿಎಸ್ ಇಲಾಖೆಯು ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ. ▶8ನೇ ಪುಟಕ್ಕೆ

ಜೂ.3, ಜೆಸಿ ಕಾಲೇಜಲ್ಲಿ ಓಪನ್ ಡೇ ಕಾರ್ಯಕ್ರಮ



ಮೈಸೂರು, ಮೇ 31(ಪಿಎಂ)– ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ (ಜೆಎಸ್‌ಎಸ್‌ಎಸ್‌ಟಿಯು) ಮತ್ತು ಶ್ರೀ ಜಯಚಾಮ ರಾಜೇಂದ್ರ ಇಂಜಿನಿಯರಿಂಗ್ ಕಾಲೇಜು (ಎಸ್‌ಜೆಸಿಇ) ವತಿಯಿಂದ ಜೂ.3ರಂದು ಓಪನ್ ಡೇ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಜೆಎಸ್‌ಎಸ್‌ಎಸ್‌ಟಿಯು ಕುಲಸಚಿವ ಡಾ.ಎಸ್.ಎ.ಧನರಾಜ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್‌ಜೆಸಿಇ ಕಾಲೇಜಿನ ವಜ್ರ ಮಹೋತ್ಸವದ ಪ್ರಯುಕ್ತ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಎಸ್‌ಜೆಸಿಇ ಕಾಲೇಜು ಆವರಣದಲ್ಲಿರುವ ವಿಶ್ವವಿದ್ಯಾನಿಲಯದ ಸಮುಚ್ಚಯದಲ್ಲಿ ಕಾರ್ಯಕ್ರಮ ನಡೆಯಲಿದೆ. ಈ ಸಂದರ್ಭದಲ್ಲಿ ಎಸ್‌ಜೆಸಿಇ ಮತ್ತು ಜೆಎಸ್‌ಎಸ್‌ಎಸ್‌ಟಿಯುನಲ್ಲಿ ನಡೆಸಲಾಗುತ್ತಿರುವ ವಿವಿಧ ಇಂಜಿನಿಯರಿಂಗ್, ವಿಜ್ಞಾನ ಮತ್ತು ನಿರ್ವಹಣಾ ಕೋರ್ಸ್‌ಗಳ ಬಗ್ಗೆ ವಿವರ ಪ್ರಕಟಿಸಲಾಗುವುದು ಎಂದರು.

ಸಾರ್ವಜನಿಕರು ವಿವಿಧ ವಿಭಾಗಗಳಿಗೆ ಭೇಟಿ ನೀಡಿ ಯೋಜನೆಗಳು, ಸಂಶೋಧನಾ ಕ್ರಿಯೆ, ಉದ್ಯಮನಿರತ ಸಂಸ್ಥೆಗಳು ಮತ್ತು ಶಿಕ್ಷಣ ಸಂಸ್ಥೆಗಳೊಂದಿಗಿನ ಸಹಯೋಗ, ಉದ್ಯಮ ಮಾರ್ಗಗಳು ಹಾಗೂ ಸಾಮಾಜಿಕ ಕೊಡುಗೆಗಳಲ್ಲಿ ಸಂಸ್ಥೆಯ ವಿಭಾಗಗಳ ಪಾತ್ರದ ಬಗ್ಗೆ ಮಾಹಿತಿ ಪಡೆಯಬಹುದು ಎಂದು ತಿಳಿಸಿದರು.

ಜೊತೆಗೆ ಪ್ರೌಢಶಾಲಾ, ಪದವಿಪೂರ್ವ ಮತ್ತು ಪದವಿ ವಿದ್ಯಾರ್ಥಿಗಳಿಗೆ ವಿವಿಧ ವಿಷಯಗಳ ಕುರಿತು ಸ್ಪರ್ಧೆ ಏರ್ಪಡಿಸಲಾಗಿದೆ. ಆಯಾ ವಿಷಯಗಳ ಕುರಿತು ಪಿಪಿಟಿ ಪ್ರದರ್ಶನ ಅಥವಾ ಪೋಸ್ಟರ್ ಪ್ರದರ್ಶನದ ಮೂಲಕ ವಿಷಯ ಮಂಡಿಸಬಹುದು. 'ಸುಸ್ಥಿರತೆ; ಶಕ್ತಿ, ಆರೋಗ್ಯ ಮತ್ತು ಪರಿಸರ', 'ನವೀನ ಮಾದರಿ; ತ್ಯಾಜ್ಯದಿಂದ ಸಂಪತ್ತು', 'ಅಂತರ್ಜಾಲ; ಹ್ಯಾಕಿಂಗ್ ಮತ್ತು ಸೈಬರ್ ಕ್ರೈಮ್', 'ತಯಾರಿಕೆ ; ರೊಬೋಟಿಕ್ಸ್ ಮತ್ತು ಇ ಮೊಬಿಲಿಟಿ', 'ವ್ಯವಸಾಯ; ಆಧುನಿಕ ಉಪಕರಣಗಳು ಮತ್ತು ತಂತ್ರಗಳು', ಹಾಗೂ 'ಸಾಮಾಜಿಕ ಪ್ರಭಾವ; ತಾಂತ್ರಿಕ ಪರಿಹಾರಗಳು' ವಿಷಯಗಳ ಕುರಿತಂತೆ ಸ್ಪರ್ಧೆ ನಡೆಯಲಿವೆ ಎಂದು ವಿವರಿಸಿದರು.

ಹೆಚ್ಚಿನ ವಿವರಗಳಿಗೆ ಮೊ.ಸಂ. 99456 33380 ಸಂಪರ್ಕಿಸಬಹುದು ಎಂದರು.

ಎಸ್‌ಜೆಸಿಇ ಕಾಲೇಜು ಪ್ರಭಾರ ಪ್ರಾಂಶುಪಾಲ ಡಾ.ಸಿ.ನಟರಾಜು, ಪ್ರಾಧ್ಯಾಪಕರಾದ ಡಾ.ಕೆ.ಎಂ.ಅನಿಲ್‌ಕುಮಾರ್, ಬಿ.ಎಸ್. ಆನಂದ್ ಸುದ್ದಿಗೋಷ್ಠಿಯಲ್ಲಿದ್ದರು.



ಜೈ ಭೀಮ್ ಜನಸ್ಪಂದನ ವೇದಿಕೆ ವತಿಯಿಂದ ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಅವರನ್ನು ಅಭಿನಂದಿಸಲಾಯಿತು. ವೇದಿಕೆ ಅಧ್ಯಕ್ಷ ಚೇತನ್ ಕಾಂತರಾಜು, ಉಪಾಧ್ಯಕ್ಷ ಶೇಖರ್, ನಾರಾಯಣಸ್ವಾಮಿ, ರಾಜಾ, ಶ್ರೀಕಾಂತ್, ಪ್ರಕಾಶ್, ಪುಟ್ಟ, ಗುರು, ಪ್ರತಾಪ್, ಲೋಹಿತ್, ರಮೇಶ್, ರಾಕೇಶ್, ನಿತಿನ್, ದರ್ಶನ್, ಸಾಗರ್, ಸುಮನ್, ನಂದನ್, ಶ್ರೀಧರ್‌ಮೂರ್ತಿ ಉಪಸ್ಥಿತರಿದ್ದರು.



ಮೊದಲ ದಿನ ಶಾಲೆಗೆ ಬಂದ ಎಂಎನ್‌ಕೆ ಬಾಲಬೋಧಿನಿ ಶಾಲೆಯ ಮಕ್ಕಳಿಗೆ ಶಾಸಕ ಟಿ.ಎಸ್.ಶ್ರೀವತ್ಸ ಹಾಗೂ ಮೇಯರ್ ಶಿವಕುಮಾರ್, ಸಿಹಿ, ಪುಸ್ತಕ, ಬ್ಯಾಗ್‌ಗಳನ್ನು ವಿತರಿಸಿದರು. ಶಾಲೆ ಆಡಳಿತ ಮಂಡಳಿಯಿಂದ ಶಾಸಕ ಹಾಗೂ ಮೇಯರ್ ಅವರನ್ನು ಹೂಗುಚ್ಛ ನೀಡಿ ಸ್ವಾಗತಿಸಲಾಯಿತು. ಈ ಸಂದರ್ಭದಲ್ಲಿ ಮುಖ್ಯೋಪಾಧ್ಯಾಯರು, ಶಿಕ್ಷಕರು, ಸ್ಥಳೀಯ ನಿವಾಸಿಗಳು ಉಪಸ್ಥಿತರಿದ್ದರು.

ಅನ್ನಭಾಗ್ಯಕ್ಕೆ ಕೇಂದ್ರ ಅಕ್ಕಿ ಕೊಡದೇ ಹೋದಲ್ಲಿ ಟೆಂಡರ್ ಕರೆಯುತ್ತೇವೆ

ಬೆಂಗಳೂರು, ಮೇ 31– ರಾಜ್ಯ ಸರಕಾರದ ಮಹತ್ವದ ಅನ್ನಭಾಗ್ಯ ಯೋಜನೆ ಸಂಬಂಧ ಕೇಂದ್ರ ಸರಕಾರ ಅಕ್ಕಿ ಕೊಡದೇ ಹೋದಲ್ಲಿ ಟೆಂಡರ್ ಕರೆಯುತ್ತೇವೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಮೊದಲು ಕೇಂದ್ರ ಸರಕಾರದ ಬಳಿ ಅಕ್ಕಿಯನ್ನು ಕೇಳುತ್ತೇವೆ. ಈಗ ಯಾವ ದರದಲ್ಲಿ ಅಕ್ಕಿ ಕೊಡುತ್ತಾರೆ ಅದೇ ದರದಲ್ಲಿ ನೀಡುವಂತೆ ಮನವಿ ಮಾಡುತ್ತೇವೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ಕೇಂದ್ರಕ್ಕೆ ಪತ್ರವನ್ನು ಬರೆಯುತ್ತಾರೆ. ಒಂದು ವೇಳೆ, ಕೇಂದ್ರ ಸರಕಾರ ಅಕ್ಕಿ ಕೊಡದೇ ಹೋದಲ್ಲಿ ಟೆಂಡರ್ ಕರೆಯುತ್ತೇವೆ ಎಂದರು.



ಕೇಂದ್ರ ಸರಕಾರ ಹೆಚ್ಚುವರಿ ಅಕ್ಕಿ ಕೊಡುವ ವಿಶ್ವಾಸ ಇದೆ. ಪ್ರತಿ ಕೆಜಿಗೆ 34 ರೂ. ವೆಚ್ಚ ತಗಲುತ್ತದೆ. ರಾಜ್ಯದಲ್ಲಿ 14,38,796 ಬಿಪಿಎಲ್ ಕಾರ್ಡ್ ಇದ್ದು, ಕೇಂದ್ರ ಸರ್ಕಾರ ಅಕ್ಕಿ ಕೊಡಲಿ ಬಿಡಲಿ ನಾವು ಟೆಂಡರ್ ಕರೆದು ಪ್ರತಿಯೊಬ್ಬರಿಗೆ 10 ಕೆಜಿ ಅಕ್ಕಿಯನ್ನು ಕೊಡುತ್ತೇವೆ. ಹೊಸ ಕಾರ್ಡ್‌ಗಳಿಗೆ ಬೇಡಿಕೆ ಬರುತ್ತಿದೆ. ಈ ನಿಟ್ಟಿನಲ್ಲಿ ಮಾನದಂಡಗಳನ್ನು ಆಧರಿಸಿ ಹೊಸ ಕಾರ್ಡ್ ವಿತರಣೆ ಮಾಡುತ್ತೇವೆ. ನಕಲಿ ಕಾರ್ಡ್‌ಗಳ ಬಗ್ಗೆ ಮುಂದಿನ ದಿನಗಳಲ್ಲಿ ನಿರ್ಧಾರ ಮಾಡುತ್ತೇವೆ ಎಂದು ಸಚಿವ ಕೆ.ಹೆಚ್.ಮುನಿಯಪ್ಪ ತಿಳಿಸಿದರು.



ಥಟ್ ಅಂತ ಉತ್ತರಿಸಿ ವಚನ ಸಾಹಿತ್ಯ ರಸಪ್ರಶ್ನೆ, ಬಹುಮಾನ ವಿಜೇತರು

ಮೈಸೂರು, ಮೇ 31– ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ವಚನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅಂತರ್ಜಾಲದ ಮೂಲಕ ನಡೆದ ಥಟ್ ಅಂತ ಉತ್ತರಿಸಿ 53ನೇ ವಚನ ಸಾಹಿತ್ಯ ರಸಪ್ರಶ್ನೆ ಕಾರ್ಯಕ್ರಮದಲ್ಲಿ ದಾವಣಗೆರೆಯ ಕುಸುಮ ಲೋಕೇಶ್ ಅವರು ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುವುದರ ಮೂಲಕ ಬಹುಮಾನಕ್ಕೆ ಭಾಜನರಾಗಿದ್ದಾರೆ

ಸುಟ್ಟ ಸ್ಥಿತಿಯಲ್ಲಿ ಮಹಿಳೆ ಶವ ಪತ್ತೆ

ಮೈಸೂರು, ಮೇ 31 (ಆರ್‌ಕೆ)– ಸುಟ್ಟು ಕರಕಲಾದ ಸ್ಥಿತಿಯಲ್ಲಿ ಅಪರಿಚಿತ ಮಹಿಳೆ ಮೃತದೇಹವೊಂದು ಇಲವಾಲ ಸಮೀಪ ಕಾವೇರಿ ಹಿನ್ನೀರಿನ ಸಾಗರಕಟ್ಟೆ ಬಳಿ ಮಂಗಳವಾರ ಸಂಜೆ ಪತ್ತೆಯಾಗಿದೆ.

ಸುಮಾರು 40ರಿಂದ 45 ವರ್ಷ ವಯಸ್ಸಿನ ಸಾಧಾರಣ ಮೈಕಟ್ಟು ಹೊಂದಿರುವ ಮಹಿಳೆಯನ್ನು ಬೆಂಕಿ ಹಚ್ಚಿ ಸುಟ್ಟು ಹಾಕಿ ಕೊಲೆಗೈದು ಮೃತದೇಹವನ್ನು ತಂದು ಸಾಗರಕಟ್ಟೆ ಬಳಿಯ ತಗ್ಗು ಪ್ರದೇಶದಲ್ಲಿ ಬಿಸಾಡಿ ಹೋಗಿದ್ದಾರೆ. ಸ್ಥಳಕ್ಕೆ ಧಾವಿಸಿದ ಇಲವಾಲ ಠಾಣೆ ಪೊಲೀಸರು ಮಹಜರು ನಡೆಸಿ, ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸ್ಥಳಾಂತರಿಸಿದ್ದಾರೆ. ಕೊಲೆಯಾದ ಮಹಿಳೆ ಯಾರು ಎಂಬುದು ತಿಳಿದುಬಂದಿಲ್ಲ.

ಮೃತದೇಹ ಪತ್ತೆಯಾದ ಸ್ಥಳದಲ್ಲಿ ಯಾವುದೇ ಸುಳಿವು ಲಭ್ಯವಾಗಿಲ್ಲದ ಕಾರಣ, ಆಕೆಯ ವಾರಸುದಾರರಿದ್ದಲ್ಲಿ ಅಥವಾ ಕಾಣೆಯಾಗಿದ್ದಾರೆಂದು ದೂರು ನೀಡಿದವರು 9480805031, 9480805046 ಅಥವಾ ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ ದೂ. 0821–2444800ಗೆ ಮಾಹಿತಿ ನೀಡುವಂತೆ ಪೊಲೀಸರು ತಿಳಿಸಿದ್ದಾರೆ.

ಬಸವ ಮಾರ್ಗ ಫೌಂಡೇಷನ್ ಸಂಸ್ಥಾಪಕ ಬಸವರಾಜು ಹುಟ್ಟುಹಬ್ಬ





ಮೈಸೂರು, ಮೇ 31(ಎಂಕೆ)– ಬಸವ ಮಾರ್ಗ ಫೌಂಡೇಷನ್ ಸಂಸ್ಥಾಪಕ, ಇಂಡಿಯನ್ ಟಿವಿ ಮುಖ್ಯಸ್ಥ ಹಾಗೂ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯಿಂದ 'ಸಂಯಮ ಪ್ರಶಸ್ತಿ'ಗೆ ಭಾಜನರಾದ ಎಸ್.ಬಸವರಾಜು ಅವರ ಹುಟ್ಟುಹಬ್ಬವನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿರುವ ಬಸವ ಮಾರ್ಗ ವ್ಯಸನ ಮುಕ್ತ ಕೇಂದ್ರದ ಆವರಣದಲ್ಲಿ ನಡೆದ ಸಂಭ್ರಮಾಚರಣೆಯಲ್ಲಿ 70ಕ್ಕೂ ಹೆಚ್ಚು ಕೇಕ್‌ಗಳನ್ನು ಕತ್ತರಿಸಿ ಹುಟ್ಟುಹಬ್ಬ ಆಚರಿಸಲಾಯಿತು. ಇದೇ ವೇಳೆ ಹುಟ್ಟುಹಬ್ಬ ಆಚರಣೆಯಲ್ಲಿ ಭಾಗವಹಿಸಿದ್ದ ಎಸ್.ಬಸವರಾಜು ಅವರ ಸಾವಿರಾರು ಮಂದಿ ಅಭಿಮಾನಿಗಳು, ಹುಟ್ಟುಹಬ್ಬ ಶುಭಕೋರಿದರಲ್ಲದೆ ಸಾಮಾಜಿಕ ಸೇವಾ ಕಾರ್ಯಗಳನ್ನು ಮುಂದುವರೆಸುವಂತೆ ಹಾರೈಸಿದರು. ಬಳಿಕ 21 ದಿನಗಳ ಕುಡಿತ ಬಿಡಿಸುವ ಶಿಬಿರಕ್ಕೆ ಚಾಲನೆ ನೀಡಲಾಯಿತು. 28ನೇ ಶಿಬಿರದಲ್ಲಿ ನೂರು ಮಂದಿ ಭಾಗವಹಿಸಿದ್ದು, ಮುಂದಿನ 21 ದಿನಗಳ ಕಾಲ ಕುಡಿತ ಬಿಡಿಸುವ ಕಾರ್ಯಚಟುವಟಿಕೆಗಳ ನಡೆಯಲಿವೆ. ಇಲ್ಲಿವರೆಗೆ ಸುಮಾರು 2,500 ಮಂದಿ ಶಿಬಿರದಲ್ಲಿ ಭಾಗವಹಿಸಿ ವ್ಯಸನಮುಕ್ತರಾಗಿ ಉತ್ತಮ ಜೀವನ ನಡೆಸುತ್ತಿದ್ದಾರೆ ಎಂದು ಇಂಡಿಯನ್ ಟಿವಿ ವ್ಯವಸ್ಥಾಪಕ ನಿರ್ದೇಶಕ ವೆಂಕಟೇಶ್‌ಕುಮಾರ್ ಮಾಹಿತಿ ನೀಡಿದರು.

ಎಂಎಸ್‌ಕೆಬಿ ಇನ್‌ಫ್ರಾ ಪ್ರಾಪರ್ಟೀಸ್ ಪ್ರೈವೆಟ್ ಲಿಮಿಟೆಡ್ ಹಾಗೂ ಇಂಡಿಯನ್ ಟಿವಿ ಸಿಇಓ ಎಸ್.ರಾಜು, ಶ್ರೀ ಕಾವೇರಿ ಫೈನಾನ್ಸ್ ಮಾಲೀಕರು ಹಾಗೂ ಬಸವ ಮಾರ್ಗ ಫೌಂಡೇಷನ್ ಟ್ರಸ್ಟಿ ಸಿ.ಪ್ರಕಾಶ್, ಜೆ.ಸಿ.ಎಂಟರ್ ಪ್ರೈಸಸ್ ಮಾಲೀಕ ಸಿ.ಕೃಷ್ಣ, ಅಮಿತ್, ಪ್ರೀತಂ, ಬಸವ ಮಾರ್ಗ ಫೌಂಡೇಷನ್ ಮ್ಯಾನೇಜರ್ ಮಹೇಶ್ ಇದ್ದರು.

ಸಮಾಜಪರ ಚಿಂತನೆ ಪಾಲಿಸಿದ ಮಹನೀಯರು

ಡಾ.ವಿಜಯಾದಬ್ಬೆ ಸ್ಮರಣಾರ್ಥ ಕಾವ್ಯ, ಕಥಾ ಕಮ್ಮಟದಲ್ಲಿ ಡಾ.ಕಾಳೇಗೌಡ ನಾಗವಾರ ಅಭಿಮತ

ಮೈಸೂರು,ಮೇ 31(ಪಿಎಂ)– ತಮ್ಮಲ್ಲಿದ್ದ ಸಮಾಜಪರ ಚಿಂತನೆಯನ್ನು ಅಕ್ಷರಶಃ ಪಾಲನೆ ಮಾಡಿ ಅತ್ಯಂತ ಪ್ರಾಮಾಣಿಕವಾಗಿ ಬದುಕಿದವರು ಮಹಿಳಾಪರ ಚಿಂತಕರೂ ಆದ ಸಾಹಿತಿ ಡಾ.ವಿಜಯಾದಬ್ಬೆ ಎಂದು ಪ್ರಗತಿಪರ ಚಿಂತಕ ಡಾ.ಕಾಳೇಗೌಡ ನಾಗವಾರ ಸ್ಮರಿಸಿದರು.

ಮೈಸೂರಿನ ಗಂಗೋತ್ರಿ ಬಡಾವಣೆಯ ಯೂತ್ ಹಾಸ್ಟೆಲ್ ಸಭಾಂಗಣದಲ್ಲಿ ಸಮತಾ ಅಧ್ಯಯನ ಕೇಂದ್ರದ ವತಿಯಿಂದ ಡಾ.ವಿಜಯಾದಬ್ಬೆ ಸ್ಮರಣಾರ್ಥ ನಡೆಸಿದ ಕಾವ್ಯ ಮತ್ತು ಕಥಾ ಸ್ಪರ್ಧೆಯ ಬಹುಮಾನ ವಿಜೇತರಿಗಾಗಿ ಬುಧವಾರ ಹಮ್ಮಿಕೊಂಡಿದ್ದ ಕಾವ್ಯ ಮತ್ತು ಕಥಾಕಮ್ಮಟ ಕಾರ್ಯಕ್ರಮಕ್ಕೆ ಡಾ.ವಿಜಯಾದಬ್ಬೆ ಅವರ ಕುರಿತ ಸಾಕ್ಷ್ಯಚಿತ್ರ (25 ನಿಮಿಷ ಅವಧಿ) ಬಿಡುಗಡೆಗೊಳಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಡಾ.ವಿಜಯಾದಬ್ಬೆ ಅವರು ಆರೋಗ್ಯಕರ ಸಮಾಜದ ಕನಸು ಕಂಡವರು. ಅದಕ್ಕೆ ಪೂರಕವಾಗಿ ಅತ್ಯಂತ ಪ್ರಾಮಾಣಿಕವಾಗಿ ಬದುಕಿದವರು. ನನ್ನ ಸಹೋದ್ಯೋಗಿ ಆಗಿದ್ದ ಅವರು ಬಹಳ ಮೌನ ಸ್ವಭಾವದವರು. ತಮ್ಮಲ್ಲಿದ್ದ ಸಮಾಜಪರವಾದ ಚಿಂತನೆಯನ್ನು ಅಕ್ಷರಶಃ ಪಾಲನೆ ಮಾಡಿದರು. ಅವರ ಬಗ್ಗೆ ನನಗೆ ಅಪಾರ ಅಭಿಮಾನ. ಹಾ.ಮಾ.ನಾಯಕರು ಇವರ ಬದ್ಧತೆ, ಸಾಮಾಜಿಕ ಕಳಕಳಿ ಹಿನ್ನೆಲೆಯಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಾಪಕರಾಗಿ ಆಯ್ಕೆ ಮಾಡಿದರು ಎಂದು ಹೇಳಿದರು.

'ಪ್ರವಾಸಿ ಕಂಡ ಇಂಡಿಯಾ' ಎಂಬ ಸಂಪುಟಗಳಲ್ಲಿ ಮಹಿಳೆಯರನ್ನು ಸುಡುವ ದೃಶ್ಯಾವಳಿ ಕಣ್ಣಿಗೆ ಕಟ್ಟುತ್ತದೆ. ಆ ಮೂಲಕ ಸಂಪ್ರದಾಯದ ಹೆಸರಿನಲ್ಲಿ ಮಹಿಳೆಯರ ಮೇಲೆ ನಡೆಯುವ ಶೋಷಣೆ ಇಲ್ಲಿ ತೆರೆದುಕೊಳ್ಳುತ್ತದೆ. ಹೆಣ್ಣು ಮಕ್ಕಳ ಸಮಸ್ಯೆಗಳ ಬಗ್ಗೆ ಲೇಖಕಿ ರೂಪ ಹಾಸನ ಅವರ ಪುಸ್ತಕವೊಂದು ಇತ್ತೀಚೆಗೆ ಹೊರ ಬಂದಿದ್ದು, ಪುಸ್ತಕ ಓದಿದರೆ ಆಳವಾದ ಅಧ್ಯಯನ ನಡೆಸಿರುವುದು ಅರಿವಿಗೆ ಬರುತ್ತದೆ. ಪ್ರಸ್ತುತ ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ಕೊಟ್ಟವರ ವಿಚಾರದಲ್ಲಿ ಮೌನವಾಗಿದೆ ಎಂದು ಅವರು ಬೇಸರ ವ್ಯಕ್ತಪಡಿಸಿದರು.





ಮೈಸೂರಿನ ಗಂಗೋತ್ರಿ ಬಡಾವಣೆಯ ಯೂತ್ ಹಾಸ್ಟೆಲ್ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕಾವ್ಯ, ಕಥಾಕಮ್ಮಟ ಕಾರ್ಯಕ್ರಮದಲ್ಲಿ ಪ್ರಗತಿಪರ ಚಿಂತಕ ಡಾ.ಕಾಳೇಗೌಡ ನಾಗವಾರ ಮಾತನಾಡಿದರು.

ಕೊಡಗಿನ ಗೌರಮ್ಮ ಬಹಳ ಅಪರೂಪದ ಮಹಿಳಾ ಸಾಹಿತಿ. ಗಾಂಧೀಜಿಯವರು ಕೇವಲ ಶ್ರೀಮಂತರ ಮನೆ ಭೇಟಿ ನೀಡುವುದಲ್ಲ, ಬಡವರ ಮನೆಗೂ ಬರಬೇಕು ಎಂದು ಹೇಳಿದ್ದವರು. ಗಾಂಧೀಜಿಯವರ ಹರಿಜನೋದ್ಧಾರ ನಿಧಿಗೆ ತಮ್ಮ ಚಿನ್ನಾಭರಣಗಳನ್ನು ದಾನವಾಗಿ ನೀಡಿದರು. ಇವರು ಅತ್ಯುತ್ತಮ ಕಥೆಗಳನ್ನು ಬರೆದವರು. ನಂಜನಗೂಡು ತಿರುಮಲಾಂಬ, ಎಂ.ಕೆ.ಇಂದಿರಾ ಕೂಡ ಆ ಕಾಲದಲ್ಲಿ ಸಾಹಿತ್ಯದಲ್ಲಿ ತೊಡಗಿದ್ದ ಬಹುದೊಡ್ಡ ಮಹಿಳಾ ಲೇಖಕರು ಎಂದು ಹೇಳಿದರು. ಬಳಿಕ ಕಾವ್ಯ ಮತ್ತು ಕಥಾ ಕಮ್ಮಟ ಕಾರ್ಯಕ್ರಮ ನಡೆಯಿತು. ಸಮತಾ ಅಧ್ಯಯನ ಕೇಂದ್ರದ ಅಧ್ಯಕ್ಷೆ ಡಾ.ಸಬಿಹಾ ಭೂಮಿಗೌಡ, ಉಪಾಧ್ಯಕ್ಷೆ ಬಿ.ಸಿ.ಮಂಜುಳಾ, ಕಾರ್ಯದರ್ಶಿ ಆರ್.ಸುನಂದಮ್ಮ, ಖಜಾಂಚಿ ವಿಜಯಾ ರಾವ್, ಸಹ ಕಾರ್ಯದರ್ಶಿ ಪಿ.ಓಂಕಾರ್ ಮತ್ತಿತರರು ಹಾಜರಿದ್ದರು.

ಪ್ರಶಸ್ತಿ ಪ್ರದಾನ ಸಮಾರಂಭ

ಇಂದು (ಜೂ.1ರಂದು) ಬೆಳಗ್ಗೆ 10ಕ್ಕೆ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಕಾವ್ಯ ಮತ್ತು ಕಥಾ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ, ಡಾ.ವಿಜಯಾದಬ್ಬೆ ಸಾಹಿತ್ಯ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಕೇರಳದಲ್ಲಿ ಒಂದೇ ದಿನ ಬರೋಬ್ಬರಿ 11,801 ಸರ್ಕಾರಿ ನೌಕರರ ನಿವೃತ್ತಿ

ತಿರುವನಂತಪುರ: ದಾಖಲೆಯ 11,801 ಕೇರಳ ಸರ್ಕಾರಿ ಅಧಿಕಾರಿಗಳು (ನೌಕರರೂ ಒಳಗೊಂಡಂತೆ) ಒಂದೇ ದಿನ ನಿವೃತ್ತರಾಗಿದ್ದಾರೆ. ರಾಜ್ಯದಲ್ಲಿ ಸರ್ಕಾರಿ ನೌಕರರು 56 ವರ್ಷಕ್ಕೆ ನಿವೃತ್ತರಾಗುತ್ತಾರೆ. ರಾಜ್ಯ ಸರ್ಕಾರಿ ಅಧಿಕಾರಿಗಳ ಒಟ್ಟು ಸಂಖ್ಯೆ ಸುಮಾರು 5 ಲಕ್ಷದಷ್ಟಿದೆ. ಜೂನ್‌ನಲ್ಲಿ ಪ್ರಾರಂಭವಾಗುವ ಶೈಕ್ಷಣಿಕ ವರ್ಷದಲ್ಲಿ ಶಾಲಾ ದಾಖಲಾತಿ ಸಂದರ್ಭದಲ್ಲಿ ಪ್ರವೇಶ ಪಡೆಯಲು ಅನುವು ಮಾಡಿಕೊಡುವುದಕ್ಕಾಗಿ ಜನ್ಮ ದಿನಾಂಕವನ್ನು ಸರಿಹೊಂದಿಸಲಾಗಿದ್ದೇ ಇಷ್ಟೊಂದು ಸಂಖ್ಯೆಯಲ್ಲಿ ಅಧಿಕಾರಿಗಳು, ನೌಕರರು ಒಂದೇ ದಿನ ನಿವೃತ್ತರಾಗಲು ಮುಖ್ಯ ಕಾರಣ ಎನ್ನಲಾಗಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ನಿವೃತ್ತಿ ವಯಸ್ಸಿನ ವ್ಯಾಪ್ತಿಗೆ ಬರುವ ಸರ್ಕಾರಿ ಅಧಿಕಾರಿಗಳ ಒಟ್ಟು ಸಂಖ್ಯೆ 21,537 ಆಗಿದ್ದು, ಅವರಲ್ಲಿ 11,801 ಮಂದಿ ನಿವೃತ್ತರಾಗುತ್ತಿದ್ದಾರೆ. ನಿವೃತ್ತಿಯಾಗಲಿರುವವರಲ್ಲಿ ರಾಜ್ಯದ 2ನೇ ಮಹಿಳಾ ಐಪಿಎಸ್ ಅಧಿಕಾರಿ ಡಿಜಿಪಿ ಬಿ.ಎಸ್.ಸಂಧ್ಯಾ ಸೇರಿದ್ದಾರೆ. ಇವರು ಅಗ್ನಿಶಾಮಕ ಮತ್ತು ರಕ್ಷಣಾ ಸೇವೆಗಳ ಮುಖ್ಯಸ್ಥರ ಹುದ್ದೆಯಿಂದ ನಿವೃತ್ತರಾಗುತ್ತಿದ್ದಾರೆ.

ವಿಶ್ವ ತಂಬಾಕುರಹಿತ ದಿನ: ಹೋಪ್–ಎ–ಥಾನ್ ನಡಿಗೆ ಮೂಲಕ ಜಾಗೃತಿ





ಮೈಸೂರು,ಮೇ 31(ಎಂಟಿವೈ)– ವಿಶ್ವ ತಂಬಾಕುರಹಿತ ದಿನದ ಅಂಗವಾಗಿ ಹೆಚ್‌ಸಿಜಿ–ಭಾರತ್ ಕ್ಯಾನ್ಸರ್ ಆಸ್ಪತ್ರೆ ಆಯೋಜಿಸಿದ್ದ 'ಹೋಪ್–ಎ–ಥಾನ್' 3 ಕಿ.ಮೀ ನಡಿಗೆಯಲ್ಲಿ ಸಾವಿರಕ್ಕೂ ಹೆಚ್ಚು ಮಂದಿ ಪಾಲ್ಗೊಂಡು ಜಾಗೃತಿ ಮೂಡಿಸಿದರು.

ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗ ಬುಧವಾರ ಮುಂಜಾನೆ ಆಯೋಜಿಸಿದ್ದ 3 ಕಿ.ಮೀ ನಡಿಗೆಯಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು, ಸಾರ್ವಜನಿಕರು ಪಾಲ್ಗೊಂಡು 'ಮೈಸೂರನ್ನು ತಂಬಾಕು ಮುಕ್ತವಾಗಿಸುವ ಬಗ್ಗೆ ಪ್ರತಿಜ್ಞೆ ಸ್ವೀಕರಿಸಿದರು.


ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್ ಮಾತನಾಡಿ, ದೇಶದ ಜನಸಂಖ್ಯೆಯಲ್ಲಿ ಶೇ.27ರಿಂದ 30ರಷ್ಟು ಮಂದಿ ತಂಬಾಕು ಸೇವನೆ ಮಾಡುತ್ತಿರುವುದು ಪತ್ತೆಯಾಗಿದೆ. ಅಂದಾಜು 30 ಕೋಟಿ ಜನರು ತಂಬಾಕು ಸೇವನೆ ಹಾಗೂ ತಂಬಾಕು ಉತ್ಪನ್ನಗಳನ್ನು ಬಳಸುತ್ತಿದ್ದಾರೆ. ತಂಬಾಕು ಸೇವನೆಯಿಂದ ಪ್ರತಿ ವರ್ಷ 60 ಲಕ್ಷ ಮಂದಿ ಸಾವನ್ನಪ್ಪುತ್ತಿದ್ದಾರೆ. ನಾವು ಕಳೆದ 5 ವರ್ಷಗಳ ಅಂಕಿ ಅಂಶವನ್ನು ತೆಗೆದುಕೊಂಡರೆ, ಧೂಮಪಾನ ಮಾಡುವವರು ಹಾಗೂ ತಂಬಾಕು ಉತ್ಪನ್ನಗಳ ಬಳಸುವವರ ಸಂಖ್ಯೆಯಲ್ಲಿ ಶೇ.4ರಿಂದ 5ರಷ್ಟು ಕ್ಷೀಣಿಸಿರುವುದು ಕಂಡುಬಂದಿದೆ. ಇದು ಸಮಾಧಾನಕರ ಸಂಗತಿಯಾಗಿದ್ದು, ಜನರಲ್ಲಿ ಆರೋಗ್ಯ ಪ್ರಜ್ಞೆ ಮೂಡುತ್ತಿರುವುದನ್ನು ಈ ವರದಿ ತೋರಿಸುತ್ತಿದೆ. ಯುವ ಪೀಳಿಗೆಯನ್ನು ತಂಬಾಕಿನಿಂದ ಮುಕ್ತವಾಗಿಸಲು ಜಾಗೃತಿ ಮೂಡಿಸುವ ಅನಿವಾರ್ಯತೆ ಇದೆ ಎಂದರು.

ಹೆಚ್‌ಸಿಜಿ ಭಾರತ್ ಆಸ್ಪತ್ರೆ ಕ್ಯಾನ್ಸರ್ ಆಸ್ಪತ್ರೆಯ ನಿರ್ದೇಶಕಿ ಅಂಜಲಿ ಅಜಯ್ ಕುಮಾರ್ ಮಾತನಾಡಿ, ತಂಬಾಕು ಕೃಷಿಯಲ್ಲಿ ತೊಡಗಿರುವ ರೈತರ ಮೇಲೆ ಹೆಚ್‌ಸಿಜಿ–ಬಿಹೆಚ್‌ಐಒ ಸಂಸ್ಥೆ ಸಂಶೋಧನೆ ನಡೆಸುತ್ತಿದೆ. ಜಾಗೃತಿಗಾಗಿ ನಡೆಸುತ್ತಿರುವ ನಡಿಗೆಯಲ್ಲಿ ಪಾಲ್ಗೊಂಡಿರುವ ಪ್ರತಿಯೊಬ್ಬರು ಧೂಮಪಾನ ಮತ್ತು ತಂಬಾಕು ಸೇವನೆಯನ್ನು ನಿಲ್ಲಿಸಲು ಹಾಗೂ ತಂಬಾಕು ಮುಕ್ತ ನಗರಗಳ ಪಟ್ಟಿಯಲ್ಲಿ ಮೈಸೂರು ನಗರವನ್ನು ಮೊದಲ ಸ್ಥಾನಕ್ಕೇರಿಸಲು ಸಹಕರಿಸಬೇಕು. ಈಗಾಗಲೇ ಮೈಸೂರು ನಗರ ದೇಶದ 2ನೇ ಸ್ವಚ್ಛ ನಗರವಾಗಿದೆ ಎಂದರು.

ಹುಣಸೂರಿನಲ್ಲಿ ತಂಬಾಕು ಬೆಳೆಯುತ್ತಿದ್ದ 50 ರೈತರ ಮನವೊಲಿಸಿ ಇನ್ನು ಮುಂದೆ ತಂಬಾಕು ಬೆಳೆಯದಂತೆ ಮನವರಿಕೆ ಮಾಡಿಕೊಡಲಾಗಿದೆ. ಅದಕ್ಕೆ ಪರ್ಯಾಯವಾಗಿ ಶ್ರೀಗಂಧದ ಗಿಡ ಬೆಳೆಯಲು ಪ್ರೇರಣೆ ನೀಡಲಾಗಿದೆ. ಇದು ದೇಶದಲ್ಲೇ ಮೊದಲ ಪ್ರಯತ್ನವಾಗಿದೆ. ಪರ್ಯಾಯ ಬೆಳೆಯಾಗಿ ರೈತರು ಶ್ರೀಗಂಧದೊಂದಿಗೆ ಪೇರಲ, ಸಪೋಟ ಹಾಗೂ ಇನ್ನಿತರ ಹಣ್ಣಿನ ಬೆಳೆ ಬೆಳೆಯಲು ಉತ್ತೇಜಿಸಲಾಗುತ್ತಿದೆ. ಹುಣಸೂರು ಮತ್ತು ಸುತ್ತಮುತ್ತಲಿನ 50 ಎಕರೆ ಪ್ರದೇಶದಲ್ಲಿ 15 ಸಾವಿರ ಶ್ರೀಗಂಧದ ಗಿಡ, ವಿವಿಧ ಬಗೆಯ 8 ಸಾವಿರ ಹಣ್ಣಿ ಗಿಡಗಳನ್ನು ರೈತರಿಗೆ ಉಚಿತವಾಗಿ ನೀಡಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಂಗವಾಗಿ ವಿವಿಧ ಸ್ಪರ್ಧೆ ಆಯೋಜಿಸಲಾಗಿತ್ತು. ಅದರಲ್ಲಿ ಅತ್ಯುತ್ತಮ ಸ್ಕಿಟ್ ಪ್ರಶಸ್ತಿಯನ್ನು ಸೇಂಟ್ ಜೋಸೆಫ್ ಕಾಲೇಜಿನ ವಿದ್ಯಾರ್ಥಿಗಳು ಪಡೆದುಕೊಂಡರು. ಅತ್ಯುತ್ತಮ ಸ್ಲೋಗನ್ ಪ್ರಶಸ್ತಿಯನ್ನು ಟೆರೇಷಿಯನ್ ಕಾಲೇಜಿನ ಎಂ.ಸಂಜನಾ ಮತ್ತು ಬಿ.ಎಂ.ಪೂಜಾ ಪಡೆದರು. ಈ ಸಂದರ್ಭದಲ್ಲಿ ಮೈಸೂರು ಜಿಮ್ ಮತ್ತು ಫಿಟ್ನೆಸ್ ಮಾಲೀಕರ ಸಂಘದ ಅಧ್ಯಕ್ಷ ಎಂ.ಎಸ್.ಹರ್ಷ, ಭಾರತ್ ಕ್ಯಾನ್ಸರ್ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ಡಾ.ಮಾಧವಿ, ನಿರ್ಮಲಾ ಕೆ.ಮೂರ್ತಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

1.6.2023 ಗುರುವಾರ, ಮಳೆ ನಕ್ಷತ್ರ: ರೋಹಿಣಿ, 25.05.2023 ರಿಂದ 07.06.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಸ್ವಾತಿ, ರಾಹುಕಾಲ: ಮಧ್ಯಾಹ್ನ 1.30ರಿಂದ 3ರವರೆಗೆ

■ **ಸಮತಾ ಅಧ್ಯಯನ ಕೇಂದ್ರ :** ಡಾ. ವಿಜಯಾದಬ್ಬೆ ಸಾಹಿತ್ಯ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಕಾವ್ಯ ಮತ್ತು ಕಥಾಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ, ಪ್ರಾಸ್ತಾವಿಕ ನುಡಿ : ಸಮತಾ ಅಧ್ಯಯನ ಕೇಂದ್ರದ ನಿಕಟಪೂರ್ವ ಅಧ್ಯಕ್ಷೆ ಶ್ರೀಮತಿ ಎಂ.ಎನ್. ಸುಮನ, ಮುಖ್ಯ ಅತಿಥಿಗಳು : ಹಿರಿಯ ಸಂಶೋಧಕರಾದ ಡಾ. ಟಿ.ಎನ್. ನಾಗರತ್ನ, ಸ್ತ್ರೀವಾದಿ ಚಿಂತಕರಾದ ಡಾ. ಎನ್. ಗಾಯತ್ರಿ, ಪ್ರಶಸ್ತಿ ಪುರಸ್ಕೃತರು : ಹಿರಿಯ ಸಂಶೋಧಕರಾದ ಶ್ರೀಮತಿ ಬಿ.ಎಂ. ರೋಹಿಣಿ, ಅಧ್ಯಕ್ಷತೆ : ಕೇಂದ್ರದ ಅಧ್ಯಕ್ಷೆ ಡಾ. ಸಬಿಹಾ ಭೂಮಿಗೌಡ, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರದ ಆವರಣ, ಬೆಳಗ್ಗೆ 10ಕ್ಕೆ.

■ **ಅಭಿವೃದ್ಧಿ :** ಸಿಲ್ಕ್ ಇಂಡಿಯಾ–2023, ಸಿಲ್ಕ್, ಕಾಟನ್ ಮತ್ತು ಇತರ ಸೀರೆಗಳ ಮಾರಾಟ ಮತ್ತು ಪ್ರದರ್ಶನ, ಸ್ಥಳ: ಸದರನ್ ಸ್ಟಾರ್, ವಿನೋಬಾ ರಸ್ತೆ, ಬೆಳಗ್ಗೆ 10.30ರಿಂದ ರಾತ್ರಿ 8.30 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸಕ್ಕರೆ ಕಾಯಿಲೆಯಿಂದಾದ ಕಿಡ್ನಿ ತೊಂದರೆಗೆ ತಪಾಸಣಾ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಸ್ಕೂಲ್ ಆಫ್ ಲೈಫ್ ಸೈನ್ಸಸ್ :** ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು, ಉದ್ಘಾಟನೆ : ಏಕಲವ್ಯ ಪ್ರಶಸ್ತಿ ವಿಜೇತರಾದ ಡಾ. ಎಂ.ಆರ್. ಸವಿತಾ ಪ್ರಶಾಂತ್, ಅತಿಥಿಗಳು : ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಡೀನ್ ಡಾ. ವಿಶಾಲ್ ಕುಮಾರ್ ಗುಪ್ತಾ, ಡಾ. ಕೆ.ಎ. ರವೀಶ, ಸ್ಥಳ: ಜೆಎಸ್‌ಎಸ್ ಎಹೆಚ್‌ಇಆರ್ ಕ್ರೀಡಾಂಗಣ, ಬೆಳಗ್ಗೆ 10ಕ್ಕೆ.

■ **ಮೈಸೂರು ಕನ್ನಡ ವೇದಿಕೆ :** ಕಾಯಕಯೋಗಿ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಶಾಸಕ ಹರೀಶ್‌ಗೌಡ, ಪ್ರಧಾನ ಭಾಷಣ: ಸಹಾಯಕ ಪೊಲೀಸ್ ಆಯುಕ್ತ ಪರಶುರಾಮಪ್ಪ, ಸನ್ಮಾನಿಸುವವರು: ಎ.ಪಿ.ನಾಗೇಶ್, ಪ್ರಾಸ್ತಾವಿಕ ನುಡಿ: ನಾಲಾಬೀದಿ ರವಿ, ಅಧ್ಯಕ್ಷತೆ : ವೇದಿಕೆ ಅಧ್ಯಕ್ಷ ಎಸ್. ಬಾಲಕೃಷ್ಣ, ಸ್ಥಳ: ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನ, ಸುಬ್ಬರಾಯನಕೆರೆ, ಬೆಳಗ್ಗೆ 11.30ಕ್ಕೆ.

■ **ಚಂಪಕ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್ :** ಚಂಪಕ ಕಲಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಪ್ರಶಸ್ತಿ ಪುರಸ್ಕೃತರು: ವಿದುಷಿ ನಂದಿನಿ ಈಶ್ವರ್ (ನೃತ್ಯಕಲೆ), ರಘುಪತಿ ಭಟ್ (ಗಂಜೀಫ ಚಿತ್ರಕಲೆ), ಅಡ್ಡಂಡ ಸಿ. ಕಾರಿಯಪ್ಪ (ನಾಟಕ) ಹಾಗೂ ಯೋಗಾಚಾರ್ಯ ಸುದೇಶ್ ಚಂದ್ (ಯೋಗ), ಮುಖ್ಯ ಅತಿಥಿಗಳು: 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕ ಕೆ.ಬಿ.ಗಣಪತಿ, ಮಾಜಿ ಶಾಸಕ ಸಿ.ಎಸ್.ನಿರಂಜನ್‌ಕುಮಾರ್, ನಾದಬ್ರಹ್ಮ ಸಂಗೀತ ಸಭಾ ಅಧ್ಯಕ್ಷ ಟಿ.ಆರ್.ಹರೀಶ್, ವಿದುಷಿ ನಾಗಲಕ್ಷ್ಮಿ ನಾಗರಾಜನ್ ಅವರಿಂದ ಪದ್ಮಭೂಷಣ ಡಿ.ವಿ.ಗುಂಡಪ್ಪನವರ ಶ್ರೀ ಕೃಷ್ಣಲೀಲಾ ವಿಭೂತಿ ಗೀತ ನಾಟಕ ಪ್ರದರ್ಶನ, ವಿದುಷಿ ಚೇತನ ನಾಗರಾಜ್–ಗಾಯನ, ವಿದ್ವಾನ್ ಕೆ.ಎಸ್.ಗಣೇಶ್–ಕೊಳಲು, ವಿದ್ವಾನ್ ಸಾಯಿ ವಂಶಿ–ಮೃದಂಗ, ವಿದುಷಿ ಅನ್ನಪೂರ್ಣ ನಾಗೇಂದ್ರ–ಗಮಕ ಗಾಯನ, ಶ್ರೀಮತಿ ಹೇಮಾ ರಮೇಶ್–ಸಂಭಾಷಣೆ, ಸ್ಥಳ: ಚಂಪಕ ಸಭಾಂಗಣ, ಚಂಪಕ ಅಕಾಡೆಮಿ, ರಾಮಕೃಷ್ಣನಗರ, ಸಂಜೆ 5.30ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿಗಳ ಬೃಂದಾವನ ಸನ್ನಿಧಾನ :** ಶ್ರೀ ರಾಘವೇಂದ್ರ ಸ್ವಾಮಿಗಳ 76ನೇ ಬೃಂದಾವನ ಪ್ರತಿಷ್ಠಾಪನಾ ವರ್ಧಂತ್ಯುತ್ಸವ ಜ್ಞಾನಸತ್ರ, ಪಂಡಿತ್ ಶ್ರೀ ರಘೋತ್ತಮಾಚಾರ್ಯ ನಾಗಸಂಪಿಗೆ, ಬಾಗಲಕೋಟೆ ಅವರಿಂದ ಶ್ರೀಮದ್ ರಾಮಾಯಣ ಪ್ರವಚನ (ಬಾಲಕಾಂಡ), ಸ್ಥಳ: ತತ್ವಜ್ಞಾನ ಮಂದಿರ, ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಆವರಣ, ಕೃಷ್ಣಮೂರ್ತಿಪುರಂ, ಸಂಜೆ 6ಕ್ಕೆ.

■ **ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಮೈಸೂರು ಸೆಂಟರ್ :** ವಿಶ್ವ ಪರಿಸರ ಮಾಸಾಚರಣೆ, ಮುಖ್ಯ ಅತಿಥಿಗಳು: ಸಂರಕ್ಷಣಾ ಜೀವಶಾಸ್ತ್ರಜ್ಞ ಸಂಜಯ್ ಗುಬ್ಬಿ, ಗೌರವ ಅತಿಥಿಗಳು : ಉಪ ಅರಣ್ಯ ಸಂರಕ್ಷಣಾಧಿಕಾರಿ, ಮೈಸೂರು ವಿಭಾಗ ಡಾ. ಕೆ.ಎನ್. ಬಸವರಾಜ, ಸ್ಥಳ: ಎಂಬಿಸಿಟಿ ಸಭಾಂಗಣ, ಅಕ್ಕಮಹಾದೇವಿ ರಸ್ತೆ, ವಿಶ್ವೇಶ್ವರನಗರ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.30 ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ ಮೈಸೂರಿನ ಯೋಗ ವಿದ್ಯಾ ಪರಂಪರೆ–ಬಾನುಲಿ ಸರಣಿ, ಪ್ರಸ್ತುತಿ–ಡಾ.ಎ.ಎಸ್.ಚಂದ್ರಶೇಖರ್, 6.35 ಹಾಗೂ ಸಂಜೆ 6.10ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ–ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, ಪ್ರಸ್ತುತಿ–ಡಾ.ಶ್ರೀರಾಂಭಟ್, 8.30 ಹಾಡು ಹೇಳಿದ ಕಥೆ, ಪ್ರಸ್ತುತಿ–ಮೈಸೂರು ಉಮೇಶ್, 9.30 "VVCED ಮುಕ್ತ ದಿನ, ಮಾತುಕತೆ. ಭಾಗವಹಿಸುವವರು ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಗ್ ಕಾಲೇಜಿನ ಪ್ರಾಂಶುಪಾಲರಾದ ಡಾ.ಸದಾಶಿವೇಗೌಡ, ಸಹಪ್ರಾಧ್ಯಾಪಕರಾದ ಡಾ. ಸುಧೀಂದ್ರ ಕೆ.ವಿ. ಹಾಗೂ ಡಾ.ಮಧುಸೂಧನ ಎಂ.ಎಸ್..ಅವರೊಂದಿಗೆ ಪಾಲ್ಗೊಳ್ಳುವವರು ಬೇದ್ರೆ ಮಂಜುನಾಥ್, 10.00 ತಿಟ್ಟೇ ಕೃಷ್ಣ ಅಯ್ಯಂಗಾರ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 1.20 ವಿಶ್ವ ಯೋಗ ದಿನದ ಸಂಬಂಧದ ಸರಣಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 4.00 ಜನಪದ ಸಂಗೀತ, 4.30 ಸಂಧ್ಯಾರಾಗ, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ– ನಮ್ಮ ಪರಿಸರ–ಕುರಿತು ಖ್ಯಾತ ವನ್ಯಜೀವಿ ಚಿತ್ರ ನಿರ್ಮಾಪಕರಾದ ಕೃಪಾಕರ್ ಹಾಗೂ ಸೇನಾನಿ ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುವವರು ಜಿ. ಶಾಂತಕುಮಾರ್, 8.00 ಯುವವಾಣಿ, 9.30 ಕನ್ನಡ ಭಾರತಿ, 10.00 ನಾಟಕ, 10.30 ಸವಿನೆನಪು

ಒಂದು ದಿನ ಮಾತ್ರವಲ್ಲ ವರ್ಷದ 365 ದಿನವೂ ತಂಬಾಕುರಹಿತ ದಿನವಾಗಬೇಕು: ಡಿಸಿ

ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಾಲಯ ಮುಂಭಾಗ ವಿಶ್ವ ತಂಬಾಕುರಹಿತ ದಿನಾಚರಣೆ





ಮೈಸೂರು, ಮೇ 31(ಎಂಟಿವೈ)– ಪ್ರತಿ ವರ್ಷ ಅರಣ್ಯ ಇಲಾಖೆಗೆ ಸೇರಿದ 2 ಲಕ್ಷ ಹೆಕ್ಟೇರ್ ಭೂಮಿಯನ್ನು ತಂಬಾಕು ಬೆಳೆಯಲು ಪರಿವರ್ತನೆ ಮಾಡಲಾಗುತ್ತಿದ್ದು, ಪರಿಸ್ಥಿತಿ ಹೀಗೆ ಮುಂದುವರೆದರೆ ಮುಂದಿನ ದಿನಗಳಲ್ಲಿ ಆಹಾರ ಪದಾರ್ಥಗಳ ಕೊರತೆ ಉಂಟಾಗಬಹುದು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಜಿ.ದಿನೇಶ್ ವಿಷಾದಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸರ್ವೇಕ್ಷಣಾ ಘಟಕ, ಜಿಲ್ಲಾ ತಂಬಾಕು ನಿಯಂತ್ರಾ ಕೋಶ, ಜಿಲ್ಲಾ ಎನ್‌ಸಿಡಿ ಕೋಶ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಅರಮನೆ ಮುಂಭಾಗದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗ ಆಯೋಜಿಸಿದ್ದ 'ವಿಶ್ವ ತಂಬಾಕು ರಹಿತ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ, ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ತಂಬಾಕು ಉತ್ಪಾದನೆ ಹಾಗೂ ತಂಬಾಕು ಉತ್ಪನ್ನಗಳ ಸೇವನೆಯೂ ಹೆಚ್ಚಾಗುತ್ತಿದೆ. ಸರ್ಕಾರ ಹಾಗೂ ವಿವಿಧ ಇಲಾಖೆಗಳ ವತಿಯಿಂದ ಎಷ್ಟೇ ಜಾಗೃತಿ ಮೂಡಿಸಿದರೂ ತಂಬಾಕು ಉತ್ಪನ್ನ ಬಳಕೆ ಕ್ಷೀಣಿಸುತ್ತಿಲ್ಲ ಎಂದರು.

ಸಮೀಕ್ಷೆಯೊಂದರ ವರದಿ ಪ್ರಕಾರ ಪ್ರತಿವರ್ಷ 2 ಲಕ್ಷ ಹೆಕ್ಟೇರ್ ಅರಣ್ಯ ಪ್ರದೇಶವನ್ನು, ತಂಬಾಕು ಬೆಳೆಯುವುದಕ್ಕಾಗಿಯೇ ಪರಿವರ್ತನೆ ಮಾಡಲಾಗುತ್ತಿದೆ. ಈಗಾಗಲೇ 35 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತಂಬಾಕು ಬೆಳೆಯಲಾಗುತ್ತಿದೆ. ವರ್ಷ ದಿಂದ ವರ್ಷಕ್ಕೆ ತಂಬಾಕು ಬೆಳೆ ಹೆಚ್ಚುತ್ತಾ ಹೋದರೆ ಆಹಾರ ಪದಾರ್ಥ ಬೆಳೆಯುವುದಕ್ಕೆ ಹಿನ್ನಡೆಯಾಗಲಿದೆ ಅಲ್ಲದೆ, ಮುಂದಿನ ದಿನಗಳಲ್ಲಿ ಆಹಾರ ಬೆಳೆಗಳ ಕೊರತೆ ಉಂಟಾಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಇನ್ನಾದರೂ ತಂಬಾಕು ಬೆಳೆಯುವ ಪ್ರಮಾಣ ಕಡಿಮೆ ಮಾಡುವುದು ಸೂಕ್ತ. ತುಂಬಾಕು ಬೆಳೆಯುವ ರೈತರಿಗೆ ಪರ್ಯಾಯ ಬೆಳೆ ಬೆಳೆಯಲು ಉತ್ತೇಜನ ನೀಡಬೇಕು. ತಂಬಾಕು ಸೇವನೆ ಕಡಿಮೆ ಮಾಡಬೇಕು ಎಂದು ಮನವಿ ಮಾಡಿದರು.

> ತಂಬಾಕು ಸೇವನೆ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ತಂಬಾಕು ಉತ್ಪನ್ನಗಳ ಬಳಕೆಯಿಂದ ಕ್ಯಾನ್ಸರ್ ರೋಗ ಬರುತ್ತದೆ ಎಂದು ಗೊತ್ತಿದ್ದರೂ ಅದನ್ನು ಬಳಸುವವರ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಧೂಮಪಾನದಿಂದಾಗಿ ಪರಿಸರ ಮಾಲಿನ್ಯ ಉಂಟಾಗುತ್ತಿದೆ. ತಂಬಾಕು ಬೆಳೆಗಾಗಿ ಮಿತಿ ಮೀರಿದ ಪ್ರಮಾಣದಲ್ಲಿ ರಸಾಯನಿಕ ವಸ್ತುಗಳನ್ನು ಬಳಸುವುದರಿಂದ ಮಣ್ಣಿನ ಫಲವತ್ತತೆ ಹಾಳಾಗುತ್ತದೆ. ನಾವೇ ಫಲವತ್ತಾದ ಭೂಮಿಯನ್ನು ಬಂಜರು ಭೂಮಿಯಾಗಿ ಮಾಡುತ್ತಿದ್ದೇವೆ. ಇನ್ನಾದರೂ ಎಲ್ಲರೂ ಜಾಗೃತರಾಗಬೇಕು.
> –ಬಿ.ಜಿ. ದಿನೇಶ್, ಹಿರಿಯ ಸಿವಿಲ್ ನ್ಯಾಯಾಧೀಶರು

ತಂಬಾಕು ಸೇವನೆಯಿಂದಾಗುವ ಅನಾಹುತದ ಬಗ್ಗೆ ಬೀದಿ ನಾಟಕದ ಮೂಲಕ ಜಾಗೃತಿ ಮೂಡಿಸಲಾಯಿತು. ಕಾರ್ಯಕ್ರಮದ ನಂತರ ವಿವಿಧ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ತಂಬಾಕು ಸೇವನೆಯ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವ ಫಲಕ ಹಿಡಿದುಕೊಂಡು ಜಾಗೃತಿ ಜಾಥಾ ನಡೆಸಿದರು.

ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, ತಂಬಾಕು ಉತ್ಪನ್ನಗಳ ಮೇಲೆ ಆರೋಗ್ಯಕ್ಕೆ ಹಾನಿಕಾರಕ ಎಂದು ಎಚ್ಚರಿಕೆ ಸಂದೇಶ ಮುದ್ರಿಸಿದ್ದರೂ, ತಂಬಾಕು ಸೇವನೆ ಎಗ್ಗಿಲ್ಲದೆ ನಡೆಯುತ್ತಿದೆ. ಸಮಾಜದಲ್ಲಿ ಕಂಡು ಬರುವ ಕ್ಯಾನ್ಸರ್ ಪೀಡಿತರಲ್ಲಿ ಶೇ.30ರಿಂದ 40ರಷ್ಟು ಮಂದಿ ತಂಬಾಕು ಉತ್ಪನ್ನಗಳ ಸೇವನೆಯಿಂದಲೇ ಈ ಮಾರಕ ರೋಗಕ್ಕೆ ತುತ್ತಾಗಿರುವುದು ಪತ್ತೆಯಾಗಿದೆ. ಕಿದ್ವಾಯಿ ಸೇರಿದಂತೆ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕ್ಯಾನ್ಸರ್ ರೋಗಿಗಳಲ್ಲಿ ಶೇ.90ರಷ್ಟು ಮಂದಿ ತಂಬಾಕು ಸೇವನೆಗೆ ತುತ್ತಾಗಿರುವವರಾಗಿದ್ದಾರೆ ಎಂದು ವಿಷಾದಿಸಿದರು.

ಇತ್ತೀಚಿನ ದಿನಗಳಲ್ಲಿ ವಿವಿಧ ಕಾರಣಗಳಿಂದ ಯುವಜನರು ತಂಬಾಕು ಚಟಕ್ಕೆ ಬಲಿಯಾಗುತ್ತಿದ್ದಾರೆ. ಯುವ ಜನರನ್ನು ತಂಬಾಕು ಚಟದಿಂದ ರಕ್ಷಣೆ ಮಾಡುವುದಕ್ಕೆ ಶ್ರಮಿಸಬೇಕು. ಶಾಲಾ ಕಾಲೇಜುಗಳ ಸುತ್ತಲೂ ತಂಬಾಕು ಮುಕ್ತ ವಲಯವಾಗಿ ಘೋಷಿಸಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ತಂಬಾಕು ಸೇವನೆ ಕಾಯ್ದೆಯ ಉಲ್ಲಂಘನೆಯಾಗುತ್ತದೆ. ಧೂಮಪಾನ ಮಾಡುವುದರಿಂದ ತಂಬಾಕು ಸೇವನೆ ಮಾಡದೆ ಇರುವವರ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತದೆ. ಇದರಿಂದ ಎಲ್ಲರೂ ಸಾಮಾಜಿಕ ಬದ್ಧತೆ ಪ್ರದರ್ಶಿಸಬೇಕು. ಕ್ಯಾಂಪಸ್ ಅಂಬಾಸಿಡರ್ ಆಗಿ ಕಾರ್ಯನಿರ್ವಹಿಸಿ. ನಿಯಮ ಉಲ್ಲಂಘಿಸಿ ಸಾರ್ವಜನಿಕ ಸ್ಥಳ, ಶಾಲಾ–ಕಾಲೇಜುಗಳ ಬಳಿ ಧೂಮಪಾನ ಮಾಡುವವರನ್ನು ಹಾಗೂ ತಂಬಾಕು ಮಾರಾಟ ಮಾಡುವವರನ್ನು ಪ್ರಶ್ನಿಸಬೇಕು. ಇಲ್ಲದಿದ್ದರೆ ಸಂಬಂಧಪಟ್ಟವರ ಗಮನಕ್ಕೆ ತರಬೇಕು ಎಂದು ಸಲಹೆ ನೀಡಿದರು.

> ಪಿರಿಯಾಪಟ್ಟಣ ತಾಲೂಕಿನ ಹಾರನಹಳ್ಳಿ ಹೋಬಳಿಯ ಅಡಗೂರು ಎಂಬಲ್ಲಿ ಈ ಹಿಂದೆ ಹೆಚ್ಚಾಗಿ ತಂಬಾಕನ್ನು ಬೆಳೆಯಲಾಗುತ್ತಿತ್ತು. ಆದರೆ ಈಗ ಈ ಗ್ರಾಮವು ತಂಬಾಕು ಮುಕ್ತ ಗ್ರಾಮವಾಗಿ ಹೊರಹೊಮ್ಮಿರುವುದು ಖುಷಿಯ ವಿಚಾರ.
> –ಡಾ.ಕೆ.ಹೆಚ್.ಪ್ರಸಾದ್, ಡಿಹೆಚ್‌ಓ

ಡಿಹೆಚ್‌ಓ ಡಾ.ಕೆ.ಹೆಚ್.ಪ್ರಸಾದ್ ಮಾತನಾಡಿ, ಈ ಸಾಲಿನ ವಿಶ್ವ ತಂಬಾಕುರಹಿತ ದಿನವನ್ನು 'ನಮಗೆ ತಂಬಾಕು ಬೇಡ ಆಹಾರ ಬೇಕು' ಎಂಬ ಧ್ಯೇಯವಾಕ್ಯದೊಂದಿಗೆ ಆಚರಿಸಲಾಗುತ್ತಿದೆ. ತಂಬಾಕು ಉತ್ಪನ್ನಗಳ ಬಳಕೆ ನಿಯಂತ್ರಣಕ್ಕೆ ಹಾಗೂ ತಂಬಾಕು ನಿರ್ಮೂಲನೆಗಾಗಿ ಹಲವು ಕಾರ್ಯಕ್ರಮ ರೂಪಿಸಲಾಗುತ್ತಿದೆ. ಆದರೂ, ಸಾಕಷ್ಟು ಮಂದಿ ತಂಬಾಕು ಸೇವನೆಗೆ ದಾಸರಾಗುತ್ತಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಜಿಲ್ಲಾ ಸರ್ವೇಕ್ಷಣ ಅಧಿಕಾರಿ ಡಾ.ಮಹದೇವಪ್ರಸಾದ್, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ.ಸಿರಾಜ್ ಅಹಮದ್, ಜಿಲ್ಲಾ ತುಂಬಾಕು ನಿಯಂತ್ರಣದ ಸಲಹೆಗಾರ ಶಿವಕುಮಾರ್ ಜಿ, ಐಇಸಿ ಅಧಿಕಾರಿಗಳು ಹಾಗೂ ರೈತ ಮುಖಂಡ ವಸಂತ್, ಪ್ರಗತಿಪರ ರೈತ ಸುಪ್ರೀತ್ ಇನ್ನಿತರರು ಉಪಸ್ಥಿತರಿದ್ದರು.

> ಪ್ರತಿದಿನ ಒಂದಲ್ಲ ಒಂದು ಕಾರಣಕ್ಕಾಗಿ ಆತ್ಮಹತ್ಯೆ ಮಾಡಿಕೊಳ್ಳುವವರ ಸುದ್ದಿಯನ್ನು ನೋಡಿ ಜನ ಮರಗುತ್ತಾರೆ. ಆದರೆ, ತಂಬಾಕು ಸೇವನೆ ಮಾಡುವುದು ನಿಧಾನವಾಗಿ ಆತ್ಮಹತ್ಯೆ ಮಾಡಿಕೊಂಡಂತಾಗಿದೆ. ತಂಬಾಕು ಸೇವನೆ ನಿಧಾನವಾಗಿ ಪ್ರಾಣ ತೆಗೆಯುತ್ತದೆ ಎಂದು ಗೊತ್ತಿದ್ದರೂ ಜನ ಎಚ್ಚೆತ್ತುಕೊಳ್ಳುತ್ತಿಲ್ಲ. ಈ ಹಿನ್ನೆಲೆಯಲ್ಲಿ ತಂಬಾಕು ಸೇವನೆ ಬಗ್ಗೆ ಜಾಗೃತರಾಗಬೇಕು. ತಂಬಾಕುರಹಿತ ದಿನವನ್ನು ಕೇವಲ ಒಂದು ದಿನಕ್ಕೆ ಸೀಮಿತ ಮಾಡದೆ 365 ದಿನವೂ ತಂಬಾಕುರಹಿತ ದಿನವಾಗಬೇಕು. ಆ ಮೂಲಕ ತಂಬಾಕು ಸೇವನೆ ಕ್ಷೀಣಿಸಲು ಎಲ್ಲರೂ ಸಹಕರಿಸಬೇಕು.
> –ಡಾ.ಕೆ.ವಿ.ರಾಜೇಂದ್ರ, ಡಿಸಿ

ಸೋತರೂ ಅಧಿಕ ಜನರ ವಿಶ್ವಾಸ ಗಳಿಸಿದ್ದೇನೆ

● ಎನ್.ಆರ್.ಕ್ಷೇತ್ರದ ಪರಾಜಿತ ಬಿಜೆಪಿ ಅಭ್ಯರ್ಥಿ ಸಂದೇಶ್‌ಸ್ವಾಮಿ ● ಕ್ಷೇತ್ರದ ಅಭಿವೃದ್ಧಿ, ಬಡವರ ಸೇವೆಗೆ ಅವಕಾಶಕ್ಕಾಗಿ ಪದೇಪದೆ ಸ್ಪರ್ಧಿಸುತ್ತಿದ್ದೇನೆ



ಮೈಸೂರು, ಮೇ 31(ಎಂಕೆ)–ನರಸಿಂಹರಾಜ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಬಾರಿಗಿಂತಲೂ ಹೆಚ್ಚಿನ ಮತಗಳನ್ನು ಪಡೆಯಲು ಶ್ರಮಿಸಿದ ಬಿಜೆಪಿ ಕಾರ್ಯಕರ್ತರು, ಮುಖಂಡರಿಗೆ ಕೃತಜ್ಞತೆ ಸಲ್ಲಿಸಿದ ಪರಾಜಿತ ಬಿಜೆಪಿ ಅಭ್ಯರ್ಥಿ ಹಾಗೂ ಮಾಜಿ ಮೇಯರ್ ಸಂದೇಶ್ ಸ್ವಾಮಿ, ಸದಾ ಕ್ಷೇತ್ರದ ಮತದಾರರೊಂದಿಗೆ ಇರುತ್ತೇನೆ ಎಂದು ಭರವಸೆ ನೀಡಿದರು.

ಮೈಸೂರಿನ ಹೊರವರ್ತುಲ ರಸ್ತೆಯಲ್ಲಿರುವ ಸಮಸ್ತ ಕಲ್ಯಾಣ ಮಂಟಪದಲ್ಲಿ ಬುಧವಾರ ಆಯೋಜಿಸಿದ್ದ ಕೃತಜ್ಞತಾ ಸಭೆ ಹಾಗೂ ನೂತನ ಶಾಸಕ ಟಿ.ಎಸ್.ಶ್ರೀವತ್ಸ ಅವರಿಗೆ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಇದುವರೆಗೂ ಎನ್‌ಆರ್ ಕ್ಷೇತ್ರದಲ್ಲಿ ಮೂರು ಬಾರಿ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಿದ್ದೇನೆ. ಪ್ರತಿಬಾರಿಯೂ ಪಡೆದ ಮತಗಳ ಸಂಖ್ಯೆ ಹೆಚ್ಚಾಗಿದ್ದು, ಈ ಮೂಲಕ ಕ್ಷೇತ್ರದಲ್ಲಿ ಬಿಜೆಪಿ ಮತ್ತಷ್ಟು ಬಲಗೊಂಡಿದೆ ಎಂಬುದು ಸಾಬೀತಾಗಿದೆ ಎಂದು ಹೇಳಿದರು.

ನಾನು ಪಾಲಿಕೆ ಸದಸ್ಯನಾಗಿ, ಮೇಯರ್ ಆಗಿ ಜನರ ಸೇವೆ ಮಾಡಿದ್ದೇನೆ. ಎನ್.ಆರ್ ಕ್ಷೇತ್ರದಲ್ಲಿಯೇ ಸ್ಪರ್ಧಿಸಿ, ಗೆದ್ದು ಕ್ಷೇತ್ರದಲ್ಲಿನ ಬಡವರ ಪರವಾಗಿ ಕೆಲಸ ಮಾಡಬೇಕು ಎಂಬ ಉದ್ದೇಶದಿಂದ ಸತತವಾಗಿ ಸ್ಪರ್ಧಿಸುತ್ತಿದ್ದೇನೆ. ಆದರೆ ಗೆಲುವು ಸಾಧ್ಯವಾಗದಿದ್ದರೂ ಜನರ ವಿಶ್ವಾಸ ಗಳಿಸಿದ್ದೇನೆ ಎಂಬುದಕ್ಕೆ ಕಳೆದ ಚುನಾವಣೆಯಲ್ಲಿ ಪಡೆದಿರುವ ಮತಗಳ ಸಂಖ್ಯೆಯೇ ಸಾಕ್ಷಿ ಎಂದರು.

ಕ್ಷೇತ್ರದಲ್ಲಿ ಕಾಣಿಸಿಕೊಳ್ಳದ, ಯಾವ ಅಭಿವೃದ್ಧಿ ಕಾರ್ಯವನ್ನೂ ಮಾಡದ ತನ್ವೀರ್ ಸೇಠ್ ಗೆಲುವು ಸಾಧಿಸಿದ್ದರೂ ಅವರ ವಿರುದ್ಧವಾಗಿ ಲಕ್ಷಕ್ಕಿಂತಲೂ ಹೆಚ್ಚು ಮತಗಳಾಗಿವೆ. ನನಗೆ ವಿಧಾನಸಭೆಗೆ ಹೋಗಿ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಮಾತನಾಡುವ ಅವಕಾಶ ಇಲ್ಲದಿದ್ದರೂ ಕ್ಷೇತ್ರದ ಜನತೆಯೊಂದಿಗಿದ್ದು, ತಿಂಗಳಿಗೊಮ್ಮೆ ಪ್ರತೀ ವಾರ್ಡ್‌ನಲ್ಲಿಯೂ ಸಭೆ ನಡೆಸಿ ಜನತೆಯ ಕಷ್ಟ–ಸುಖದಲ್ಲಿ ಭಾಗಿಯಾಗುತ್ತೇನೆ ಎಂದರು.

ಸಂದೇಶ್‌ಸ್ವಾಮಿ ನಾಯಕತ್ವದಲ್ಲಿ ಸಂಘಟನೆ...

ನರಸಿಂಹರಾಜ ಕ್ಷೇತ್ರದಲ್ಲಿ ಬಿಜೆಪಿ ಪ್ರಬಲವಾಗಿದ್ದು, ಮುಂದಿನ ದಿನಗಳಲ್ಲಿಯೂ ಸಂದೇಶ್‌ಸ್ವಾಮಿ ಅವರ ನೇತೃತ್ವದಲ್ಲಿಯೇ ಸಂಘಟನೆಯಾಗಬೇಕು ಎಂದು ಕ್ಷೇತ್ರದ ಮುಖಂಡರು, ಕಾರ್ಯಕರ್ತರು ಒಕ್ಕೊರಲಿನಿಂದ ಅಭಿಪ್ರಾಯಪಟ್ಟರು.

ಅಭಿಪ್ರಾಯ ಸಂಗ್ರಹದ ವೇಳೆ ಮಾತನಾಡಿದ ಹಲವರು, ಎನ್.ಆರ್. ಕ್ಷೇತ್ರದಲ್ಲಿ ಬಿಜೆಪಿ ಬಲಿಷ್ಠವಾಗುತ್ತಿದೆ. ಕಳೆದ ಬಾರಿಗಿಂತಲೂ ಈ ಬಾರಿ ಹೆಚ್ಚಿನ ಮತಗಳು ಬಂದಿದ್ದು, ಇನ್ನಷ್ಟು ಸಂಘಟನೆಯಾಗಬೇಕು. ಸಂದೇಶ್‌ಸ್ವಾಮಿಯವರ ನಾಯಕತ್ವದಲ್ಲಿಯೇ ಪಕ್ಷ ಸಂಘಟನೆಯಾಗಬೇಕು ಎಂದು ತಿಳಿಸಿದರು.

ಗೆದ್ದಿರುವುದು ಸುಳ್ಳು ಗ್ಯಾರಂಟಿ ಕಾರ್ಡ್‌ಗಳು

> ಎನ್.ಆರ್ ಕ್ಷೇತ್ರದ ಬಿಜೆಪಿ ಕಾರ್ಯಕರ್ತರು ಪ್ರಾಮಾಣಿಕವಾಗಿ ನನ್ನ ಪರ ಕೆಲಸ ಮಾಡಿದ್ದಾರೆ. ಟಿಕೆಟ್ ಆಕಾಂಕ್ಷಿಗಳಾಗಿದ್ದವರೂ ಮನ ಪೂರ್ವಕವಾಗಿ ಬೆಂಬಲ ನೀಡಿದ್ದಾರೆ. ಒಂದೇ ಒಂದು ಮತವೂ ಬೇರೆ ಕಡೆಗೆ ಹೋಗದಂತೆ ನೋಡಿಕೊಂಡಿದ್ದಾರೆ. ಇದೆಲ್ಲರ ನಡುವೆ ಎನ್.ಆರ್.ಕ್ಷೇತ್ರದಲ್ಲಿ ನಿಜವಾಗಿ ಗೆದ್ದಿರುವುದು ತನ್ವೀರ್ ಸೇಠ್ ಅಲ್ಲ; ಕಾಂಗ್ರೆಸ್ ಅಲ್ಲ. ಗೆದ್ದಿರುವುದು ಸುಳ್ಳು ಗ್ಯಾರಂಟಿ ಕಾರ್ಡ್‌ಗಳು. **– ಸಂದೇಶ್ ಸ್ವಾಮಿ, ಎನ್.ಆರ್.ಕ್ಷೇತ್ರದ ಬಿಜೆಪಿ ಪರಾಜಿತ ಅಭ್ಯರ್ಥಿ**



ಎನ್.ಆರ್. ಕ್ಷೇತ್ರದ ಬಿಜೆಪಿ ಕಾರ್ಯಕರ್ತರ ಪರವಾಗಿ ಕೆ.ಆರ್. ಕ್ಷೇತ್ರದ ನೂತನ ಶಾಸಕ ಟಿ.ಎಸ್.ಶ್ರೀವತ್ಸ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಇತಿಹಾಸದಲ್ಲೇ ಅತ್ಯಧಿಕ ಮತ: ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ನರಸಿಂಹರಾಜ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಗೆ 51 ಸಾವಿರ ಮತಗಳು ಬಂದಿದ್ದು, ಕ್ಷೇತ್ರದ ಇತಿಹಾಸದಲ್ಲಿಯೇ ಬಿಜೆಪಿಗೆ ದೊರೆತ ಅತ್ಯಧಿಕ ಮತಗಳಾಗಿವೆ. ಕ್ಷೇತ್ರದಲ್ಲಿ 166 ಬೂತ್‌ಗಳ ಕಮಿಟಿ ರಚನೆ ಮಾಡಿದ್ದು, ಎಲ್ಲಾ ಬೂತ್ ಕಮಿಟಿ ಸದಸ್ಯರು ಕೆಲಸ ಮಾಡಿದ್ದಾರೆ. ಸೋಲಿಗೆ ಧೈರ್ಯ ಕಳೆದುಕೊಳ್ಳದೆ ಇನ್ನಷ್ಟು ಸಂಘಟಿತರಾಗಿ ಎಂದು ಕರೆ ನೀಡಿದರು.

ಬಳಿಕ ಎನ್.ಆರ್.ಕ್ಷೇತ್ರದ ಬಿಜೆಪಿ ಕಾರ್ಯಕರ್ತರ ಪರವಾಗಿ ನೂತನ ಶಾಸಕ ಟಿ.ಎಸ್.ಶ್ರೀವತ್ಸ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಬಿಜೆಪಿ ಹಿರಿಯ ಮುಖಂಡ ಬಿ.ಪಿ.ಮಂಜುನಾಥ್, ಎನ್.ಆರ್.ಕ್ಷೇತ್ರದ ಅಧ್ಯಕ್ಷ ಭಾನುಪ್ರಕಾಶ್, ನಗರ ಕಾರ್ಯದರ್ಶಿ ಸೋಮಸುಂದರ್, ಅಲ್ಪಸಂಖ್ಯಾತರ ವಿಭಾಗದ ಮುಖಂಡ ಅನಿಲ್‌ಥಾಮಸ್, ಪಾಲಿಕೆ ಸದಸ್ಯರಾದ ಅಶ್ವಿನಿ ಶರತ್, ಸಾತ್ವಿಕ್ ಸಂದೇಶ್‌ಸ್ವಾಮಿ, ಮುಖಂಡ ಸ್ವಾಮಿಗೌಡ ಮತ್ತಿತರರು ಉಪಸ್ಥಿತರಿದ್ದರು.

ರಾಜ್ಯಾದ್ಯಂತ ಭಾರೀ ಮಳೆ ಸಾಧ್ಯತೆ

ಬೆಂಗಳೂರು: ಮುಂದಿನ 48 ಗಂಟೆಯೊಳಗೆ ದಕ್ಷಿಣ ಕನ್ನಡ, ಉತ್ತರ ಕನ್ನಡ, ಕಲಬುರ್ಗಿ, ಬಳ್ಳಾರಿ, ಧಾರವಾಡ ಜಿಲ್ಲೆಗಳಲ್ಲಿ ಮಿಂಚು ಮತ್ತು ಬಿರುಗಾಳಿ ಸಹಿತ ಭಾರಿ ಮಳೆಯಾಗುವ ಸಾಧ್ಯತೆ ಇದ್ದು ಎಚ್ಚರಿಕೆಯಿಂದ ಇರುವಂತೆ ಹವಮಾನ ಇಲಾಖೆ ಮುನ್ಸೂಚನೆ ನೀಡಿದೆ.



ಕರಾವಳಿ ಉತ್ತರ ಒಳನಾಡು, ದಕ್ಷಿಣ ಒಳನಾಡು ಭಾಗಗಳಲ್ಲಿ ಮಳೆಯಾಗಲಿದ್ದು, ಗಂಟೆಗೆ 30ರಿಂದ 40 ಕಿಮೀ ವೇಗದಲ್ಲಿ ಗಾಳಿ ಬೀಸಲಿದೆ. ಚಾಮರಾಜನಗರ, ಚಿಕ್ಕಮಗಳೂರು, ಚಿತ್ರದುರ್ಗ, ಕೊಡಗು, ಮಂಡ್ಯ, ಮೈಸೂರು, ಶಿವಮೊಗ್ಗ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ರಾಮನಗರ ಜಿಲ್ಲೆಗಳ ಒಂದೆರಡು ಸ್ಥಳಗಳಲ್ಲಿ ಮಳೆಯಾಗಲಿದೆ. ಭಾರೀ ಮಳೆಯಾಗುವ ಸಾಧ್ಯತೆ ಹಿನ್ನೆಲೆ ಜನರು ಅನಗತ್ಯ ಪ್ರಯಾಣ ತಪ್ಪಿಸಬೇಕು, ಪ್ರಯಾಣ ವೇಳೆ ಎಚ್ಚರಿಕೆಯಿಂದ ಚಾಲನೆ ಮಾಡಬೇಕು, ಆದಷ್ಟು ಸುರಕ್ಷಿತ ಆಶ್ರಯ ಪಡೆಯಿರಿ. ಬಿರುಗಾಳಿ ಸಹಿತ ಮಳೆ ಬೀಳುವಾಗ ಹೊರಗಡೆ ನಿಲ್ಲುವುದು ಬೇಡ ಮನೆಯೊಳಗೆ ಇರುವಂತೆಎಚ್ಚರಿಕೆ ನೀಡಲಾಗಿದೆ. ಮಳೆ ಬರುವ ವೇಳೆ ಕಿಟಕಿ ಬಾಗಿಲುಗಳನ್ನು ಮುಚ್ಚಬೇಕು. ಕಾಂಕ್ರೀಟ್ ಗೋಡೆಗಳಿಗೆ ಒರಗದಂತೆ. ಗುಡುಗು ಸಿಡಿಲು ಸಹಿತ ಮಳೆಯಾಗುವ ವೇಳೆ ವಿದ್ಯುತ್‌ಎಲೆಕ್ಟ್ರಾನಿಕ್ ಉಪಕರಣಗಳನ್ನು ಅನ್‌ಪ್ಲಗ್ ಮಾಡುವಂತೆ ಸಾರ್ವಜನಿಕರಿಗೆ ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

ತಂಬಾಕು ತ್ಯಜಿಸಿ ಆರೋಗ್ಯ ರಕ್ಷಿಸಿಕೊಳ್ಳಿ

ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅಭಿಮತ



ಮೈಸೂರು,ಮೇ 31(ಪಿಎಂ)– ತಂಬಾಕು ಸೇವನೆ ನಮ್ಮ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟು ಮಾಡಲಿದ್ದು, ತಂಬಾಕು ತ್ಯಜಿಸಿ ಆರೋಗ್ಯ ರಕ್ಷಿಸಿಕೊಳ್ಳಬೇಕು ಎಂದು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಹೇಳಿದರು.

ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆ, ಸುಯೋಗ್ ಕಾಲೇಜ್ ಆಫ್ ನರ್ಸಿಂಗ್ ಸಂಸ್ಥೆ ಜಂಟಿ ಆಶ್ರಯದಲ್ಲಿ ಬುಧವಾರ ಆಸ್ಪತ್ರೆ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ವಿಶ್ವ ತಂಬಾಕು ರಹಿತ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ತಂಬಾಕು ಸೇವನೆಯಿಂದ ನಾನಾ ಕಾಯಿಲೆಗಳಿಗೆ ತುತ್ತಾಗಬೇಕಾಗುತ್ತದೆ. ಅದರಿಂದ ದೂರವಿದ್ದು, ಆರೋಗ್ಯ ಕಾಪಾಡಿಕೊಳ್ಳಬೇಕು. ಸುಯೋಗ್ ಆಸ್ಪತ್ರೆ ಕೈಗೆಟಕುವ ದರದಲ್ಲಿ ವೈದ್ಯಕೀಯ ಸೇವೆ ಒದಗಿಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕೆಆರ್ ಆಸ್ಪತ್ರೆ ಕ್ಯಾನ್ಸರ್ ತಜ್ಞವೈದ್ಯ ಡಾ.ಮಂಜುನಾಥ್ ಮಾತನಾಡಿ, ತಂಬಾಕು ಸೇವನೆಯಿಂದ ಹೃದಯಾಘಾತ, ಕ್ಯಾನ್ಸರ್, ಸಕ್ಕರೆ ಕಾಯಿಲೆ ಸೇರಿದಂತೆ ಮೊದಲಾದ ಅನಾರೋಗ್ಯಕ್ಕೆ ತುತ್ತಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸುಯೋಗ್ ಆಸ್ಪತ್ರೆಯ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಮಾತನಾಡಿ, ಧೂಮಪಾನದ ಹೊಗೆಯಲ್ಲಿ 7 ಸಾವಿರಕ್ಕೂ ಹೆಚ್ಚು ವಿಷಪೂರಿತ ರಾಸಾಯನಿಕಗಳಿದ್ದು, ಇವು ಮನುಷ್ಯನ ಜೀನ್‌ಗಳನ್ನೇ ಅಸಹಜಗೊಳಿಸುತ್ತವೆ. ಆ ಮೂಲಕ ನಮ್ಮ ದೇಹದ ಸಹಜ ಕ್ರಿಯೆಗಳನ್ನೇ ಅಸ್ತವ್ಯಸ್ತಗೊಳಿಸುತ್ತವೆ ಎಂದು ಆತಂಕ ವ್ಯಕ್ತಪಡಿಸಿದರು. ಸುಯೋಗ್ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಡಾ.ಸುಯೋಗ್ ಯೋಗಣ್ಣ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಮಂಜುನಾಥ್, ಪ್ರಧಾನ ವ್ಯವಸ್ಥಾಪಕ ಪಿ.ಜೆ.ಅರುಣ್‌ಕುಮಾರ್ ಮತ್ತಿತರರು ಹಾಜರಿದ್ದರು.

ಎಂ.ಬಿ.ಪಾಟೀಲ, ಪ್ರಿಯಾಂಕ್ ಖರ್ಗೆಗೆ ಹೆಚ್ಚುವರಿ ಖಾತೆ ಹಂಚಿಕೆ

ಬೆಂಗಳೂರು: ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ ಅವರಿಗೆ ಹೆಚ್ಚುವರಿಯಾಗಿ ಮೂಲ ಸೌಕರ್ಯ ಅಭಿವೃದ್ಧಿ ಖಾತೆಯನ್ನು ಹಂಚಿಕೆ ಮಾಡಿ ಅಧಿಸೂಚನೆ ಹೊರಡಿಸಲಾಗಿದೆ. ಅಲ್ಲದೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಹೆಚ್ಚುವರಿಯಾಗಿ ಮಾಹಿತಿ ತಂತ್ರಜ್ಞಾನ(ಐಟಿ) ಮತ್ತು ಜೈವಿಕ ತಂತ್ರಜ್ಞಾನ (ಬಿಟಿ) ಖಾತೆಯನ್ನೂ ನೀಡಲಾಗಿದೆ. ಇದೇ 28ರಂದು ಎಲ್ಲ ಸಚಿವರಿಗೆ ಖಾತೆಗಳನ್ನು ಹಂಚಲಾಗಿತ್ತು. ಆಗ ಮೂಲಸೌಕರ್ಯ ಅಭಿವೃದ್ಧಿ ಮತ್ತು ಐಟಿ ಬಿಟಿ ಖಾತೆ ಸಿಎಂ ವಹಿಸಿಕೊಂಡಿದ್ದರು. ಪರಿಷ್ಕೃತ ಖಾತೆ ಹಂಚಿಕೆ ಅಧಿಸೂಚನೆ ಪ್ರಕಾರ ಆರ್ಥಿಕ, ಸಂಪುಟ ಸಚಿವಾಲಯ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ, ಗುಪ್ತಚರ ಮತ್ತು ಹಂಚಿಕೆಯಾಗದ ಇತರ ಖಾತೆಗಳ ಹೊಣೆ ಸಿಎಂ ನಿಭಾಯಿಸಲಿದ್ದಾರೆ.





'ಗ್ಯಾರಂಟಿ ಸೂತ್ರ' ದೇಶವನ್ನು ದಿವಾಳಿ ಮಾಡುತ್ತದೆ: ಮೋದಿ ವಾಗ್ದಾಳಿ

ನವದೆಹಲಿ, ಮೇ 31– ಚುನಾವಣೆಗಳಲ್ಲಿ ಗೆಲುವು ಸಾಧಿಸುವ ಉದ್ದೇಶದಿಂದ ಕಾಂಗ್ರೆಸ್ ಅನುಸರಿಸುತ್ತಿರುವ 'ಗ್ಯಾರಂಟಿ ಸೂತ್ರ' ದೇಶವನ್ನು ದಿವಾಳಿ ಮಾಡುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಟೀಕಿಸಿದ್ದಾರೆ.

ಕೇಂದ್ರದ ಬಿಜೆಪಿ ಸರ್ಕಾರಕ್ಕೆ ಒಂಬತ್ತು ವರ್ಷ ತುಂಬಿದ ಹಿನ್ನೆಲೆಯಲ್ಲಿ ರಾಜಸ್ಥಾನದಲ್ಲಿ ನಡೆದ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಅವರು, 'ಇದೇ ತಿಂಗಳ ಆರಂಭದಲ್ಲಿ ನಡೆದ ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿರುವ ವಿಚಾರ ಉಲ್ಲೇಖಿಸಿದರು. ಕಾಂಗ್ರೆಸ್ ಹೊಸ ಗ್ಯಾರಂಟಿ ಸೂತ್ರವನ್ನು ಅನುಸರಿಸುತ್ತಿದೆ. ಆದರೆ, ಅವರು (ಕಾಂಗ್ರೆಸ್ಸಿಗರು) ಕೊಟ್ಟ ಭರವಸೆಗಳನ್ನು ಪೂರೈಸುತ್ತಿದ್ದಾರೆಯೇ ಎಂದು ನರೇಂದ್ರ ಮೋದಿ ಪ್ರಶ್ನಿಸಿದ್ದಾರೆ.



ಕಾಂಗ್ರೆಸ್ 50 ವರ್ಷಗಳ ಹಿಂದೆ ದೇಶದಲ್ಲಿ ಬಡತನ ನಿರ್ಮೂಲನೆ ಮಾಡಲಾಗುವುದು ಎಂದು ಭರವಸೆ ನೀಡಿತ್ತು ಆದರೆ, ಇದು ಬಡವರಿಗೆ ಕಾಂಗ್ರೆಸ್ಸಿಗರು ಮಾಡಿದ ದೊಡ್ಡ ದ್ರೋಹ ಎಂದು ಕಿಡಿಕಾರಿದ್ದಾರೆ.

ಬಡವರನ್ನು ದಾರಿ ತಪ್ಪಿಸುವುದು, ಅವರನ್ನು ವಂಚಿತರನ್ನಾಗಿ ಮಾಡುವುದು ಕಾಂಗ್ರೆಸ್‌ನ ನೀತಿಯಾಗಿದೆ. ಇದರಿಂದ ರಾಜಸ್ಥಾನದ ಜನರು ಸಹ ಸಾಕಷ್ಟು ತೊಂದರೆ ಅನುಭವಿಸಿದ್ದಾರೆ. ರಾಜಸ್ಥಾನಕ್ಕೆ ಏನು ಸಿಕ್ಕಿದೆ. ಮುಖ್ಯಮಂತ್ರಿ, ಸಚಿವರು, ಶಾಸಕರು ತಮ್ಮ ತಮ್ಮಲ್ಲೇ ಜಗಳವಾಡುತ್ತಾರೆ ಎಂದು ಗುಡುಗಿದ್ದಾರೆ.

ದೇಶದಲ್ಲಿ 2014ಕ್ಕೂ ಮೊದಲು ಭ್ರಷ್ಟಾಚಾರದ ವಿರುದ್ಧ ಜನರು ಬೀದಿಗಿಳಿದಿದ್ದರು. ಪ್ರಮುಖ ನಗರಗಳಲ್ಲಿ ಭಯೋತ್ಪಾದಕ ದಾಳಿಗಳು ನಡೆದಿದ್ದವು. ಆದರೆ, ಕಾಂಗ್ರೆಸ್ ರಿಮೋಟ್ ಕಂಟ್ರೋಲ್ ಮೂಲಕ ಸರ್ಕಾರವನ್ನು ನಡೆಸುತ್ತಿತ್ತು ಎಂದು ಮೋದಿ ದೂರಿದ್ದಾರೆ. ಕಳೆದ ಒಂಬತ್ತು ವರ್ಷಗಳಲ್ಲಿ ತಮ್ಮ ಸರ್ಕಾರವು ಜನರ ಸೇವೆ, ಉತ್ತಮ ಆಡಳಿತ ಮತ್ತು ಬಡವರ ಕಲ್ಯಾಣಕ್ಕಾಗಿ ಸಮರ್ಪಿತವಾಗಿದೆ ಎಂದು ಅವರು ಹೇಳಿದ್ದಾರೆ. ರಾಜಸ್ಥಾನ ವಿಧಾನಸಭೆಗೆ ಮುಂದಿನ ಐದು ತಿಂಗಳಲ್ಲಿ ಚುನಾವಣೆ ನಡೆಯಲಿದ್ದು, ಈ ವರ್ಷ ಪ್ರಧಾನಿ ಮೋದಿ ಐದು ಬಾರಿ ರಾಜ್ಯಕ್ಕೆ ಭೇಟಿ ನೀಡಿದ್ದಾರೆ.

ಸರ್ಕಾರ ಯಾವುದೇ ಬರಲಿ ಮೈಸೂರು ಅಭಿವೃದ್ಧಿಯಾಗಲಿ

ನರೆಡ್ಕೋ ಮೈಸೂರು ಅಧ್ಯಕ್ಷ ಆದಿಶೇಷನಗೌಡ ಅಭಿಮತ



ಮೈಸೂರು, ಮೇ 31 (ಸಿಎನ್)– ಸರ್ಕಾರಗಳು ಬದಲಾವಣೆಯಾಗುವುದು ಪ್ರಜಾಪ್ರಭುತ್ವದಲ್ಲಿ ಒಂದು ಪ್ರಕ್ರಿಯೆ, ಆದರೆ ಅಭಿವೃದ್ಧಿ ಕಾರ್ಯಗಳು ನಿರಂತರ. ಸರ್ಕಾರ ಯಾವುದೇ ಇರಲಿ, ಮೈಸೂರು ಸಮಗ್ರ ಅಭಿವೃದ್ಧಿಯಾಗಲಿ ಎಂದು ನರೇಡ್ಕೋ ಮೈಸೂರು ಘಟಕದ ಅಧ್ಯಕ್ಷ ಆದಿಶೇಷನಗೌಡ ಅಭಿಪ್ರಾಯ ವ್ಯಕ್ತಪಡಿಸಿದರು.

ಖಾಸಗಿ ಹೋಟೆಲ್‌ನಲ್ಲಿ ನರೆಡ್ಕೋ ಮೈಸೂರು ಘಟಕದಿಂದ ಆಯೋಜಿಸಲಾಗಿದ್ದ ಮಾಸಿಕ ಸಭೆಯಲ್ಲಿ 'ಬ್ರಾಂಡ್ ಮೈಸೂರು ಯೋಜನೆ 2ನೇ ಆವೃತ್ತಿ' ಕುರಿತು ತಂತ್ರಜ್ಞಾನದ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಬೆಂಗಳೂರಿನಲ್ಲಿ ಅರ್ಧ ಪ್ರಮಾಣದಲ್ಲಿ ಹೊರವರ್ತುಲ ರಸ್ತೆ (ರಿಂಗ್ ರೋಡ್) ನಿರ್ಮಾಣವಾಗಿದೆ. ಆದರೆ ನಮ್ಮ ಮೈಸೂರಿನಲ್ಲಿ ಪೂರ್ಣ ಪ್ರಮಾಣವಾಗಿ ಹೊರವರ್ತುಲ ರಸ್ತೆ ನಿರ್ಮಾಣವಾಗಿದೆ. ಇದು ಮೈಸೂರಿಗರು ಹೆಮ್ಮೆಪಡುವ ವಿಚಾರ. ಉತ್ತಮ ದೃಷ್ಟಿಕೋನದಿಂದ ಮೈಸೂರು ಅಭಿವೃದ್ಧಿ ಸಾಧ್ಯ. ಈ ನಿಟ್ಟಿನಲ್ಲಿ ನರೆಡ್ಕೋ ಸಂಸ್ಥೆಯ ಮಹತ್ವಾಕಾಂಕ್ಷೆ ಯೋಜನೆ 'ಬ್ರಾಂಡ್ ಮೈಸೂರು' ಮೂಲಕ ಮೈಸೂರಿನ ಸಮಗ್ರ ಅಭಿವೃದ್ಧಿಗೆ ಸರ್ಕಾರದ ಮೇಲೆ ಒತ್ತಡ ಹೇರಲಾಗುವುದು ಎಂದು ತಿಳಿಸಿದರು.

ಈ ಹಿಂದೆ ಬಿಜೆಪಿ ಸರ್ಕಾರವಿತ್ತು, ಈಗ ಕಾಂಗ್ರೆಸ್ ಸರ್ಕಾರ ಬಂದಿದೆ. ಯಾವುದೇ ಸರ್ಕಾರ ಬರಲಿ ಬಿಡಲಿ, ಅಧಿಕಾರದಲ್ಲಿ ಯಾರೇ ಇರಲಿ ನಾವು ಮೈಸೂರಿನ ಅಭಿವೃದ್ಧಿ ಬಗ್ಗೆ ಪ್ರಬಲ ಒತ್ತಡ ಹೇರಬೇಕಾಗಿದೆ. ನಮ್ಮ ಸಂಸ್ಥೆಯಲ್ಲಿ ಬಿಲ್ಡರ್ಸ್, ಡೆವಲಪರ್ಸ್, ತಾಂತ್ರಿಕ ವರ್ಗ ಹೀಗೆ ಹಲವು ಪ್ರಮುಖ ವಿಭಾಗದ ಜನರಿದ್ದೇವೆ. ನಾವೆಲ್ಲರೂ ಒಂದೊಳ್ಳೆ ಯೋಜನೆ ಮೂಲಕ ಸರ್ಕಾರದ ಗಮನ ಸೆಳೆದು ಮೈಸೂರಿನ ಪ್ರಗತಿಗೆ ಟೊಂಕಕಟ್ಟಿ ನಿಲ್ಲಬೇಕಾದ ಅಗತ್ಯವಿದೆ ಎಂದು ಹೇಳಿದರು.

ಬೆಂಗಳೂರು ಇಲ್ಲಿಂದ ಸುಮಾರು 120 ಕಿ.ಮೀ ದೂರದಲ್ಲಿದೆ. ಹಾಗಾಗಿ ಬೆಂಗಳೂರಿನ ರೀತಿ ಮೈಸೂರು ಕೂಡ ಬೆಳವಣಿಗೆ ಹೊಂದುವ ಕ್ಷಮತೆಯಿದೆ. ಜೊತೆಗೆ ನಮ್ಮ ಸಂಸ್ಥೆ ಕೂಡ ಸಾಥ್ ನೀಡುತ್ತಾ ಬಂದಿದ್ದು, ಮುಂದಿನ ದಿನಗಳಲ್ಲಿ ಹಲವು ಕ್ಷೇತ್ರಗಳಲ್ಲಿ ಅಭಿವೃದ್ಧಿ ಯೋಜನೆ ರೂಪಿಸಿದ್ದೇವೆ, ಸಿಎಂಓ ಅನುಮತಿ ಪಡೆದ ಕೂಡಲೇ ಕಾರ್ಯೋನ್ಮುಖರಾಗುತ್ತೇವೆ. ಮೈಸೂರಿನ ಸರ್ವತೋಮುಖ ಬೆಳವಣಿಗೆಗೆ ನಾವು ಮುನ್ನುಗ್ಗಲು ಸಿದ್ಧರಿದ್ದೇವೆ ಎಂದರು.

ಪ್ರಧಾನಿ ಮೋದಿ ಪರಿಚಯಿಸಿದ ಮೇಕ್ ಇನ್ ಇಂಡಿಯಾ ಯೋಜನೆಯಿಂದ ದೇಶ ಸ್ವಾವಲಂಬಿಯಾಗಿ ಆರ್ಥಿಕ ಪರಿಸ್ಥಿತಿ ಹಾಗೂ ವಿದೇಶ ವಿನಿಮಯ ಹೆಚ್ಚಾಗಿದೆ. ಅಲ್ಲದೇ ಜಿಡಿಪಿ 10% ತಲುಪಿದೆ, ಜಿಎಸ್‌ಟಿ ಮೂಲಕ ತೆರಿಗೆದಾರರ ಸಂಖ್ಯೆ ಹೆಚ್ಚಾಗಿದೆ. ಈಗಾಗಲೇ 4 ಟ್ರಿಲಿಯನ್ ಡಾಲರ್ ಸಮೀಪದಲ್ಲಿದ್ದೇವೆ, ಇನ್ನು ಕೆಲವೇ ವರ್ಷಗಳಲ್ಲಿ ಪ್ರಧಾನಿ ಮೋದಿ ಅವರ 5 ಟ್ರಿಲಿಯನ್ ಡಾಲರ್ ಎಕಾನಾಮಿ ಕನಸು ನನಸಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರಿನ ರಿಂಗ್ ರಸ್ತೆಯ ವ್ಯಾಪ್ತಿಯಲ್ಲಿ 8 ಯೋಜನೆಗಳ ನೀಲನಕ್ಷೆ ರೂಪಿಸಿದ್ದೇವೆ. ಪ್ರವಾಸೋದ್ಯಮ, ಕೈಗಾರಿಕೋದ್ಯಮ, ಅರೆವಾಹಕ, ರಿಯಲ್ ಎಸ್ಟೇಟ್ ಉದ್ಯಮಗಳಿಗೆ ಹೆಚ್ಚು ಒತ್ತು ನೀಡಿ, ಸರ್ಕಾರಕ್ಕೆ ಹಾಗೂ ಮೈಸೂರಿನ ಪ್ರಗತಿಗೆ ಸಹಕಾರಿಯಾದ ಜನಸ್ನೇಹಿ ಯೋಜನೆ ರೂಪಿಸಿದ್ದೇವೆ. ನಮ್ಮ ಯೋಜನೆಗಳನ್ನು ಸಿಎಂ ಸಿದ್ದರಾಮಯ್ಯ ಅವರ ಗಮನಕ್ಕೆ ತಂದು ಮನವರಿಕೆ ಮಾಡುತ್ತೇವೆ. ಅವರೂ ಮೈಸೂರಿನವರೇ ಆದ್ದರಿಂದ ಸಕಾರಾತ್ಮಕವಾಗಿ ಸ್ಪಂದಿಸುವ ವಿಶ್ವಾಸವಿದೆ ಎಂದರು.

ಮೊದಲ ಅವಧಿಯಲ್ಲಿ ಆದಿಶೇಷನಗೌಡ ತಂತ್ರಜ್ಞಾನ ಮಾಹಿತಿ, ಎರಡನೇ ಅವಧಿಯಲ್ಲಿ ವಿವಿಧ ವಿಭಾಗದ ನುರಿತ ತಜ್ಞರು ಸಂವಾದ ನಡೆಸಿ ಮಾಹಿತಿ ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಸಿಆರ್‌ಡಿಐ ಅಧ್ಯಕ್ಷ ಶ್ರೀ ಹರಿ ದ್ವಾರಕನಾಥ್, ನರೆಡ್ಕೋ ಮೈಸೂರು ಉಪಾಧ್ಯಕ್ಷ ವಿ.ಸಿ.ರವಿಕುಮಾರ್, ಕಾರ್ಯದರ್ಶಿ ಎಂ.ಎಲ್.ನಾಗೇಂದ್ರ, ನರೆಡ್ಕೋ ಜಂಟಿ ಕಾರ್ಯದರ್ಶಿ ಸುಧೀಂದ್ರ ಜಿ.ಕೆ ಮತ್ತಿತರರು ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ಪತ್ನಿ : "ನೀವು ಇದ್ದೀರಾ. ಏನು ಪ್ರಯೋಜನ? ಪಕ್ಕದ ಮನೆಯವರನ್ನು ನೋಡಿ, ಅವರೇ ಹೆಂಡತಿಯನ್ನು ಹೂವುಗಳಲ್ಲಿ ಮುಳುಗಿಸ್ತಾರೆ!"

ಗಂಡ : "ನೀನೂ ಹೀಗೆ ಹೇಳ್ತೀಯಲ್ಲ. ಅವರದು ಹೂವಿನ ವ್ಯಾಪಾರ, ನಂದು ಕಾಳುಮೆಣಸಿನ ವ್ಯಾಪಾರ, ಅದರಲ್ಲೇ ಮುಳುಗಿಸಲಾ?"

ಮೈಸೂರು ಮಿತ್ರ

ಗುರುವಾರ, 1 ಜೂನ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಶಾಂತಿಯಿಂದ ಸಂಪಾದಿಸಬಹುದಾದ ವಿಜಯ, ಸಂಗ್ರಾಮದಿಂದ ಸಾಧಿಸಬಹುದಾದುದಕ್ಕಿಂತ ಕಡಿಮೆಯದ್ದೇನಲ್ಲ. –ಜಾನ್ ಮಿಲ್ಟನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹತ್ತು ಆಡಬಹುದು, ಒಂದು ಬರೆಯಲಾಗದು

ನಿಮ್ಮ ಪತ್ರಗಳು

ಶಾಲೆಯಲ್ಲಿ ಮಕ್ಕಳಿಗೆ ಕಲಿಕೆಯ ಜೊತೆ ಸಂಸ್ಕಾರವನ್ನು ಬೆಳೆಸೋಣ

ಮಾನ್ಯರೆ,

ಬೇಸಿಗೆ ರಜೆ ಮುಗಿದಿದೆ. ಮೋಜು–ಮಸ್ತಿ ಮಾಡಿ ಮಕ್ಕಳು ಆನಂದದ ಕಡಲಿನಲ್ಲಿ ತೇಲಾಡಿದ್ದಾರೆ. ಮತ್ತೆ ಶಾಲೆ ಎಂದಾಕ್ಷಣ ಮಕ್ಕಳು ಒಮ್ಮೆಲೇ ಮುಖ ಬಾಡಿಸಿಕೊಂಡು ಬಿಡುತ್ತಾರೆ. ಕೆಲವರು ಹರ್ಷದಿಂದ ಕಿರುನಗೆ ಬೀರುತ್ತಾರೆ. ಕಾಲ ಉರುಳುವ ಹಾಗೆ ವಿದ್ಯಾರ್ಥಿಗಳು ತಮ್ಮ ತರಗತಿಯ ತೇರ್ಗಡೆ ಹೊಂದಿ ಬಡ್ತಿ ಹೊಂದುತ್ತಾರೆ.

ಇದರೊಟ್ಟಿಗೆ ಅವರಲ್ಲಿ ವರ್ಷದಿಂದ ವರ್ಷಕ್ಕೆ ಬದಲಾವಣೆ ಗುಣಗಳನ್ನು ನಾವು ಸೂಕ್ಷ್ಮವಾಗಿ ಪರಿಶೀಲಿಸಬೇಕು. ಪೋಷಕರು ಮತ್ತು ಶಿಕ್ಷಕರ ಬಾಂಧವ್ಯ ಗಟ್ಟಿಯಾದಾಗ ಮಾತ್ರ ಸಮಾಜಕ್ಕೆ ಒಬ್ಬ ಉನ್ನತ ವಿದ್ಯಾರ್ಥಿಯನ್ನು ಕೊಡಲು ಸಾಧ್ಯ. ಇಲ್ಲವಾದರೆ ಅದು ಕೇವಲ ನೆಪ ಮಾತ್ರದ ವಿದ್ಯಾರ್ಥಿಯಾಗಿ ಏನೋ ಒಂದು ಕಲಿತು ಸರಾಸರಿಯಲ್ಲಿ ಉತ್ತೀರ್ಣರಾಗಿ ಹೋಗಿ ಬಿಡುತ್ತಾರೆ. ಮಕ್ಕಳಲ್ಲಿ ನಾವು ಒಳ್ಳೆಯ ಮೌಲ್ಯವನ್ನು ತುಂಬಬೇಕು. ಶಿಸ್ತಿನ ಮಹತ್ವದ ಬಗ್ಗೆ ಮನೆ–ಶಾಲೆ ಎರಡರಲ್ಲಿಯೂ ಕೇಳಿದಾಗ ಮಾತ್ರ ಆ ಮಗು ಒಬ್ಬ ಸಮಾಜದ ಆಚಾರ ನಾಗರಿಕನಾಗಿ ಮತ್ತು ಶಾಲೆಯಲ್ಲಿ ಉತ್ತಮ ಸಂಸ್ಕಾರವಂತನಾಗಿ ಹೊರಹೊಮ್ಮುತ್ತಾನೆ. ಶಾಲೆಯು ಒಂದು ಜ್ಞಾನ ದೇಗುಲವಿದ್ದಂತೆ ಎಂದಷ್ಟೇ ಮಕ್ಕಳಿಗೆ ಹೇಳಿದರೇ ಸಾಲದು. ದೇಗುಲದಲ್ಲಿ ಅನುಸರಿಸುವ ಆಚಾರವನ್ನು, ಮೌಲ್ಯಗಳನ್ನು ಶಾಲೆಯಲ್ಲಿ ಅನುಸರಿಸಬೇಕಲ್ಲವೇ?

ಮಗುವಿನ ಪ್ರತಿಯೊಂದು ಕಾರ್ಯದಲ್ಲೂ ಪೋಷಕರು ಮತ್ತು ಶಿಕ್ಷಕರು ಜೊತೆಯಾಗಿ ನಿಂತು ಪ್ರೋತ್ಸಾಹಿಸಿ ಪ್ರೇರಣೆ ನೀಡಿ ಉನ್ನತ ಗುರಿಯತ್ತ ಕರೆದೊಯ್ಯಬೇಕು. ಶಾಲೆಗಳಲ್ಲಿ ಪಾಠ ಬೋಧನೆ ಕೇವಲ ಪಠ್ಯ ವಿಷಯಗಳನ್ನು ಬೋಧಿಸುವುದಷ್ಟಕ್ಕೆ ಸೀಮಿತವಾಗಿರಬಾರದು. ಇದರೊಟ್ಟಿಗೆ ಅವನಿಗೆ ಆಗಿಂದಾಗ್ಗೆ ಸಾಮಾಜಿಕ ಮೌಲ್ಯಗಳು ಮತ್ತು ಮಾನವೀಯ ಮೌಲ್ಯಗಳ ಬಗ್ಗೆ ತಿಳಿಹೇಳಬೇಕು. ಇವುಗಳನ್ನು ವಿದ್ಯಾರ್ಥಿಗಳಲ್ಲಿ ಅಂತರ್ಗತ ಮಾಡಿಸಬೇಕು. ಮಗುವನ್ನು ಉತ್ತಮ ಗುಣಗಳನ್ನು ಬೆಳೆಸಿಕೊಳ್ಳಲು ಬೇಕಾಗುವ ಉತ್ತಮ ಮತ್ತು ಆರೋಗ್ಯಕರವಾದ ಸಾತ್ವಿಕ ಪರಿಸರವನ್ನು ಮನೆ ಮತ್ತು ಶಾಲೆ ಎರಡರಲ್ಲೂ ಒದಗಿಸಿಕೊಡಬೇಕು. ಹೀಗೆ ಮಾಡಿದಾಗ ಮಗು ಸಮಾಜದಲ್ಲಿ ಒಬ್ಬ ಉನ್ನತ ವ್ಯಕ್ತಿಯಾಗಿ ಹೊರಹೊಮ್ಮುತ್ತಾನೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲಾ ಅಲ್ಲವೇ? ಒಮ್ಮೆ ನಾವು ಕೂಲಂಕಷವಾಗಿ ಯೋಚಿಸಬೇಕು. ಎತ್ತ ಸಾಗುತ್ತಿದೆ ನಮ್ಮ ಮಕ್ಕಳ ಮುಂದಿನ ಭವಿಷ್ಯ ಎಂಬುದನ್ನು ಆಲೋಚಿಸುವುದು ಅನಿವಾರ್ಯ.

ಇತ್ತೀಚೆಗಂತು ಮಕ್ಕಳು ಮೊಬೈಲ್ ದಾಸರಾಗಿಬಿಟ್ಟಿದ್ದಾರೆ. ಮೊಬೈಲ್ ಇಲ್ಲದ ನನಗೆ ಯಾರು ಸ್ನೇಹಿತರೇ ಇಲ್ಲವೆಂಬಷ್ಟರ ಮಟ್ಟಿಗೆ ಮಕ್ಕಳು ಮೊಬೈಲ್ ಅನ್ನು ಅಚ್ಚಿಕೊಂಡುಬಿಟ್ಟಿದ್ದಾರೆ. ಈ ಬೇಸಿಗೆ ರಜೆಯಲ್ಲಿ ಮಕ್ಕಳು ತಮ್ಮ ಸ್ನೇಹಿತರೊಡನೆ ಆಟವಾಡಿಯೋ, ತನ್ನ ತಂದೆ–ತಾಯಿಯೊಡನೆ ಕಾಲ ಕಳೆದಿದ್ದಕ್ಕಿಂತಲೂ, ತನ್ನ ಸಹೋದರ ಸಹೋದರಿಯರೊಟ್ಟಿಗೆ ಸಮಯ ಕಳೆದದ್ದಕ್ಕಿಂತ ಅಧಿಕವಾಗಿ ಮೊಬೈಲ್ ಒಟ್ಟಿಗೆ ತನ್ನ ಸಮಯವನ್ನು ವ್ಯಯ ಮಾಡಿರುತ್ತಾರೆ ಎಂಬುದರಲ್ಲಿ ಯಾವುದೇ ಅನುಮಾನವು ಬೇಡ ಅಲ್ಲವೇ?

ಹೀಗೆ ಮುಂದುವರೆದರೆ ನಮ್ಮ ಸಂಸ್ಕಾರ, ಸಂಸ್ಕೃತಿ ಎಲ್ಲವೂ ಮರೆತು ಹೋಗುತ್ತದೆ. ಮುಂದೊಂದು ದಿನ ಇವೆಲ್ಲವನ್ನು ಪುಸ್ತಕಗಳಲ್ಲಿ ಓದಿ ತಿಳಿಯುವ ಪರಿಸ್ಥಿತಿ ಎದುರಾಗುತ್ತದೆ. ಹೀಗಾಗಬಾರದು ನಮ್ಮ ಸಂಸ್ಕಾರವನ್ನು ನಾವು ಎತ್ತಿಹಿಡಿಯಬೇಕು. ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬ ಗಾದೆ ಮಾತನ್ನು ಗಮನದಲ್ಲಿಟ್ಟುಕೊಂಡು ನಾವು ಸಾಗಬೇಕಿದೆ. ಮಕ್ಕಳಿಗೆ ಚಿಕ್ಕಂದಿನಿಂದಲೇ ಶಾಲೆ–ಮನೆ ಎರಡರಲ್ಲೂ ಬೇಕಾದ ಉತ್ತಮವಾದ ಪರಿಸರವನ್ನು ಪೋಷಕ ಮತ್ತು ಶಿಕ್ಷಕರು ಒಟ್ಟಿಗೆ ಒದಗಿಸಿ ಕೊಡೋಣ. ಅವರಲ್ಲಿನ ಅನಾಚಾರದ ಗುಣಗಳನ್ನು ಬೇರು ಸಮೇತ ಕಿತ್ತೊಗೆಯೋಣ, ಅವರಲ್ಲಿರುವ ದುರ್ನಡತೆಗಳನ್ನು ಅಳಿಯೋಣ. ಸಮಾಜದಲ್ಲಿ ಒಬ್ಬ ಉತ್ತಮ ಆಚಾರವಂತ ನಾಗರಿಕನಾಗಿ ಹೊರಹೊಮ್ಮುವಂತೆ ನೋಡಿಕೊಳ್ಳೋಣ. ನಮ್ಮ ನಾಡನ್ನು ಉತ್ತಮ ನಾಡನ್ನಾಗಿ ಬದಲಿಸೋಣ!

–ಅನಿಲ್ ರಾಜ, ಸಿದ್ಧಾರ್ಥನಗರ, ಮೈಸೂರು.

ಆಧಾರ್ ಲಿಂಕ್ ಹೆಸರಲ್ಲಿ ಜನರಿಗೆ ಮೋಸ ಮಾಡುತ್ತಿರುವವರ ಮೇಲೆ ಕ್ರಮವಿಲ್ಲವೇ?

ಮಾನ್ಯರೆ,

ಈಗಾಗಲೇ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದೆ. ಅಧಿಕಾರಕ್ಕೆ ಬರುವ ಮೊದಲು ನಾವು ಅಧಿಕಾರಕ್ಕೆ ಬಂದರೆ ಮಹಿಳೆಯರಿಗೆ ಗೃಹಲಕ್ಷ್ಮೀ ಯೋಜನೆ ಅಡಿಯಲ್ಲಿ 2000 ರೂ. ನೀಡುವುದಾಗಿ ಹೇಳಿದೆ. ರಾಜ್ಯದಲ್ಲಿ ಮೇ 13ರಂದು ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದ ನಂತರ ಗೃಹಲಕ್ಷ್ಮೀ ಯೋಜನೆ ಬಗ್ಗೆ ಅಧಿಕೃತ ಮಾಹಿತಿಯನ್ನು ಯಾವುದೇ ಸರ್ಕಾರಿ ಕಚೇರಿಗಳಿಗೆ ಸರ್ಕಾರವೇ ಇನ್ನೂ ಕೂಡ ಅಧಿಸೂಚನೆಯನ್ನು ಹೊರಡಿಸಿಲ್ಲವಾದರೂ ರಾಜ್ಯದಲ್ಲಿರುವ ಕೆಲವು ಸೈಬರ್ ಸೆಂಟರ್‌ಗಳು ಹಾಗೂ ಸಿಎಸ್‌ಸಿ ಕೇಂದ್ರಗಳು ಸಾರ್ವಜನಿಕರಿಗೆ ಪಡಿತರ ಚೀಟಿ ಮತ್ತು ಆಧಾರ್ ಲಿಂಕ್‌ಗೆ ಮೇ 31 ಕೊನೆಯ ದಿನ ಎಂದು ಸುದ್ದಿ ಹಬ್ಬಿಸಿ ರಾಜ್ಯದ ವಿವಿಧ ಭಾಗಗಳಲ್ಲಿ 250 ರೂ. ವಸೂಲಿ ಮಾಡುತ್ತಿರುವುದು ಗ್ರಾಮೀಣ ಭಾಗದ ಜನರಿಗೆ ತಲೆನೋವಾಗಿ ಪರಿಣಮಿಸಿದೆ. ಇದೇ ರೀತಿ ರಾಜ್ಯದಲ್ಲಿ ಇನ್ನೆಷ್ಟು ಭಾಗಗಳಲ್ಲಿ ಈ ದಂಧೆಯು ನಡೆಯುತ್ತಿದೆ. ಸರ್ಕಾರದ ಅಧಿಸೂಚನೆಯು ಬರುವವರೆಗೂ ಸಾರ್ವಜನಿಕರಿಗೆ ವಂಚನೆ ಮಾಡುತ್ತಿರುವುದು ಕಂಡು ಬಂದರೆ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಬೇಕು.

– ನಾಗೇಶ್, ಮಾನಸಗಂಗೋತ್ರಿ, ಮೈಸೂರು

ಬಿಎಂಶ್ರೀ ನಗರಕ್ಕೆ ಬಸ್ ಸೌಕರ್ಯ ಕಲ್ಪಿಸಿ

ಮಾನ್ಯರೆ,

ಮೈಸೂರಿನ ಬಿಎಂಶ್ರೀ ನಗರದಲ್ಲಿ ಬಸ್ ಸೌಲಭ್ಯದ ಕೊರತೆಯಿದ್ದು, ಇದರಿಂದ ವಿದ್ಯಾರ್ಥಿ ಹಾಗೂ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದೆ. ಇಲ್ಲಿನ ಜನರು ತಮ್ಮ ಊರಿಗೆ ಅಥವಾ ಕೆಲಸಕ್ಕೆ, ಶಾಲಾ–ಕಾಲೇಜಿಗೆ ಹೋಗಬೇಕಾದರೆ ಪ್ರತಿ ಎರಡು ಕಿಲೋ ಮೀಟರ್ ಅಂದರೆ ಬಿಎಂಶ್ರೀ ನಗರದಿಂದ ಮೇಟಗಳ್ಳಿಯವರೆಗೆ ನಡೆದು ಬಸ್ಸಿನಲ್ಲಿ ಪ್ರಯಾಣ ಮಾಡಬೇಕಾಗಿದೆ. ಇದರಿಂದ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗುತ್ತಿದೆ. ಆದ್ದರಿಂದ ಬಸ್ ವ್ಯವಸ್ಥೆ ಮಾಡಬೇಕಾಗಿ ತಮ್ಮಲ್ಲಿ ಮನವಿ.

–ಶರತ್.ಎಸ್.ಆರ್, ಮಹಾರಾಜ ಕಾಲೇಜು, ಮೈಸೂರು.



ಕಾರ್ಕಳ ಆನಂದ ಭಟ್
ಮೊ : 7676554198
ಕಾರ್ಕಳ – 574 104 ಉಡುಪಿ ಜಿಲ್ಲೆ

ದಿಕ್ಕುದೆಸೆ

ಭಾರತದಲ್ಲಿ ರಸ್ತೆ ಅಪಘಾತದಲ್ಲಿ ಪ್ರತಿ ಗಂಟೆಗೆ 17 ಮಂದಿ ಬಲಿ!

"ದೇಶದಲ್ಲಿ ಶೇ.81ರಷ್ಟು ಅಪಘಾತಗಳು ಕೆಟ್ಟ ರೀತಿಯ ವಾಹನ ಚಾಲನೆಯಿಂದಾಗುತ್ತಿದೆ. ಹದಿಹರೆಯದವರು ವಾಹನ ಚಲಾಯಿಸುವಾಗ ಗಮನ ಸೆಳೆಯುವ ಉದ್ದೇಶದಿಂದ ಮಾಡುವ ಡ್ರೈವಿಂಗ್ ಚೇಷ್ಟೆಗಳು. ಥ್ರಿಲ್‌ಗಾಗಿ (Thrill) ಅತೀ ವೇಗದಲ್ಲಿ ವಾಹನ ಚಲಾಯಿಸುವುದು, ಅಸಮರ್ಪಕ ವಾಹನ ಚಾಲನಾ ತರಬೇತಿ. 2018ರ ಪ್ರಕಾರ ದೇಶದಲ್ಲಿ ಶೇ.26ರಷ್ಟು ಚಾಲಕರು ಡ್ರೈವಿಂಗ್ ಲೈಸೆನ್ಸ್ ಹೊಂದಿಲ್ಲ. ನಗರಗಳಲ್ಲಿ ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಬೆಳವಣಿಗೆಯಲ್ಲಾಗುತ್ತಿರುವ ಸಂಕೀರ್ಣತೆ, ಅವೈಜ್ಞಾನಿಕ ನಗರಾಭಿವೃದ್ಧಿ ಯೋಜನೆಗಳು, ಅತೀ ವೇಗವಿರುವ ಹೊಸ ತಲೆಮಾರಿನ ವಾಹನಗಳು ಮತ್ತು ಯುವ ಜನರಿಗೆ ಅವುಗಳ ಮೇಲಿರುವ ತೀವ್ರ ಆಕರ್ಷಣೆ. ಅಪಾಯಕಾರಿ ಕಿರಿದಾದ ರಸ್ತೆ, ಅವೈಜ್ಞಾನಿಕ ರಸ್ತೆ ನಿರ್ಮಾಣಗಳು, ಮಾದಕ ವಸ್ತುಗಳು, ಮದ್ಯಪಾನ ಮಾಡಿ ವಾಹನ ಚಾಲನೆ, ಡ್ರೈವಿಂಗ್‌ನಲ್ಲಿ ಮೊಬೈಲ್‌ನಲ್ಲಿ ಸಂಭಾಷಣೆ ಮಾಡುವುದು, ಒಂದು ಮೊಬೈಲ್ ಕರೆ ನಮ್ಮ ಜೀವನದ ಅಂತಿಮ ರಿಂಗ್‌ಟೋನ್ ಆಗುವ ಸಾಧ್ಯತೆಗಳಿವೆ.



ಜಗತ್ತಿನಲ್ಲಿ ಅತೀ ಹೆಚ್ಚು ರಸ್ತೆ ಸಂಪರ್ಕ ಜಾಲವಿರುವ ದೇಶಗಳಲ್ಲಿ ಭಾರತವು ಅಮೇರಿಕದ ನಂತರದ ಸ್ಥಾನದಲ್ಲಿದೆ. ಭಾರತದಲ್ಲಿ ರಸ್ತೆಗಳು ಪ್ರಮುಖ ಸಾರಿಗೆ ಸಂಪರ್ಕ ಸಾಧನವಾಗಿವೆ. ಭಾರತದಲ್ಲಿ 2021ರ ಡಿಸೆಂಬರ್‌ನಲ್ಲಿ 62.16 ಲಕ್ಷ ಕಿ.ಮೀ. ರಸ್ತೆ ಸಂಪರ್ಕ ಜಾಲವಿತ್ತು. ಇದೇ ವೇಳೆ ಅಮೇರಿಕದಲ್ಲಿದ್ದ ರಸ್ತೆಗಳ ಒಟ್ಟು ಉದ್ದ 68.53 ಲಕ್ಷ ಕಿ.ಮೀ.. ಭಾರತದಲ್ಲಿ ಪ್ರತಿ ಒಂದು ಸಾವಿರ ಜನರಿಗೆ ಸುಮಾರು 5.13 ಕಿ.ಮೀ. ರಸ್ತೆ ಸೌಲಭ್ಯವಿದ್ದರೆ ಅಮೇರಿಕದಲ್ಲಿ ಈ ಪ್ರಮಾಣ 20.5 ಕಿ.ಮೀ. ಆಗಿದೆ. ಭಾರತದ ರಸ್ತೆ ಸಂಪರ್ಕ ಜಾಲದಲ್ಲಿ ಶೇ.71ರಷ್ಟು ಸರಕು ಸಾಗಣೆ ಮತ್ತು ಶೇ.85ರಷ್ಟು ಪ್ರಯಾಣಿಕರು ಸಂಚರಿಸುತ್ತಾರೆ. ಶೇ.70ರಷ್ಟು ಭಾರತೀಯ ರಸ್ತೆಗಳು ಸುಸಜ್ಜಿತವಾಗಿವೆ. ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಪ್ರಕಾರ 2021 ಮಾರ್ಚ್ ಅಂತ್ಯಕ್ಕೆ ಭಾರತವು ಸುಮಾರು 1.51 ಲಕ್ಷ ಕಿ.ಮೀ. ರಾಷ್ಟ್ರೀಯ ಹೆದ್ದಾರಿಗಳು ಮತ್ತು ಎಕ್ಸ್‌ಪ್ರೆಸ್ ವೇ ಹೊಂದಿತ್ತು. ಇದರೊಂದಿಗೆ 1.87 ಲಕ್ಷ ಕಿ.ಮೀ. ರಾಜ್ಯ ಹೆದ್ದಾರಿಗಳಿವೆ. 2020ರಲ್ಲಿ ದೇಶದ ಪ್ರಮುಖ ಕೈಗಾರಿಕೆ, ವಾಣಿಜ್ಯ ಮತ್ತು ಸಾಂಸ್ಕೃತಿಕ ನಗರಗಳನ್ನು ಸಂಪರ್ಕಿಸುವ 1.36 ಲಕ್ಷ ಕಿ.ಮೀ. ನಷ್ಟು ಚತುಷ್ಪಥ ಅಥವಾ ಹೆಚ್ಚಿನ ಲೇನ್‌ಗಳಿರುವ ಹೆದ್ದಾರಿಗಳು ಪೂರ್ಣಗೊಂಡು ಬಳಕೆಯಾಗುತ್ತಿವೆ. ಈವರೆಗೆ ದೇಶದಲ್ಲಿ ಒಟ್ಟು 608 ಹೈವೇಗಳಿವೆ.

ರಸ್ತೆ ಅಪಘಾತಗಳ ದೇಶ ಭಾರತ: ಜಗತ್ತಿನಲ್ಲಿ ಅತೀ ಹೆಚ್ಚು ರಸ್ತೆ ಸಂಪರ್ಕ ಜಾಲವಿರುವಂತೆ ಅತೀ ಹೆಚ್ಚು ರಸ್ತೆ ಅಪಘಾತಗಳಾಗುತ್ತಿರುವ ದೇಶವೆಂಬ ಕುಖ್ಯಾತಿಯು ಭಾರತಕ್ಕಿದೆ. ವಿಶ್ವದಲ್ಲಾಗುತ್ತಿರುವ ರಸ್ತೆ ಅಪಘಾತಗಳಲ್ಲಿ ಭಾರತದಲ್ಲೇ ಶೇ.10ರಷ್ಟು ಸಂಭವಿಸುತ್ತಿದೆ. 2022–23ರಲ್ಲಿ ಅತಿಯಾದ ವೇಗದಿಂದ ಶೇ.55.9, ಬೇಜವಾಬ್ದಾರಿ ಚಾಲನೆ ಮತ್ತು ಓವರ್ ಟೇಕ್‌ನಿಂದ ಶೇ.27.5, ಪ್ರತಿಕೂಲ ಹವಾಮಾನದಿಂದ ಶೇ.3.5, ಮದ್ಯಪಾನ, ಮಾದಕ ದ್ರವ್ಯ ಸೇವನೆಯಿಂದ ಶೇ.1.9, ತಾಂತ್ರಿಕ ಸಮಸ್ಯೆಯಿಂದ ಶೇ.3 ಹಾಗೂ ಭೂಕುಸಿತ, ವಿದ್ಯುತ್ ತಂತಿಗಳು, ಪ್ರಾಣಿಗಳ ದಿಢೀರ್ ಅಡ್ಡ ಬರುವಿಕೆ, ಬಂಡೆಗಳು ಉರುಳುವಿಕೆ ಮುಂತಾದ ಕಾರಣಗಳಿಂದ ಶೇ.9ರಷ್ಟು ಅಪಘಾತಗಳಾಗಿವೆ. ಪ್ರತಿ ವರ್ಷ ಭಾರತದಲ್ಲಿ ರಸ್ತೆ ಅಪಘಾತದಿಂದ ಸುಮಾರು 1.5 ಲಕ್ಷ ಜನರು ಸಾವಿಗೀಡಾಗುತ್ತಿದ್ದಾರೆ. ಜಗತ್ತಿನಲ್ಲಿ ಭಯೋತ್ಪಾದನೆ, ಧೂಮಪಾನ, ಮದ್ಯಪಾನ, ಗುಣಮುಖವಾಗದ ಕಾಯಿಲೆಗಳಿಗಿಂತ ಹೆಚ್ಚು ಜನರು ಅಪಘಾತದಲ್ಲಿ ಸಾಯುತ್ತಿದ್ದಾರೆ.

2022ರಲ್ಲಿ ರಸ್ತೆ ಅಪಘಾತದಲ್ಲಿ 1,55,627 ಮಂದಿ ಸಾವಿಗೀಡಾಗಿದ್ದಾರೆ. ಇದರಲ್ಲಿ ಶೇ.59.8ರಷ್ಟು ಸಾವುಗಳು ಅತಿಯಾದ ವೇಗದ ಚಾಲನೆಯಿಂದಾಗಿವೆ. 2019ರಲ್ಲಿ ಸಂಭವಿಸಿದ ಅಪಘಾತಗಳಲ್ಲಿ ಶೇ.71ರಷ್ಟು ಅತೀ ವೇಗದ ವಾಹನ ಚಾಲನೆಯಿಂದಾಗಿವೆ. ಹಿಂದಿನ 21 ವರ್ಷಗಳಲ್ಲಿ ರಸ್ತೆ ಅಪಘಾತದಲ್ಲಿನ ಮರಣ ಪ್ರಮಾಣದಲ್ಲಿ ಸತತ ಏರಿಕೆಯಾಗಿದೆ. 2000ನೇ ಇಸವಿಯಲ್ಲಿ ಪ್ರತಿ ನೂರು ಅಪಘಾತದಲ್ಲಿ 20 ಮಂದಿ ಮೃತರಾಗಿದ್ದರೆ, 2021ರಲ್ಲಿ ಈ ಪ್ರಮಾಣ 37ಕ್ಕೆ ಏರಿಕೆಯಾಗಿದೆ.

ಭಾರತದಲ್ಲಿ ಪ್ರತಿ ದಿನ 1,400ರಷ್ಟು ರಸ್ತೆ ಅಪಘಾತಗಳು ಸಂಭವಿಸುತ್ತಿದ್ದು, 400 ಮಂದಿ ಅಂದರೆ ಪ್ರತಿ ಗಂಟೆಗೆ 17 ಜನರು ಸಾವನ್ನಪ್ಪುತ್ತಿದ್ದಾರೆ. 2020ರಲ್ಲಿ ದೇಶದಲ್ಲಿ 3.66 ಲಕ್ಷ ರಸ್ತೆ ಅಪಘಾತಗಳಾದರೆ, 2021ರಲ್ಲಿ 4.32 ಲಕ್ಷ (ಶೇ.12 ಏರಿಕೆ) ಏರಿಕೆ ದಾಖಲಿಸಿದೆ. 2020ರಲ್ಲಿ ಅತೀ ವೇಗದ ವಾಹನ ಚಾಲನೆಗೆ 91,239 ಬಲಿಯಾದರೆ 2021ರಲ್ಲಿ ಇದೇ ಕಾರಣಕ್ಕೆ 1.07 ಲಕ್ಷ ಜನರು ಸಾವಿಗೀಡಾದರು. 2021ರಲ್ಲಿ ಮದ್ಯಪಾನ, ಮಾದಕ ದ್ರವ್ಯ ಸೇವಿಸಿ ವಾಹನ ಚಾಲನಾ ಪ್ರಕರಣಗಳಲ್ಲಿ 3,314 ಜನ ಮೃತರಾಗಿದ್ದರು. ಲೇನ್ ಶಿಸ್ತು ಉಲ್ಲಂಘನೆಯಿಂದ 8,122 ಸಾವು, ವಾಹನ ಚಾಲನೆ ವೇಳೆ ಮೊಬೈಲ್ ಬಳಕೆಯಿಂದ 2,982 ಸಾವು ಸಂಭವಿಸಿತು. ಇನ್ನೊಂದು ವಿಶೇಷವೆಂದರೆ ದೇಶದಲ್ಲಿ ಅಂಕು–ಡೊಂಕು, ತಿರುವುಗಳಿರುವ ರಸ್ತೆಗಳಿಗಿಂತ ನೇರ ರಸ್ತೆಗಳಲ್ಲೇ ಹೆಚ್ಚು ಅಪಘಾತಗಳಾಗಿವೆ. 2020ರಲ್ಲಿ ನಡೆದ 3.66 ಲಕ್ಷ ರಸ್ತೆ ಅಪಘಾತಗಳಲ್ಲಿ ನೇರ ರಸ್ತೆಗಳಲ್ಲಿ 2.37 ಲಕ್ಷ ಅಪಘಾತಗಳಾದರೆ (ಶೇ.65), 2021ರಲ್ಲಿ 4.32 ಲಕ್ಷ ಅಪಘಾತಗಳಲ್ಲಿ ನೇರ ರಸ್ತೆಗಳಲ್ಲಿ 2.78 ಲಕ್ಷ ಅಪಘಾತಗಳಾಗಿ 1.53 ಲಕ್ಷ ಜನರು ಸಾವಿಗೀಡಾಗಿದ್ದರು. ಅಭಿವೃದ್ಧಿ ದೇಶಗಳಿಗೆ ಹೋಲಿಸಿದಲ್ಲಿ ಭಾರತದಲ್ಲಿ ಸಾವಿನ ಪ್ರಮಾಣವು ಅತ್ಯಧಿಕವಾಗಿದೆ. ಅಮೇರಿಕದಲ್ಲಿ ಇದೇ ಅವಧಿಯಲ್ಲಿ 19.27 ಲಕ್ಷ ರಸ್ತೆ ಅಪಘಾತಗಳು ಸಂಭವಿಸಿದರೂ, ಸಾವಿಗೀಡಾದವರ ಸಂಖ್ಯೆ 36,560 ಆಗಿತ್ತು. ಜಪಾನ್‌ನಲ್ಲಿ 2021ರಲ್ಲಿ ಸಂಭವಿಸಿದ 4.30 ಲಕ್ಷ ರಸ್ತೆ ಅಪಘಾತಗಳಲ್ಲಿ ಕೇವಲ 4,166 ಜನರು ಮೃತರಾಗಿದ್ದರು. ಈ ದೇಶಗಳಲ್ಲಿ ರಸ್ತೆ ಅಪಘಾತಗಳಲ್ಲಿ ಅತ್ಯಲ್ಪ ಸಾವಿಗೆ ಕಾರಣಗಳೆಂದರೆ ಸುಸಜ್ಜಿತ, ಉತ್ಕೃಷ್ಟ ರಸ್ತೆಗಳು ಮತ್ತು ಅಲ್ಲಿನ ನಾಗರಿಕರು ರಸ್ತೆ ನಿಯಮಗಳನ್ನು ಸರಿಯಾಗಿ ಪರಿಪಾಲಿಸದಿರುವುದು.

ಕರ್ನಾಟಕದಲ್ಲಿ ರಸ್ತೆ ಅಪಘಾತಗಳು: ಕರ್ನಾಟಕದ ಹಿಂದಿನ ಲೋಕೋಪಯೋಗಿ ಖಾತೆ ಸಚಿವರಾಗಿದ್ದ ಸಿ.ಸಿ.ಪಾಟೀಲ್ ವಿಧಾನ ಪರಿಷತ್ತಿನಲ್ಲಿ ರಸ್ತೆ ಅಪಘಾತಗಳಿಗೆ ಸಂಬಂಧಿತ ನೀಡಿದ ಉತ್ತರದಲ್ಲಿ 2019ರಲ್ಲಿ 40,658 ಅಪಘಾತಗಳಲ್ಲಿ 10,958 ಮಂದಿ ಪ್ರಾಣ ಕಳೆದುಕೊಂಡಿದ್ದರು. 2020ರಲ್ಲಿ 34,178 ಅಪಘಾತಗಳಲ್ಲಿ 9,760 ಮಂದಿ ಮೃತರಾಗಿದ್ದರು. 2021ರಲ್ಲಿ 34,647 ಅಪಘಾತಗಳಲ್ಲಿ ಸಾವಿನ ಸಂಖ್ಯೆ 10,038 ಹಾಗೂ 2022ರ ನವೆಂಬರ್‌ವರೆಗೆ ರಾಜ್ಯಾದ್ಯಂತ ನಡೆದ 36,100 ರಸ್ತೆ ಅಪಘಾತಗಳಲ್ಲಿ 9,857 ಜನರು ಸಾವಿಗೀಡಾಗಿದ್ದರು. ದೇಶದಲ್ಲಿ ಶೇ.81ರಷ್ಟು ಅಪಘಾತಗಳು ಕೆಟ್ಟ ರೀತಿಯ ವಾಹನ ಚಾಲನೆಯಿಂದಾಗುತ್ತಿದೆ. ಹದಿಹರೆಯದವರು ವಾಹನ ಚಲಾಯಿಸುವಾಗ ಗಮನ ಸೆಳೆಯುವ ಉದ್ದೇಶದಿಂದ ಮಾಡುವ ಡ್ರೈವಿಂಗ್ ಚೇಷ್ಟೆಗಳು. ಥ್ರಿಲ್‌ಗಾಗಿ (Thrill) ಅತೀ ವೇಗದಲ್ಲಿ ವಾಹನ ಚಲಾಯಿಸುವುದು, ಅಸಮರ್ಪಕ ವಾಹನ ಚಾಲನಾ ತರಬೇತಿ. 2018ರ ಪ್ರಕಾರ ದೇಶದಲ್ಲಿ ಶೇ.26ರಷ್ಟು ಚಾಲಕರು ಡ್ರೈವಿಂಗ್ ಲೈಸೆನ್ಸ್ ಹೊಂದಿಲ್ಲ. ನಗರಗಳಲ್ಲಿ ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಬೆಳವಣಿಗೆಯಲ್ಲಾಗುತ್ತಿರುವ ಸಂಕೀರ್ಣತೆ, ಅವೈಜ್ಞಾನಿಕ ನಗರಾಭಿವೃದ್ಧಿ ಯೋಜನೆಗಳು, ಅತೀ ವೇಗವಿರುವ ಹೊಸ ತಲೆಮಾರಿನ ವಾಹನಗಳು ಮತ್ತು ಯುವ ಜನರಿಗೆ ಅವುಗಳ ಮೇಲಿರುವ ತೀವ್ರ ಆಕರ್ಷಣೆ. ಅಪಾಯಕಾರಿ ಕಿರಿದಾದ ರಸ್ತೆ, ಅವೈಜ್ಞಾನಿಕ ರಸ್ತೆ ನಿರ್ಮಾಣಗಳು, ಮಾದಕ ವಸ್ತುಗಳು, ಮದ್ಯಪಾನ ಮಾಡಿ ವಾಹನ ಚಾಲನೆ, ಡ್ರೈವಿಂಗ್‌ನಲ್ಲಿ ಮೊಬೈಲ್‌ನಲ್ಲಿ ಸಂಭಾಷಣೆ ಮಾಡುವುದು, ಒಂದು ಮೊಬೈಲ್ ಕರೆ ನಮ್ಮ ಜೀವನದ ಅಂತಿಮ ರಿಂಗ್‌ಟೋನ್ ಅಗುವ ಸಾಧ್ಯತೆಗಳಿವೆ. ಹೆಲ್ಮೆಟ್, ಸೀಟ್ ಬೆಲ್ಟ್ ಧರಿಸದಿರುವುದು, ರಸ್ತೆ ನಿಯಮ ಉಲ್ಲಂಘನೆ, ಲೇನ್ ಶಿಸ್ತು ಉಲ್ಲಂಘನೆ, ಸಿಗ್ನಲ್ ಜಂಪ್ ಇವುಗಳನ್ನು ಮೀರಿ ದೇಶದ ಜನರಲ್ಲಿ ವಾಹನ ಡ್ರೈವಿಂಗ್ ಸ್ವರೂಪ ಮತ್ತು ಹವ್ಯಾಸದಲ್ಲಿ ಬದಲಾವಣೆ ಆಗದಿರುವುದು ಅಪಘಾತ ಮತ್ತು ಸಾವಿನ ಸಂಖ್ಯೆ ಏರಿಕೆಗೆ ಕಾರಣವಾಗಿದೆ.

ರಸ್ತೆ ಅಪಘಾತ ತಪ್ಪಿಸುವ ಮಾರ್ಗಗಳು: ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ನಿರ್ಮಾಣ ಖಾತೆ ಸಚಿವ ನಿತಿನ್ ಗಡ್ಕರಿಯವರು 2025ರ ಒಳಗೆ ದೇಶದಲ್ಲಾಗುತ್ತಿರುವ ರಸ್ತೆ ಅಪಘಾತದ ಪ್ರಮಾಣದಲ್ಲಿ ಶೇ.50ರಷ್ಟು ಇಳಿಕೆಯಾಗಬೇಕೆಂದು ಆಗ್ರಹಿಸಿದ್ದಾರೆ. ಈ ರೀತಿಯಲ್ಲಿ ರಸ್ತೆ ಅಪಘಾತಗಳು ದೇಶದ ಆರ್ಥಿಕತೆಗೆ ಹೊಡೆತ ನೀಡುವುದರೊಂದಿಗೆ ಸಾಮಾಜಿಕ ಸಮಸ್ಯೆಗಳನ್ನು ಕೂಡ ಸೃಷ್ಟಿಸುತ್ತಿವೆ ಎಂದು ತಿಳಿಸಿದರು. ದೇಶದ ಮೋಟಾರ್ ವಾಹನ ನಿಯಂತ್ರಣ ಕಾಯ್ದೆ–1988 ಇದಕ್ಕೆ ಅನೇಕ ಹೊಸ ಕಾಯ್ದೆ. ತಿದ್ದುಪಡಿಗಳು, ನಿಯಮಗಳನ್ನು ತರುವ ಮೂಲಕ ಸರಕಾರವು ಅಪಘಾತ ನಿಯಂತ್ರಿಸುವ ಪ್ರಯತ್ನಗಳನ್ನು ಮಾಡುತ್ತಿದೆ. 2019ರಲ್ಲಿ ಈ ಕಾಯ್ದೆಯನ್ನು ಇನ್ನಷ್ಟು ಬಿಗಿಗೊಳಿಸಲು ಹೊಸ ತಿದ್ದುಪಡಿಗಳನ್ನು ತರಲಾಗಿದೆ. ಪ್ರತಿ ರಸ್ತೆಗೆ ನಿಗದಿಪಡಿಸಿದ ವೇಗದಲ್ಲೇ ವಾಹನ ಚಲಾಯಿಸುವುದು, ಗುಣಮಟ್ಟದ ರಸ್ತೆಗಳ ನಿರ್ಮಾಣ, ವೇಗಕ್ಕೆ ಕಡಿವಾಣ ಹಾಕಲು ವೈಜ್ಞಾನಿಕವಾಗಿ ಹಂಪ್‌ಗಳ ನಿರ್ಮಾಣ, ಸ್ಪೀಡ್ ಕ್ಯಾಮರಾ ಅಳವಡಿಸುವುದು. ವಾಹನ ಚಾಲಕರಿಗೆ ಟ್ರಾಫಿಕ್ ನಿಯಮಗಳು, ರಸ್ತೆ ದೀಪಗಳು, ಸಿಗ್ನಲ್‌ಗಳ ಬಗ್ಗೆ ಮತ್ತು ಸುರಕ್ಷಾ ನಿಯಮಗಳ ಬಗ್ಗೆ ತಿಳುವಳಿಕೆ ನೀಡುವುದು, ರಸ್ತೆ ಸುರಕ್ಷಾ ನಿಯಮಗಳು ಅಪಘಾತ ತಡೆಯುವ ಅತ್ಯುತ್ತಮ ರಕ್ಷಾ ಮಾಧ್ಯಮಗಳೆಂದು ತಿಳಿಯಬೇಕು. ಸುದೀರ್ಘ ತಡೆ ರಹಿತವಾಗಿ ವಾಹನ ಚಾಲನೆ ಮಾಡದಿರುವುದು. ರಸ್ತೆ ಸುರಕ್ಷೆ ಬಗ್ಗೆ ಶಿಕ್ಷಣ ಮತ್ತು ಕಟ್ಟುನಿಟ್ಟಾದ ಕಾನೂನು ಜಾರಿ ಚಾಲಕರಲ್ಲಿ ಮಾನಸಿಕ ಪರಿವರ್ತನೆ ತರುತ್ತದೆ. ವಾಹನಗಳ ನಡುವೆ ಸುರಕ್ಷಿತ ಅಂತರ ಇರಿಸಿಕೊಳ್ಳಲು ನಿರಾಕರಿಸುವ ಟೈಲ್ ಗೇಟಿಂಗ್ ಎಂಬ ಪದವು ಸಾಮಾನ್ಯವಾಗಿ ಭಾರತೀಯ ರಸ್ತೆಗಳಲ್ಲಿ ಕಂಡು ಬರುತ್ತದೆ. ಇದಕ್ಕಾಗಿ ಮೂರು ಸೆಕೆಂಡ್ ರೂಲ್ ಅಂದರೆ ಸುರಕ್ಷಾ ದೃಷ್ಟಿಯಿಂದ ರಸ್ತೆಗಳಲ್ಲಿ ವಾಹನಗಳ ನಡುವೆ ಕನಿಷ್ಠ ಮೂರು ಸೆಕೆಂಡ್‌ಗಳ ಅಂತರವಿರಬೇಕು ಅಥವಾ ಪ್ರತೀ ವಾಹನಗಳ ಮಧ್ಯೆ ಐದರಿಂದ ಆರು ಮೀಟರ್ ಅಂತರವಿರಬೇಕು. ಈ ಅಂತರವನ್ನು ಕಾಪಾಡಿದರೆ ಅಪಘಾತಗಳ ಅನಾಹುತದಿಂದ ಬಹುತೇಕ ಪಾರಾಗಬಹುದು ಎನ್ನುತ್ತಾರೆ. ಈ ನಿಯಮ ವೇಗಕ್ಕೆ ತಕ್ಕಂತೆ ಬದಲಾಗುತ್ತದೆ. ಕಾರು, ಜೀಪಿನಂತಹ ವಾಹನಗಳು 60–70 ಕಿ.ಮೀ. ವೇಗದಲ್ಲಿ 3 ಸೆಕೆಂಡ್ ರೂಲ್ ಅನುಸರಿಸಿದರೆ, 80 ಕಿ.ಮೀ. ವೇಗದಲ್ಲಿ ಕನಿಷ್ಠ ಐದು ಸೆಕೆಂಡ್ ಅಂತರ ಕಾಯ್ದುಕೊಳ್ಳುವುದು ಸೂಕ್ತವೆಂದು ಪರಿಣಿತರ ಅಭಿಪ್ರಾಯವಾಗಿದೆ. ವೇಗದ ವಾಹನ ಚಾಲನೆ, ಕೊನೆಯ ಚಾಲನೆಯಾಗಬಹುದು. ಇಂದು ಸತರ್ಕವಾಗಿ ಮಾಡಿದ ವಾಹನ ಚಾಲನೆ ನಾಳೆಗಳನ್ನು ನೋಡುವ ಅವಕಾಶ ನೀಡುತ್ತದೆ.

ವಿದ್ಯಾರ್ಥಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರ

ಕಠಿಣ ಪರಿಶ್ರಮ–ಕಲಿಕೆಯಲ್ಲಿ ಆಸಕ್ತಿಯಿದ್ದರೆ ಸಾಮಾನ್ಯ ಬಾಲಕ ಮುಖ್ಯಮಂತ್ರಿ ಆಗಬಹುದು; ಅದಕ್ಕೆ ನಾನೇ ಸಾಕ್ಷಿ

"ಬೇಸಿಗೆ ರಜೆ ಕಳೆದು ನಿನ್ನೆಯಿಂದ ಹೊಸ ಶೈಕ್ಷಣಿಕ ವರ್ಷ ಆರಂಭವಾಗಿದೆ. ರಾಜ್ಯಾದ್ಯಂತ ಶಾಲೆಗಳು ಪ್ರಾರಂಭವಾಗಿವೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಶಾಲೆಯ ಮಕ್ಕಳಿಗೆ ಪತ್ರ ಬರೆದಿದ್ದು, ಶಾಲೆಗೆ ಬರುವಂತೆ ಸ್ವಾಗತ ಬಯಸಿ ಶುಭಾಶಯ ಕೋರಿದ್ದಾರೆ.

ಪ್ರೀತಿಯ ಮಕ್ಕಳೇ...

ರಜಾದಿನಗಳನ್ನು ತಂದೆ–ತಾಯಿ, ಗೆಳೆಯ–ಗೆಳತಿಯರ ಜೊತೆ ಆನಂದದಿಂದ ಕಳೆದ ನಿಮ್ಮನ್ನು ಶಾಲೆಗಳು ಕೈಬೀಸಿ ಕರೆಯುತ್ತಿವೆ. ಕಳೆದ ಎರಡು–ಮೂರು ವರ್ಷಗಳಲ್ಲಿ ಕೊರೊನಾ ವೈರಾಣುವಿನಿಂದಾಗಿ ನೀವೆಲ್ಲ ವಿದ್ಯಾರ್ಥಿ ಜೀವನವನ್ನು ಸಂಪೂರ್ಣ ಅನುಭವಿಸಲಾಗದೆ ಅನೇಕ ಬಗೆಯ ಸಂಕಟ–ಸಂಕಷ್ಟಕ್ಕೆ ಈಡಾಗಿದ್ದೀರಿ. ಈಗ ನಾವು ಆ ಸವಾಲನ್ನು ಗೆದ್ದಿದ್ದೇವೆ, ಆರೋಗ್ಯದ ಪಾಠವನ್ನು ಕಲಿತಿದ್ದೇವೆ. ರಾಜ್ಯದ ಈ ಬಾರಿಯ ಶೈಕ್ಷಣಿಕ ವರ್ಷ ಇಂತಹ ಬದಲಾವಣೆಯ ತಂಗಾಳಿಯೊಂದಿಗೆ ಪ್ರಾರಂಭವಾಗಿದೆ. ಜ್ಞಾನ ದೇಗುಲಕ್ಕೆ ನಿಮಗೆಲ್ಲರಿಗೂ ಸ್ವಾಗತ. ಕೈಮುಗಿದು ಒಳಗೆ ಬನ್ನಿ.




ಶಾಲೆಯೆಂದರೆ ಬರೀ ಕಲ್ಲು ಕಟ್ಟಡವಲ್ಲ. ಅದೊಂದು ಜ್ಞಾನ ದೇಗುಲ. ಹೆತ್ತ ತಂದೆ–ತಾಯಿಗಳಂತೆ ಕಲಿಸುವ ಗುರುಗಳು ಕೂಡ ವಿದ್ಯಾರ್ಥಿಗಳ ಪಾಲಿನ ದೇವರು. ಈ ಶ್ರದ್ಧೆ ಮತ್ತು ಗೌರವ ಸದಾ ನಿಮ್ಮಲ್ಲಿರಲಿ. 'ಪ್ರತಿಯೊಬ್ಬರು ಹುಟ್ಟಿದಾಗ ವಿಶ್ವಮಾನವ, ಬೆಳೆಯುತ್ತಾ ಅಲ್ಪ ಮಾನವನಾಗುತ್ತಾನೆ' ಎಂದು ರಾಷ್ಟ್ರಕವಿ ಕುವೆಂಪು ಎಚ್ಚರಿಸಿದ್ದರು. ಪರೀಕ್ಷೆ–ಫಲಿತಾಂಶ ಎಲ್ಲವೂ ಮುಖ್ಯವಾದರೂ ಶಿಕ್ಷಣ ಎಂದರೆ ಅಷ್ಟೇ ಅಲ್ಲ. ಶಿಕ್ಷಣ ಎನ್ನುವುದು ನಮ್ಮಲ್ಲಿ ವೈಜ್ಞಾನಿಕ ಮತ್ತು ವೈಚಾರಿಕ ಅರಿವು ಮೂಡಿಸಬೇಕು, ಸತ್ಯ ಹೇಳುವ ಧೈರ್ಯವನ್ನು, ನ್ಯಾಯದ ಮಾರ್ಗದಲ್ಲಿ ಮುನ್ನಡೆಯುವ ಶಕ್ತಿಯನ್ನು ನೀಡಬೇಕು. ಅಂತಹ ಶಿಕ್ಷಣ ನಿಮ್ಮ ಪಾಲಿಗೆ ಒದಗಿ ಬಂದು ನೀವೆಲ್ಲರೂ ಮಹಾ ಮಾನವರಾಗಿ ಎಂದು ಹಾರೈಸುತ್ತೇನೆ.

ನಾನು ಹಳ್ಳಿಯ ಸಾಮಾನ್ಯ ರೈತ ಕುಟುಂಬದಿಂದ ಬಂದ ವ್ಯಕ್ತಿ. ಈಗ ನಿಮಗೆ ಇರುವ ಕಲಿಕೆಯ ಅವಕಾಶ ನನ್ನಂತಹವನಿಗೆ ಇರಲಿಲ್ಲ. ಒಂದನೇ ತರಗತಿಯಿಂದಲೇ ಶಾಲೆಗೆ ಹೋಗಲಾಗದೆ ಮರಳ ಮೇಲೆ ಕೈಬೆರಳುಗಳನ್ನೊತ್ತಿ ಅಕ್ಷರಾಭ್ಯಾಸ ಮಾಡಿ ನಾಲ್ಕನೇ ತರಗತಿಗೆ ನೇರವಾಗಿ ಸೇರಿದವನು ನಾನು. ಅಲ್ಲಿಂದ ಕಾನೂನು ವ್ಯಾಸಂಗ ಮುಗಿಸುವವರೆಗೆ ನನ್ನ ವಿದ್ಯಾರ್ಥಿ ಜೀವನ ಹೂವಿನ ಹಾದಿಯಾಗಿರಲಿಲ್ಲ. ಅಮಾಯಕರಾಗಿದ್ದ ಹೆತ್ತವರ ವಿರೋಧ, ಶೋಷಕರ ಅಡ್ಡಗಾಲು, ಹಣಕಾಸಿನ ಸಮಸ್ಯೆಗಳ ಜೊತೆ ಹೋರಾಡುತ್ತಲೇ ಬಂದವನು. ಕಠಿಣ ಶ್ರಮ ಮತ್ತು ಕಲಿಕೆಯ ಮೇಲೆ ಆಸಕ್ತಿ–ಶ್ರದ್ಧೆಗಳಿದ್ದರೆ ಸಾಮಾನ್ಯ ಕುಟುಂಬದಿಂದ ಬಂದ ಒಬ್ಬ ಬಾಲಕ ಕೂಡ ಮುಂದೊಂದು ದಿನ ರಾಜ್ಯದ ಮುಖ್ಯಮಂತ್ರಿಯೂ ಆಗಬಹುದು ಎನ್ನುವುದಕ್ಕೆ ನಾನೇ ಸಾಕ್ಷಿ. ಇದೇ ರೀತಿ ನಿಮ್ಮ ಆಸಕ್ತಿಯ ಕ್ಷೇತ್ರಗಳಲ್ಲಿ ಉನ್ನತ ಸ್ಥಾನಗಳಿಗೇರಬೇಕೆಂದು ನನ್ನ ಆಸೆ. ಇದೇ ಉದ್ದೇಶದಿಂದ ಕಳೆದ ಬಾರಿ ನಾನು ಮುಖ್ಯಮಂತ್ರಿಯಾಗಿದ್ದಾಗ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮಧ್ಯಾಹ್ನದ ಬಿಸಿ ಊಟ, ಕ್ಷೀರಭಾಗ್ಯ, ವಿದ್ಯಾಸಿರಿ, ವಿದ್ಯಾರ್ಥಿ ವೇತನ, ಶೂ ಮತ್ತು ಸಾಕ್ಸ್ ಮೊದಲಾದ ಯೋಜನೆಗಳನ್ನು ಜಾರಿಗೊಳಿಸಿದ್ದೆ. ಇವುಗಳಿಗೆ ಎದುರಾಗಿರುವ ಸಣ್ಣಪುಟ್ಟ ಅಡ್ಡಿ–ಆತಂಕಗಳನ್ನು ನಿವಾರಿಸಿ ಪುನರ್ ಚಾಲನೆ ನೀಡುವೆ.

ನೀವು ಪಡೆಯುವ ಶಿಕ್ಷಣ ನಿಮ್ಮ ತಂದೆ–ತಾಯಿ ಹೆಮ್ಮೆ ಪಡುವಂತಹ ಮಕ್ಕಳನ್ನಾಗಿ ಮತ್ತು ಸಮಾಜ ಪ್ರೀತಿಸುವ ಜವಾಬ್ದಾರಿಯುತ ನಾಗರಿಕರನ್ನಾಗಿ ರೂಪಿಸಲಿ. ಮುಂದಿನ ಜನಾಂಗವಾಗಿರುವ ನಿಮ್ಮಿಂದ ರಾಜ್ಯದ ಸರ್ವಜನಾಂಗದ ಶಾಂತಿಯ ತೋಟ ಸದಾ ನಳನಳಿಸುತ್ತಾ ಇರಲಿ. ಪಠ್ಯಪುಸ್ತಕಗಳಿಗಷ್ಟೇ ನಿಮ್ಮ ಓದನ್ನು ಸೀಮಿತಗೊಳಿಸಬೇಡಿ.

ನಿಮಗೆಲ್ಲರಿಗೂ ಹೊಸ ಶೈಕ್ಷಣಿಕ ವರ್ಷಕ್ಕೆ ಮತ್ತೊಮ್ಮೆ ಸ್ವಾಗತ ಮತ್ತು ಶುಭಾಶಯಗಳು.

ನಿಮ್ಮೆಲ್ಲರ ಪ್ರೀತಿಯ



Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಅಡುಗೆ ಭಟ್ಟರು ಮತ್ತು ಸಹಾಯಕರು P.G. ಗೆ ಬೇಕಾಗಿದ್ದಾರೆ.
6366200865

HOUSE FOR SALE
Luxurious House for Sale in Vijayanagar 1st Stage 40x60 East Facing Fully Teak Wood Furniture Bar Counter, Home Theatre, Italian Kitchen, 4BHK, 2 Car Parking
8217538285
8951975104

ಬೇಕಾಗಿದ್ದಾರೆ
ಗಂಧದ ಕಡ್ಡಿಯನ್ನು ಮಾರುವುದಕ್ಕೆ ಹುಡುಗ/ಹುಡುಗಿಯರು ಬೇಕಾಗಿದ್ದಾರೆ ಕಮೀಷನ್ ಆಧಾರದ ಮೇಲೆ
9341953012
0821-2566798

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ, ಪೆಟ್ರೋಲ್/ಗ್ಯಾಸ್ ತುಂಬಲು, ಪಾರ್ಟ್/ಫುಲ್ ಟೈಮ್ ಸಿಬ್ಬಂದಿ ಬೇಕಾಗಿದ್ದಾರೆ. ಕ್ಯಾಶಿಯರ್/ಹೆಲ್ಪರ್, ವಿದ್ಯಾರ್ಹತೆ: SSLC ಪಾಸ್. ಸಮಯ: ಬೆಳಿಗ್ಗೆ 6.30ರಿಂದ ಮತ್ತು ಸಂಜೆ : 6.00 ರಿಂದ
9844002226

ಮಂಟಪ ಮನೆ

ನಿತ್ಯ ಪೂಜೆ ಮಾಡಲು ನಿಮಗೊಂದು ದೇವರ ಮಂಟಪ ಬೇಕೇ ಬೀಟೆ ಮತ್ತು ಹಲಸು ಮರದಿಂದ ತಯಾರಿಸುತ್ತೇವೆ ಸಂಪರ್ಕಿಸಿ: ಶ್ರೀನಗರ ಮೈಸೂರು
9448207634
9036742526

ಶ್ರೀ ಗೌರಿಶಂಕರ ಟ್ರಾವೆಲ್ಸ್
28–6–23 (4 ದಿನ): ಭೀಮಾಶಂಕರ, ಶಿರಡಿ, ಘೃಷ್ಣೇಶ್ವರ, ಎಲ್ಲೋರ, ನಾಸಿಕ್, ಶನಿಸಿಂಗನಾಪುರ, ತ್ರಯ್ಯಂಬಕೇಶ್ವರ.
12–8–23 (7 ದಿನ): ಅಯೋಧ್ಯೆ, ಪ್ರಯಾಗ್ ರಾಜ್, ಕಾಶಿ, ಗಯಾ, ಬುದ್ಧ ಗಯಾ, ಬಾಬಾಬೈಧ್ಯನಾಥ್, ಇತ್ಯಾದಿ.
ವಿಮಾನ / ಎಸಿ ಬಸ್ / ಊಟ / ರೂಂ.
Mob: 9620002114

ರೂಂಬಾಯ್ಸ್ ಬೇಕಾಗಿದ್ದಾರೆ
: ಸಂಪರ್ಕಿಸಿ :
ಶ್ರೀ ಗಣೇಶ್ ಪ್ರಸಾದ್ ಲಾಡ್ಜ್
1096, ರಾಜಕಮಲ್ ಟಾಕೀಸ್ ಎದುರು, ಶಿವರಾಂಪೇಟೆ, ಮೈಸೂರು
Ph.: 9986756866

ಶಿಕ್ಷಕರು ಬೇಕಾಗಿದ್ದಾರೆ
ಸ್ಪಂದನ ವಿಶೇಷ ಶಾಲೆಗೆ ಎಂ.ಆರ್. ತರಬೇತಿ ಹೊಂದಿರುವ ಶಿಕ್ಷಕರು ಬೇಕಾಗಿದ್ದಾರೆ. ಶಾಲೆಯ ವಿಳಾಸ: ನಂ.944. 6ನೇ ಮೇನ್, ಶಿವರಾತ್ರೀಶ್ವರನಗರ ಬನ್ನಿಮಂಟಪ 'ಬಿ' ಮೈಸೂರು–15 ಅರ್ಹ ಶಿಕ್ಷಕರು ಸ್ವವಿವರಗಳೊಂದಿಗೆ ಸಂಸ್ಥೆಯ ಅಧ್ಯಕ್ಷರಿಗೆ ಅರ್ಜಿಸಲ್ಲಿಸಬಹುದು.
ningaiah.1952@gmail.com
9742241343

REQUIRED
Room Boys Required for Padmapriya Lodge, Yelwala
Contact: Vinay
9448554049

Teachers Required
Any Degree /D.Ed/B.Ed Qualified Candidates can walk-in-interview on Sunday 04.06.2023, 10.00 AM to 1.00 PM, Food and Accommodation free for Selected one's
8310234382
cambridgepublicschool903@gmail.com

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

100% TEAK WOOD FACTORY FINISH DOORS @ DEPOT RATES

10 YEARS WARRANTY
www.ssbuildmart.com
9901291267
9845426862

Alpha School of Fashion Design, Mysore

Become a Fashion Designer
NCVTE New Delhi approved courses
- 3 MONTHS CERTIFICATION COURSE
- 6 MONTHS DIPLOMA COURSE
- 1 YEAR ADVANCE DIPLOMA COURSE

ADMISSION OPEN
*HOSTEL AND PG AVAILABLE
Alpha School of Fashion Design No.66/2, Manandavadi Road, Near Ring Road Signal Junction, Srirampura, Mysore
782 993 7469

ಬೇಕಾಗಿದ್ದಾರೆ
ಹನುಮಂತು ಹೋಟೆಲ್‌ಗೆ ಹುಡುಗರು ಬೇಕಾಗಿದ್ದಾರೆ. ಸಂಬಳ: 10000 ದಿಂದ 12000, ಬಿ.ಎನ್.ಸ್ಟ್ರೀಟ್, ಮಾರ್ಕೆಟ್ ಬಿಲ್ಡಿಂಗ್, ಮಂಡಿಮೊಹಲ್ಲಾ, ಮೈಸೂರು ಸಂದರ್ಶನಕ್ಕೆ
30.5.2023 ರಿಂದ 9.6.2023ರವರೆಗೆ
ಸಂಪರ್ಕಿಸಿ:
9611431188

ಬೇಕಾಗಿದ್ದಾರೆ
ಕೆಲಸ: ಲಾಂಡ್ರಿಯಲ್ಲಿ ಇಸ್ತ್ರಿ ಮಾಡುವ ಕೆಲಸ, ಹೌಸ್ ಕೀಪಿಂಗ್, ಸಮಯ: ಬೆಳಿಗ್ಗೆ 9.00 ರಿಂದ ಸಂಜೆ 7.00 ರವರೆಗೆ, ಸಂಬಳ: 12,000–15000 ರೂಗಳು ವಿಳಾಸ: ವಿಜಯನಗರ 4ನೇ ಹಂತ, ಮೈಸೂರು
9035010382

ಮಾರಾಟಕ್ಕಿದೆ
ಗೋಣಿಕೊಪ್ಪ ಬೈಪಾಸ್‌ನಲ್ಲಿ 5 BHK ಮನೆ ಹಾಗೂ ಗೋಡೌನ್ ಮಾರಾಟಕ್ಕಿದೆ (5.5 ಸೆಂಟು) ಆಸಕ್ತರು ಸಂಪರ್ಕಿಸಿ:
9538102444
8971015729

2 BHK CORNER HOUSE AND 9 x 10 SHOP FOR RENT
on Giridarshini Layout main road, near Lalithamahal, Mysuru. Contact:
Mob: 9880779246

SITES FOR SALE
EAST FACING SITE
No. 52, EAST TO WEST 17.80/2 METER
NORTH TO SOUTH 9 METER
KANDAYANAGAR 1st STAGE
SRI RAMPURA, MYSORE
9945192300

DTCP SITES FOR SALE
DTCP Sites Rs. 699 per sq.ft., Near Jayapura, H.D. Kote Road, Mysore.
9590491194,9606783264

Sudarshan Saur SOLAR WATER HEATER

ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಕಾರ್ ಡ್ರೈವರ್ ಬೇಕಾಗಿದ್ದಾರೆ
ಅನುಭವವಿರುವ ಕಾರ್ ಡ್ರೈವರ್ ತಕ್ಷಣ ಬೇಕಾಗಿದ್ದಾರೆ
ಆಕರ್ಷಕ ಸಂಬಳವಿರುತ್ತದೆ.
Ph.: 9538361454

WANTED TEACHERS
Jnanajyoti Vidyalaya
HPS Beerihundi (English Medium)
NST/ Montessori-2
English Teacher-2
Mathematics, Science-2
Any Interested Candidates
Can apply contact 9845390377 8197057626

WANTED PRIMARY SCHOOL TEACHERS
Honourium: 12,000+Veg Food+accommodation Divya Deepa Charitable Trust Kenchalagudu, Manandavadi Road, Mysore-570008
9341369901, 9538499901
8088586087
www.divyadeepatrust.org

JOBNET
ಮೊಬೈಲ್‌ನಲ್ಲಿ ಕೆಲಸ
ಮನೆಯಲ್ಲೇ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳಿಗೆ 10,000 ರಿಂದ 20,000 ಸಂಪಾದಿಸಿ.
9731891409

ಸಂಪು ಕ್ಲೀನಿಂಗ್
ಸಂಪರ್ಕಿಸಿ:
8431541631

ಸೈಟು ಮಾರಾಟಕ್ಕಿದೆ
30x40, DTCP 'A' ಖಾತಾವುಳ್ಳ ಲೇಔಟ್ ಸೈಟ್ ಮಾರಾಟಕ್ಕಿದೆ. 11 ಲಕ್ಷದ 25 ಸಾವಿರಗಳು. ನಿರ್ಮಾಣ ಲೇಔಟ್, ತಳೂರು ಸರ್ಕಲ್ ಹತ್ತಿರ, ಮೈಸೂರು.
Mob: 9742198093

WANTED
1) Canter / Truck Driver (Heavy Licence)
2) Car Driver
Ph. No: 8884488181

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ಸಂಗೀತಾ ಹಾಡುಗಾರಿಕೆ:
ಸಂಗೀತಾ ಕೇಳುವವರಿಗೆ ಮತ್ತು ಹಾಡುವವರಿಗೆ ಸುವರ್ಣಾವಕಾಶ. ಬನ್ನಿ, ಹಾಡಿ ಆನಂದಿಸಿ ಬಹುಮಾನ ಗೆಲ್ಲಿ, ಸಿಂಗರ್ ಆಗುವ ಅವಕಾಶ ನಿಮ್ಮದು ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:
9901080314

ಮೈತ್ರಿ ಬುದ್ಧಿಮಾಂದ್ಯ ಮಕ್ಕಳ ವಿಶೇಷ ಶಾಲೆ
ದಾಖಲಾತಿ ಆರಂಭಗೊಂಡಿದೆ
ನಮ್ಮ ಮೈತ್ರಿ ಬುದ್ಧಿಮಾಂದ್ಯ ಮಕ್ಕಳ ಶಾಲೆಯು 40 ವರ್ಷಗಳಿಂದ 60 ವರ್ಷದ ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿ ಮಕ್ಕಳಿಗೆ, ವಿದ್ಯಾಭ್ಯಾಸ, ನೃತ್ಯ, ಯೋಗ, ಚಿತ್ರಕಲೆ, ಸಂಗೀತ & ವೃತ್ತಿ ತರಬೇತಿಗಳನ್ನು ನೀಡಲಾಗುತ್ತದೆ.
ಆಸಕ್ತರು ಸಂಪರ್ಕಿಸಿ: ಅಪೋಲೊ ಆಸ್ಪತ್ರೆಯ ಹತ್ತಿರ
7259639128,8618223393

ಪ್ರಮಾಣ ಪತ್ರ
ಮೈಸೂರು ಸಿಟಿ, ಮೇಟಗಳ್ಳಿ, ಹೆಬ್ಬಾಳು ಮುಖ್ಯ ರಸ್ತೆ, ಬಸವನಗುಡಿ, 3ನೇ ಕ್ರಾಸ್, ಮನೆ ನಂ. 163/1 ರಲ್ಲಿ ವಾಸವಾಗಿರುವ ಗಜಾನನ ರವರ ಮಗ ಶ್ರೀ ಉಮೇಶ ಗ ಹಿರೇಮಠ್, ಆದ ನಾನು ಪ್ರಮಾಣೀಕರಿಸುವುದೇನೆಂದರೆ, ನನ್ನ ಮಗನ ಹೆಸರು ಏಕಾಂತ ಉಮೇಶ ಹಿರೇಮಠ (Ekanth U Hiremath) ಎಂದಿದ್ದು, ಆದರೆ ಆಧಾರ್ ಕಾರ್ಡ್ ನಂ. 5420 2528 5235 ನಲ್ಲಿ ಏಕಾಂತ ಎಂದು ನಮೂದಾಗಿರುತ್ತದೆ. ಆದಾಗಿ ನನ್ನ ಮಗನ ಹೆಸರು ಏಕಾಂತ ಉಮೇಶ ಹಿರೇಮಠ (Ekanth U Hiremath) ಎಂದು ಈ ಮೂಲಕ ನೋಟರಿ ಎಂ. ಅನಂತಮೂರ್ತಿ ರವರ ಎದುರು ಪ್ರಮಾಣೀಕರಿಸಿರುತ್ತೇನೆ.
ಸಹಿ/– ಗಜಾನನ

AFFIDAVIT
I, Sundareshan.G, residing at Door No. 840, 10th Cross, Sharadadevi Nagar, Bogadi 2nd Stage, Mysore. I have a son named Nishanth. S, I voluntarily change his name to S. Nishan Arav, on my own free will, in front of Notary S. Kamala on 14-11-2022.
Sd/- Sundareshan G.

ಕಳೆದಿದೆ
ಸಾದಿಕ್ ಪಾಷ, ನಂ. 3100, 06ನೇ ಕ್ರಾಸ್, ಸತಾರ್ ಸೇಠ್ ಬ್ಲಾಕ್, ಲಷ್ಕರ್ ಮೊಹಲ್ಲಾ, ಮೈಸೂರು, ಇವರು ದಿನಾಂಕ 17–5–2023ರಂದು ಮಧ್ಯಾಹ್ನ 1.30 ರಲ್ಲಿ ಮಂಡಿ ಮೊಹಲ್ಲಾ, ಕಬೀರ್ ರಸ್ತೆಯಲ್ಲಿ ಹೋಗುತ್ತಿದ್ದಾಗ ನಮ್ಮ ಮನೆ ನಂ. 323, ರಾಜೀವ್ ನಗರ 1ನೇ ಹಂತ, ದೇವನೂರು ಎಕ್ಸ್‌ಟೆನ್ಷನ್, ಎನ್.ಆರ್. ಮೊಹಲ್ಲಾ, ಡಾಕ್ಯೂಮೆಂಟ್ ನಂ. MYN-1-07431-2003-04 in Book No. 2 dated 01-10-2023 ರ ದಾಖಲೆ ಕಳೆಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 9845950548

Change of Name
Arshia Banu, W/o Abdul Khader Sait, residing at 115, 3rd Cross, Bannimantap 'C' Layout, Mysuru, changed my name as Arshia Khader, on my own free will, in front of Notary Syed Ameer on 26-5-2023. I declare that hereafter in all records, deeds, and instrument writings and in all actions and procee-ding and in all dealing and transaction and upon all occasion whatsoever use and sign the said name of Arshia Khader.
Sd/- Arshia Khader

ಸಾಲ / Loans
- House Purchase Loan
- Site Purchase Loan
- Construction Loan
- Mortgage Loan

(MUDA, Corporation & Revenue).
77605-98705

WANTED USED SCHOOL BUS
Seating capacity between 25 to 30 Seats, 2015 Model Onwards
9448414014
7892154436

WANTED
We Require ITI Turner, Fitter, Electricians and Diploma in Mechanical, Preferably Female.
0821-2582668,7204445679
Mystech Machines
Q113, 4th Cross, 8th Main, Hebbal Industrial Estate, Mysore-570016

FOR SALE
1) 20x30, 30x40, 40x60 sites in H.D. Kote Road, Near Defence Apartment.
2) 12x36, G+2 house, Kuvempunagar.
3) 30x40, 40x60 Somanatha Nagar, attach.
4) 30x40 Duplex house, Srirampura.
9538690359, 9035990359

HOUSE FOR RENT
@ Saraswathipuram, Kuvempunagara & surroundings.
S.S. Property Services
Opp. Kuvempu School, S.S. Puram
93421-25252


ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ (ಕನ್ನಡ, ತೆಲುಗು, ಹಿಂದಿ). ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್. ಮೊಹಲ್ಲಾ. ಸಂಬಳ: 8000.
Mob: 8150005111

SITE FOR SALE
MUDA Allotment site
30x40 East, JP Nagara, Mysore, near New Kamakshi Hospital.
20x30 site, Srirampura, Mysore. Rs. 36 Lakhs.
Mob: 99004 64111

ಮನೆ ಬಾಡಿಗೆಗೆ ಇದೆ
ಗ್ರೌಂಡ್ ಫ್ಲೋರ್, 1 ಬಿಹೆಚ್‌ಕೆ, ಕೆ.ಆರ್. ಆಸ್ಪತ್ರೆ ಹತ್ತಿರ, ಮೈಸೂರು.
9448528575, 9035028575

WANTED TEACHERS
Qualification : BA, B.Ed/ BA, D.Ed (All subjects- English Medium)
Annapoorneshwari Higher Primery School
H.D.Kote Road Jayapura, Mysore
9739162162,8660909202
9886664566

ಬಾಡಿಗೆಗೆ
ಕೆ.ಜಿ.ಕೊಪ್ಪಲ್, ಕಾಂತರಾಜ ಅರಸ್ ಮುಖ್ಯ ರಸ್ತೆ, ಶ್ಯಾಮ್ ಸ್ಟೂಡಿಯೋ ಸರ್ಕಲ್ ಬಳಿ, ಮೊದಲನೇ ಮಹಡಿ ಮನೆ ಮತ್ತು 2ನೇ ಮಹಡಿ, (ಶೀಟ್ ಮನೆ) ವಾಣಿಜ್ಯ ಉದ್ದೇಶಕ್ಕಾಗಿ (Office Purpose)
7892719748
9008850627


ಹಾರ್ಡ್‌ವೇರ್ ಶಾಪ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
Paint and hardware shop is for sale
Contact: 9845336466
Near pumphouse circle
Size 25\60
All are For sale only shade sheet and tiles door are second

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಪೊಯ್ಸ್ ಎಲೆಕ್ಟ್ರಿಕ್ ಸ್ಕೂಟರ್
POISE ELECTRIC SCOOTER

Quick 55km/hr Max Speed
125-140 MILEAGE
LOAN FACILITY AVAILABLE
NX120 & GRACE
ENDUROMOTO
CALL: 9448042467, 8762272467

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ವಿಚ್ಚು ಕಲ್ಯಾಣ ಭಾಗ್ಯ
ಎಲ್ಲಾ ಜಾತಿಯ ವಧು, ವರರಿಗಾಗಿ ಸಂಪರ್ಕಿಸಿ: 1) ಮೊದಲನೇ ಮದುವೆ 2) ಎರಡನೇ ಮದುವೆ 3) Late Marriage 4) ವಿಧವೆ ವಿಧುರರು,
ಸಂಪರ್ಕಿಸಿ: ನಂ.445, 1ನೇ ಕ್ರಾಸ್, ಚಿಕ್ಕಮ್ಮ ಸ್ಕೂಲ್ ರಸ್ತೆ, ಹುಂಡಿ ಬೀದಿ, ಹಿನಕಲ್, ಮೈಸೂರು–570017
8722935334,8296856534

ಬೇಕಾಗಿದ್ದಾರೆ
ಕಂಪ್ಯೂಟರ್ ಆಫೀಸ್‌ನಲ್ಲಿ ಸರ್ವೀಸ್ ಎಂಜಿನಿಯರ್, ಕೆಲಸಕ್ಕೆ ITI ಅಥವಾ Diploma ಮಾಡಿರುವ, ಕಂಪ್ಯೂಟರ್‌ನಲ್ಲಿ ಪರಿಣಿತಿ ಹೊಂದಿರುವ 25 ವರ್ಷದೊಳಗಿನ ದ್ವಿಚಕ್ರ ವಾಹನ ಮತ್ತು ಲೈಸೆನ್ಸ್ ಹೊಂದಿರುವ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ.
8073393505

ಮನೆ ಸಾಲ
ಜನಮಿತ್ರ ಫಿನ್ ಸರ್ವ್ ಪ್ರೈ.ಲಿ.
#2921/ಎ, ಸರಸ್ವತಿಪುರಂ, ಮೈಸೂರು
11B ಮತ್ತು 9 & 11A ಖಾತಾಗಳಿಗೂ ಮುಡಾ & ಕಾರ್ಪೋರೇಷನ್ ಖಾತೆ ಇದ್ದರು, ಇಲ್ಲದಿದ್ದರೂ ಹಾಗೂ 15,000 ಮೇಲ್ಪಟ್ಟ ಸಂಬಳ ಇರುವವರಿಗೆ ಪರ್ಸನಲ್ ಲೋನ್ ಹಾಗೂ ಇಂಡಸ್ಟ್ರಿಯಲ್ ಮಾರ್ಟ್‌ಗೇಜ್ ಲೋನ್ ಸೌಲಭ್ಯ ದೊರೆಯುತ್ತದೆ.
8088647887

ಸೈಟು ಮಾರಾಟಕ್ಕಿದೆ
1) 30x40 (North) - 21 L (40 Ft. Road)
2) 25x30 (South) - 14 L (30 Ft. Road)
(ಸುವರ್ಣ ಕರ್ನಾಟಕ ಗೃಹ ನಿರ್ಮಾಣ ಸಂಘ (ರಿ)
MUDA Approved Layout
ಉದ್ಬೂರು ಗೇಟ್ ಹತ್ತಿರ (1 ಕಿ.ಮೀ.) ಹೆಚ್.ಡಿ. ಕೋಟೆ ರಸ್ತೆ ಹತ್ತಿರ
2) 20x40 (West) - 28 L (30 Ft. road). (fully developed layout). ಶ್ರೀನಿಧಿ ಎನ್‌ಕ್ಲೇವ್ (MUDA Approved), (ಸಾಯಿ ಗಾರ್ಮೆಂಟ್ಸ್ ಹತ್ತಿರ). ಹುಣಸೂರು ರಸ್ತೆ (Near MNC factory).
Mob: 9448739000

HOUSE FOR SALE
20x30, MUDA allotted New 3 BHK Duplex, fully furnished house, N/F Door at Dattagalli, Near Narayana Bakery. Price: 79 Lakhs. Contact owner.
Mob: 6361295132

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೇ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗ ದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು-1

ವಿಚ್ಚು ರಿಯಲ್ ಎಸ್ಟೇಟ್
ಜಮೀನು/ ಸೈಟು / ಮನೆ ಮಾರಾಟ ಹಾಗೂ ಖರೀದಿಗೆ, ಮನೆ ಭೋಗ್ಯಕ್ಕೆ / ಬಾಡಿಗೆಗೆ
ಸಂಪರ್ಕಿಸಿ: ನಂ.445, 1ನೇ ಕ್ರಾಸ್, ಚಿಕ್ಕಮ್ಮ ಸ್ಕೂಲ್ ರಸ್ತೆ, ಹುಂಡಿ ಬೀದಿ, ಹಿನಕಲ್ ಮೈಸೂರು–570017
ಮಹಿಳಾ ಅಕೌಂಟೆಂಟ್ ಬೇಕಾಗಿದ್ದಾರೆ.
8296856534,7349559459

ST.PAUL ENGLISH SCVHOOL
Bannimantapa, Mysore
WALK IN INTERVIEW ON Friday, 2nd June 2023 between 10.30am to 3.30 pm
Wanted Teachers
Qualified, Experience with Command in English
1. DEd Teachers for Primary and Higher Primary
2. BA BEd (English Medium)
3. Nurseruy Teacher
7349732300 / 9243526260
Admission are open from LKG to 10th Standard

MATCH MAKERS BRIDE / GROOMS
ವಧು/ವರರ ಮಾಹಿತಿ ಕೇಂದ್ರ
ಎಲ್ಲಾ ಜಾತಿಯ Govt Job, Private, Job, Business, Own Factory / Business, ಡಾಕ್ಟರ್, ಇಂಜಿನಿಯರ್ Diploma All Degree ಮೊದಲನೇ ಮದುವೆ, ಡೈವೋರ್ಸಿಗಳು, ವಿದುರರು, ವಿಧವೆಯರು, 60 ಸ್ವಂತತ್ರ್ಯ ವಧುಗಳಿಗೆ ವರಬೇಕು ಕರ್ನಾಟಕಾದ್ಯಂತ ಕಛೇರಿಯ ಲಕ್ಷಾಂತರ ವಧು–ವರರ ಆಯ್ಕೆಗಾಗಿ ನೇರ ಭೇಟಿನೀಡಿ
7975728012

ಗ್ಯಾಸ್ ಪೈಪ್ ಲೈನಿಂಗ್

ಸುರಕ್ಷತೆಗಾಗಿ ರಿಜಿಸ್ಟರ್ ಕಂಪನಿಯಿಂದ ಗ್ಯಾಸ್ ಲೈನಿಂಗ್ ಮಾಡಿಸುವುದು ಸೂಕ್ತ ಎಲ್ಲಾ ಕಂಪನಿಯ ಗ್ಯಾಸ್ ಸ್ಟೌವ್+ ಗ್ಯಾಸ್ ಗೀಜರ್+ಚಿಮಿನಿ ಸರ್ವೀಸ್+ಸೇಲ್ಸ್ ಲಭ್ಯ
22 ವರ್ಷಗಳ ಅನುಭವ
8088888115

HOUSE FOR RENT
2 BHK House available for rent near Vivekananda Circle
9538534447
7892380115

ಹೊಸ ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ
30x40-N/F, E ಡೋರ್ 3 BHK ಅಟ್ಯಾಚ್ ಬಾತ್ ಆಲ್‌ಟೀಕ್, ಇಟಾಲಿಯನ್ ಕಿಚನ್, ಕಾರ್ ಪಾರ್ಕ್ ಸೌಲಭ್ಯವಿದೆ. ಕಂದಾಯನಗರ, 1ನೇ ಹಂತ ಶ್ರೀರಾಂಪುರ, ಮೈಸೂರು
9901899355

ಬೇಕಾಗಿದ್ದಾರೆ
ಕನ್ನಿಕಾ ಕಾವೇರಿ ಎಜುಕೇಷನ್ ಸೊಸೈಟಿ(ರಿ)
ಹೆಚ್.ಪಿ.ಎಸ್&ಹೆಚ್.ಎಸ್.ಹೆಬ್ಬಾಳ್, ಮೈಸೂರು–16
1) ಶಿಕ್ಷಕ –01, D.Ed/BA,BEdಆಂಗ್ಲ ಮಾಧ್ಯಮ, ನುರಿತ ಶಿಕ್ಷಕರಿಗೆ ಮೊದಲ ಅವಕಾಶ
2) ಅಡುಗೆ ಮಾಡಲು – ಕೊಡಗಿನ ಮನೆಯಲ್ಲಿ ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ.
ಸಂದರ್ಶನ ದಿನಾಂಕ: 5–6–2023 ಬೆಳಿಗ್ಗೆ 11.00
9741849537

ಕೆಲಸಕ್ಕೆ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್, ಆನಂದೂರ್, ಲಕ್ಷ್ಮೀಪುರ, ಪಾಲಳ್ಳಿ, ಬಂಬೂಬಜಾರ್, ಚಾಮುಂಡಿಪುರಂ, ನಾಡನಹಳ್ಳಿ (ವಿದ್ಯಾವಿಕಾಸ್ ಕಾಲೇಜ್) ಹೆಬ್ಬಾಳ ಹತ್ತಿರ, ಫಾರಂನಲ್ಲಿ ಗಾರ್ಡನಿಂಗ್ ಕೆಲಸಕ್ಕೆ ಫ್ಯಾಮಿಲಿ ಬೇಕಾಗಿದ್ದಾರೆ. ಹೆಚ್.ಡಿಕೋಟೆ ರಸ್ತೆ, (ಋಷಿ ಸ್ಕೂಲ್ ಹತ್ತಿರ)
8310098788
6361439167

ಸಿದ್ಧ ಸಮಾಧಿ ಯೋಗ ಶಿಬಿರ
(ಧ್ಯಾನ, ಪ್ರಾಣಾಯಾಮ, ಆಹಾರ ಕ್ರಮ, ಮತ್ತು ವ್ಯಕ್ತಿತ್ವ ವಿಕಸನ, ಮನಃಶಾಂತಿ ಹಾಗೂ ಆರೋಗ್ಯ ಪೂರ್ಣಜೀವನಕ್ಕೆ ಪರಿಚಯ: 04–06–23 ಭಾನುವಾರ ಸಂಜೆ 6.30ಕ್ಕೆ ತರಗತಿಗಳು ಪ್ರಾರಂಭ 5–06–23 (14 ದಿನಗಳು) ಸ್ಥಳ: ಋಷಿ ಸಂಸ್ಕೃತಿ ವಿದ್ಯಾಕೇಂದ್ರ ಕುವೆಂಪುನಗರ, ಮೈಸೂರು
9448458050
8618762110

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ/ಯುವತಿಯರು, ಮಹಿಳೆಯರು, ವಿಧವೆ/ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. ಸಂಬಳ: 12000 ದಿಂದ 18000 (ESI, PF, ಸೌಲಭ್ಯ ಇರುತ್ತದೆ.)
9845010281,7760043596

WANTED TEACHERS
Ideal School Yelwala (English Medium)
B.Sc, M.Sc, B.Ed
B.A, M.A, (Hindi Part Time/ Full Time (RTD Teachers Can Also Apply)
9900593211
9845353761

ಹಾರ್ಡ್‌ವೇರ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಕೆಲಸದ ಸಮಯ: 9.15 ರಿಂದ 7.15
ಸಂಬಳ: 8000 – 10,000
ಸ್ಥಳ: ನಂಜುಮಳಿಗೆ ಸರ್ಕಲ್
7829441181

ಬೇಕಾಗಿದ್ದಾರೆ
(ಮೈಸೂರು ಗ್ರಾಮಾಂತರ)
SCIENCE -02
Maths - 02
Hindi - 02
8147472526
6360942194

ಬೇಕಾಗಿದ್ದಾರೆ
ಹೆಬ್ಬಾಳಿನಲ್ಲಿರುವ ಪ್ರತಿಷ್ಠಾನ ಶಾಲೆಗೆ ನುರಿತ ಅನುಭವಿ ಬಸ್ ಚಾಲಕರು ಬೇಕಾಗಿದ್ದಾರೆ. (ಬ್ಯಾಡ್ಜ್‌ನೊಂದಿಗೆ ಹೆವಿ ಲೈಸೆನ್ಸ್ ಹೊಂದಿರಬೇಕು)
0821-2402929
9481123959

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್/ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ. ಸಂಬಳ+ಓಟಿ 15200/- to 86000/-
9740733021
9535028750

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ)
Mob: 8749098879

ಮೈತ್ರಿ ಟ್ರಾವೆಲ್ಸ್
ಶಿರಡಿ–23.6.23, 3 ದಿನಗಳು ಶನಿಸಿಂಗನಾಪುರ, ಗೃಷ್ಣೇಶ್ವರ ಜ್ಯೋತಿರ್ಲಿಂಗ, ಎಲ್ಲೋರ, ನಾಸಿಕ್, ತ್ರಯಂಬಕೇಶ್ವರ ಜ್ಯೋತಿರ್ಲಿಂಗ, ಭೀಮಾಶಂಕರ ಜ್ಯೋತಿರ್ಲಿಂಗ
6360422209
9482421499


HOUSE FOR RENT
At Sharadadevi Nagar 2BHK with Car Parking Mysore
6362228914
9606710430

ಸುವರ್ಣಯಾತ್ರ
ಕಾಶಿ ಪ್ರವಾಸ 7ದಿನಗಳು 23.6.23 ಕೇರಳ ಪ್ರವಾಸ 7 ದಿನಗಳು 24.06.23, ಮಧ್ಯಪ್ರದೇಶ 4 ದಿನಗಳು 28.6.23, ಶಿರಡಿ ಪ್ರವಾಸ 3ದಿನಗಳು 07.07.23, ಪುರಿ ಜಗನ್ನಾಥ ಪ್ರವಾಸ 4 ದಿನಗಳು 12.07.23
9008381022
9019462508

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ಬಡ ಆಟೋ ಚಾಲಕನ ಮೇಲೆ ಅಟ್ಟಹಾಸ; ಪೊಲೀಸ್ ಪೇದೆ ಅಮಾನತು



ಸಾಮಾಜಿಕ ಜಾಲತಾಣದಲ್ಲಿ ಹಲ್ಲೆ ವಿಡಿಯೋ ವೈರಲ್, ಎಡಿಜಿಪಿ ಅಲೋಕ್ ಕುಮಾರ್ ತಕ್ಷಣ ಕ್ರಮ

ಮಂಡ್ಯ, ಮೇ 31– ಸಾರ್ವಜನಿಕರೊಂದಿಗೆ ಸಂಯಮದಿಂದ ವರ್ತಿಸಬೇಕು ಎಂದು ಪದೇ ಪದೇ ಪೊಲೀಸರಿಗೆ ಹಿರಿಯ ಅಧಿಕಾರಿಗಳು ಹೇಳುತ್ತಿರುತ್ತಾರೆ. ಈ ಸಂಬಂಧ ಪೊಲೀಸರಿಗಾಗಿ ಕಾರ್ಯಾಗಾರಗಳು ಕೂಡ ನಡೆಯುತ್ತಿರುತ್ತವೆ. ಆದರೂ ಕೂಡ ಕೆಲ ಪೊಲೀಸರು ಸಾರ್ವಜನಿಕರ ಮೇಲೆ ದರ್ಪ ಪ್ರದರ್ಶಿಸುವುದು ಆಗಿಂದಾಗ್ಗೆ ಕಂಡು ಬರುತ್ತಿದೆ. ಬುಧವಾರ ಬೆಳಿಗ್ಗೆ 11.45ರಲ್ಲಿ ಮಂಡ್ಯ ಸರ್ಕಾರಿ ಆಸ್ಪತ್ರೆ ಬಳಿ ಪೊಲೀಸ್ ಪೇದೆಯೋರ್ವ ಅಮಾಯಕ ಆಟೋ ಚಾಲಕನ ಮೇಲೆ ಸಾರ್ವಜನಿಕವಾಗಿ ಹಲ್ಲೆ ನಡೆಸಿ ಅವಾಚ್ಯ ಪದಗಳಿಂದ ನಿಂದಿಸಿದ ಘಟನೆ ನಡೆದಿದೆ.

ಈ ಘಟನೆಯನ್ನು ಮೊಬೈಲ್‌ನಲ್ಲಿ ವಿಡಿಯೋ ಮಾಡಿದ್ದ "ದಡದಿ ಗಂಗವಾಡಿ" ಎಂಬುವರು ವಿಡಿಯೋ ದೃಶ್ಯಾವಳಿಯನ್ನು ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ಅವರನ್ನು ಟ್ಯಾಗ್ ಮಾಡಿ ಟ್ವೀಟ್ ಮಾಡಿದ್ದಾರೆ. ಇದನ್ನು ಗಮನಿಸಿದ ಕಾನೂನು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ತಕ್ಷಣವೇ ಕಾರ್ಯೋನ್ಮುಖರಾಗಿದ್ದು, 'ಪೊಲೀಸ್ ಪೇದೆಯ ಇಂತಹ ವರ್ತನೆಯನ್ನು ಸಹಿಸಲಾಗುವುದಿಲ್ಲ ತಕ್ಷಣವೇ ಆತನನ್ನು ಇಲಾಖಾ ವಿಚಾರಣೆ ಕಾಯ್ದಿರಿಸಿ ಅಮಾನತು ಪಡಿಸುವ ಮೂಲಕ ಕ್ರಮ ಜರುಗಿಸಲಾಗಿದೆ' ಎಂದು ದಡದಿ ಗಂಗವಾಡಿ ಅವರ ಟ್ವೀಟ್‌ಗೆ ರೀಟ್ವೀಟ್ ಮಾಡಿದ್ದಾರೆ. ಅಲ್ಲದೆ ಈ ಸಂಬಂಧ ತುರ್ತಾಗಿ ಮಂಡ್ಯ ಎಸ್‌ಪಿ ಯತೀಶ್ ಅವರಿಗೆ ನಿರ್ದೇಶನವನ್ನೂ ನೀಡಿದ್ದಾರೆ. ಇಂದು ಎಡಿಜಿಪಿ ಅಲೋಕ್ ಕುಮಾರ್ ಅವರ ನಿರ್ದೇಶನದಂತೆ ಮಂಡ್ಯ ಎಸ್‌ಪಿ ಯತೀಶ್ ಅವರು ಮಂಡ್ಯ ಸಂಚಾರ ಠಾಣೆ ಪೊಲೀಸ್ ಪೇದೆ ಮಹೇಂದ್ರ ಎಂಬುವವರನ್ನು ಅಮಾನತು ಮಾಡಿದ್ದಾರೆ.

ನಡೆದಿದ್ದೇನು?: ಮಂಗಳವಾರ ಬೆಳಿಗ್ಗೆ 11.45ರ ಸುಮಾರಿನಲ್ಲಿ ಆಟೋ ಚಾಲಕನೋರ್ವ ನಿಯಂತ್ರಣ ತಪ್ಪಿ ಸಂಚಾರ ಠಾಣೆ ಪೇದೆ ಮಹೇಂದ್ರನಿಗೆ ಲಘುವಾಗಿ ಢಿಕ್ಕಿ ಹೊಡೆದಿದ್ದಾನೆ. ಅಲ್ಲದೇ ತಕ್ಷಣವೇ ಆಟೋ ನಿಲ್ಲಿಸಿ ಕೆಳಗಿಳಿದು ಪೇದೆ ಮಹೇಂದ್ರನ ಕ್ಷಮೆ ಕೇಳಿದ್ದಾನೆ. ಆದರೂ ಕೆರಳಿದ ಮಹೇಂದ್ರ ಆಟೋ ಚಾಲಕನ ಮೇಲೆ ಕೈಗಳಿಂದ ಹಲ್ಲೆ ನಡೆಸಿ ಅವಾಚ್ಯ ಶಬ್ಧಗಳಿಂದ ನಿಂದಿಸಿದ್ದಾನೆ. ಆಟೋ ಚಾಲಕ ಹೊಡೆಯಬೇಡಿ ಎಂದು ಪರಿಪರಿಯಾಗಿ ಬೇಡಿದರೂ ಕೂಡ ಬಿಡದೆ ಪೇದೆ ಆತನ ಮೇಲೆ ಹಲ್ಲೆ ನಡೆಸಿದ್ದನ್ನು ಸಾರ್ವಜನಿಕರೊಬ್ಬರು ತಮ್ಮ ಮೊಬೈಲ್‌ನಲ್ಲಿ ವಿಡಿಯೋ ಮಾಡಿದ್ದಾರೆ.

ನಟ ಡಾಲಿ ಧನಂಜಯ್‌ರಿಂದ ಶಾಲಾ ಪುನರಾರಂಭಕ್ಕೆ ಚಾಲನೆ

ಶಾಸಕ ದರ್ಶನ್ ಪುಟ್ಟಣ್ಣಯ್ಯ ಸಾಥ್

ಪಾಂಡವಪುರ, ಮೇ 31– ತಾಲೂಕಿನ ಚಲುವರಸನ ಕೊಪ್ಪಲು ಸರ್ಕಾರಿ ಶಾಲೆಯ ಪ್ರಾರಂಭೋತ್ಸವಕ್ಕೆ ಚಿತ್ರನಟ ಡಾಲಿ ಧನಂಜಯ್ ಹಾಗೂ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರು ಬುಧವಾರ ಚಾಲನೆ ನೀಡಿದರು.

2023–24ನೇ ಸಾಲಿನ ಶಾಲೆಗಳು ಆರಂಭಗೊಂಡ ಹಿನ್ನೆಲೆಯಲ್ಲಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯನ್ನು ಸುಣ್ಣಬಣ್ಣ ಹೊಡೆದು ಮದುವೆ ಮನೆಯಂತೆ ಅಲಂಕರಿಸಲಾಗಿತ್ತು. ಶಾಲೆಯ ಮುಂದೆ ಚಪ್ಪರ ಹಾಕಿ ತಳಿರು ತೋರಣಗಳಿಂದ ಶೃಂಗರಿಸಲಾಗಿತ್ತು. ಶಾಲೆಗೆ ಆಗಮಿಸಿದ ಚಿತ್ರನಟ ಡಾಲಿ ಧನಂಜಯ್, ಶಾಸಕ ದರ್ಶನ್ ಪುಟ್ಟಣ್ಣಯ್ಯ ಟೇಪ್ ಕತ್ತರಿಸುವ ಮೂಲಕ ಚಾಲನೆ ನೀಡಿದರು. ಬಳಿಕ ಡಾಲಿ ಧನಂಜಯ್, ಶಾಸಕ ದರ್ಶನ್ ಪುಟ್ಟಣ್ಣಯ್ಯ ಹಾಗೂ ಅಧಿಕಾರಿಗಳು ಶಾಲಾ ಮಕ್ಕಳಿಗೆ ಗುಲಾಬಿ ಹೂ, ಪೆನ್ನು ಹಾಗೂ ಸಿಹಿ ವಿತರಣೆ ಮಾಡಿ ಶಾಲೆಗೆ ಸ್ವಾಗತಿಸಿದರು.

ನಂತರ ಡಾಲಿ ಧನಂಜಯ್ ಅವರು ಶಾಲೆಯಲ್ಲಿ ಸುತ್ತಾಡಿ ತರಗತಿ ಕೊಠಡಿಗಳನ್ನು ವೀಕ್ಷಣೆ ಮಾಡಿ ಶಾಲೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಡಾಲಿ ಧನಂಜಯ್ ಅವರ ಸೆಲ್ಫಿ ತೆಗೆದುಕೊಳ್ಳಲು ಗ್ರಾಮದ ಯುವಕರು, ಯುವತಿಯರು, ಮುಖಂಡರು, ಮಹಿಳೆಯರು ಮುಗಿಬಿದ್ದರು.

ಚಿತ್ರನಟ ಡಾಲಿ ಧನಂಜಯ್ ಮಾತನಾಡಿ, ಶಾಲಾ ಪ್ರಾರಂಭೋತ್ಸವದ ದಿನದೊಂದು ಸರಕಾರಿ ಶಾಲೆಗೆ ಆಗಮಿಸಿ ಮಕ್ಕಳನ್ನು ಸ್ವಾಗತಿಸಿದ್ದು ನನಗೆ ತುಂಬಾ ಖುಷಿಯಾಗಿದೆ. ಶಾಲೆಗಳಲ್ಲಿ ಎಲ್ಲಾ ಮಕ್ಕಳಿಗೂ ಒಂದೇ ಶಿಕ್ಷಣ, ಒಂದೇ ತರಹದ ಸವಲತ್ತುಗಳು ದೊರೆಯಬೇಕಾಗಿದೆ. ಎಲ್ಲೋ ಕಡೆ ಸರಿಯಾದ ಸವಲತ್ತುಗಳು ಇಲ್ಲದ ಕಾರಣ ಮಕ್ಕಳು ಸರಕಾರಿ ಶಾಲೆಯನ್ನು ಬಿಟ್ಟು ಹೋಗುತ್ತಿದ್ದಾರೆ. ಇದರಿಂದ ಸರಕಾರಿ ಶಾಲೆಗಳು ಮುಚ್ಚುವ ಹಂತ ತಲುಪಿವೆ. ಹೀಗಾಗಬಾರದು. ನಮ್ಮ ಸರಕಾರಿ ಶಾಲೆಗಳು ಉಳಿಯಬೇಕು. ನಮ್ಮ ಮಕ್ಕಳು ಸರಕಾರಿ ಶಾಲೆಗಳಲ್ಲಿಯೇ ಗುಣಮಟ್ಟದ ಶಿಕ್ಷಣ ಕಲಿಯುವಂತಾಗಬೇಕು ಎಂದರು. ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿ, ಸರಕಾರಿ ಶಾಲೆಗಳನ್ನ ಅಭಿವೃದ್ಧಿಪಡಿಸಿದರೆ ರೈತರ ಮಕ್ಕಳಿಗೆ ಹೆಚ್ಚು ಅನುಕೂಲವಾಗುತ್ತದೆ. ಬಹಳಷ್ಟು ರೈತರು ಮಕ್ಕಳ ಶಿಕ್ಷಣಕ್ಕಾಗಿ ಸಾಲಗಾರರಾಗುತ್ತಿದ್ದಾರೆ ಎಂದು ವಿಷಾದಿಸಿದರು. ನಮ್ಮ ಊರುಗಳ ಶಾಲೆಗಳನ್ನು ಅಭಿವೃದ್ಧಿಪಡಿಸಬೇಕಾದರೆ ಮೊದಲು ಗ್ರಾಮದ ಶಾಲೆಗಳು ಅಭಿವೃದ್ಧಿ ಆಗಬೇಕು. ಖಾಸಗಿಯವರು ಶಿಕ್ಷಣವನ್ನು ಉದ್ಯಮವಾಗಿಸಿಕೊಂಡಿದ್ದಾರೆ. ಸರಕಾರಿ ಶಾಲೆಗಳಲ್ಲಿ ಉತ್ತಮವಾಗಿ ಶಿಕ್ಷಣ ಸಿಕ್ತಿಲ್ಲ ಅಂತ ಖಾಸಗಿಯವರು ಶಿಕ್ಷಣ ಸಂಸ್ಥೆ ನಡೆಸುತ್ತಾರೆ. ಇದರಲ್ಲಿ ಪೋಷಕರ ತಪ್ಪೇನಿಲ್ಲ. ತಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಬೇಕೆಂದು ಖಾಸಗಿ ಶಾಲೆಗೆ ಮಕ್ಕಳನ್ನು ದಾಖಲಿಸುತ್ತಿದ್ದಾರೆ. ನಮ್ಮ ಸರಕಾರಿ ಶಾಲೆಯಲ್ಲಿಯೇ ಒಳ್ಳೆಯ ಗುಣಮಟ್ಟದ ಶಿಕ್ಷಣ ದೊರೆಯುವಂತಾದರೆ ಪೋಷಕರು ಸರಕಾರಿ ಶಾಲೆಗೆ ಮಕ್ಕಳನ್ನು ದಾಖಲಿಸುತ್ತಾರೆ. ಹಾಗಾಗಿ ಎಲ್ಲರೂ ಸೇರಿ ನಮ್ಮೂರಿನ ಶಾಲೆಗಳನ್ನು ಅಭಿವೃದ್ಧಿ ಪಡಿಸಿ ಕೊಳ್ಳುವುದತ್ತ ಮುನ್ನಡೆಯಬೇಕಾಗಿದೆ ಎಂದು ಮನವಿ ಮಾಡಿದರು. ಕಾರ್ಯಕ್ರಮ ಮುಗಿದ ಬಳಿಕ ಕ್ಯಾತನಹಳ್ಳಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲೂ ಶಾಸಕ ದರ್ಶನ್‌ಪುಟ್ಟಣ್ಣಯ್ಯ ಮಕ್ಕಳಿಗೆ ಪುಸ್ತಕ, ಪೆನ್ನು, ಚಾಕಲೇಟ್ ನೀಡುವ ಮೂಲಕ ಬರಮಾಡಿಕೊಂಡರು.

ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷ ಮಿಥುನ್, ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಕಾಶ್, ಶಾಲೆಯ ಶಿಕ್ಷಕರು, ರೈತ ಮುಖಂಡರು, ಗ್ರಾಮಸ್ಥರು ಹಾಜರಿದ್ದರು.



ಪಾಂಡವಪುರ ತಾಲೂಕಿನ ಚಲುವರಸನ ಕೊಪ್ಪಲು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಚಿತ್ರನಟ ಡಾಲಿ ಧನಂಜಯ್, ಶಾಸಕ ದರ್ಶನ್‌ಪುಟ್ಟಣ್ಣಯ್ಯ ಅವರು ಮಕ್ಕಳಿಗೆ ಹೂ, ಸಿಹಿ ನೀಡುವ ಮೂಲಕ ಶಾಲೆಗೆ ಸ್ವಾಗತಿಸಿದರು.

> ಬಡವರಿಗೆ ತಿಂಗಳಿಗೆ 10 ಕೆಜಿ ಅಕ್ಕಿ ಕೊಟ್ಟರೆ ಅರ್ಧಕ್ಕೆ ಮಾರಿ, ಊಟ ಮಾಡಿಕೊಂಡು ಮನೆಯಲ್ಲಿ ಇರೋಕೆ ಆಗಲ್ಲ. ಕೊಟ್ಟ ಅಕ್ಕಿ ಹಸಿವನ್ನು ನೀಗಿಸುತ್ತೆ. ಇತರೆ ಖರ್ಚಿಗೆ ಜನ ದುಡಿಯಲೇ ಬೇಕಲ್ವ? ಬಡ ಮನುಷ್ಯನಿಗೆ ಅಕ್ಕಿ ಕೊಟ್ಟರೆ ನೋಂದವರಿಗಾಗುತ್ತಾರೆ ಅನ್ನೋದು ತಪ್ಪು. ಇಲ್ಲದ ವರಿಗೆ ಸಹಾಯ ಮಾಡುವುದು ತಪ್ಪಲ್ಲ. ಸರಕಾರಿ ಶಾಲೆಗಳಲ್ಲಿ ಉತ್ತಮ ಶಿಕ್ಷಣ ಸಿಗುತ್ತಿದೆ. ಒಂದು ಕ್ಷೇತ್ರದಲ್ಲಿ ಎಲ್ಲವೂ ಸರಿ ಇರಲ್ಲ. ನ್ಯೂನತೆಗಳನ್ನು ಸರಿ ಮಾಡಿಕೊಂಡು ಉತ್ತಮ ಶಿಕ್ಷಣ ಕೊಡಬೇಕು.
> – ಡಾಲಿ ಧನಂಜಯ್, ನಟ

ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ವಿಪ್ರರ ಕೊಡುಗೆ ಅನನ್ಯ

ಶಾಸಕ ಹೆಚ್.ಟಿ.ಮಂಜು ಅಭಿಮತ

ಕೆ.ಆರ್.ಪೇಟೆ, ಮೇ 31– ನಾಗರಿಕ ಸಮಾಜಕ್ಕೆ ಅಗತ್ಯ ಮಾರ್ಗದರ್ಶನ ನೀಡಿ, ನಮ್ಮ ಸಂಸ್ಕೃತಿ, ಧಾರ್ಮಿಕ ಸಂಸ್ಕಾರ ಹಾಗೂ ಪರಂಪರೆಯ ಬಗ್ಗೆ ಶ್ರೀಸಾಮಾನ್ಯರಲ್ಲಿ ಅರಿವಿನ ಜಾಗೃತಿ ಮೂಡಿಸಿ ಆರೋಗ್ಯವಂತ ಸಮಾಜದ ನಿರ್ಮಾಣಕ್ಕೆ ಅಪಾರವಾದ ಕೊಡುಗೆ ನೀಡುತ್ತಿರುವ ವಿಪ್ರ ಬಾಂಧವರ ಸೇವೆಯು ಅನನ್ಯವಾಗಿದೆ ಎಂದು ಶಾಸಕ ಹೆಚ್.ಟಿ.ಮಂಜು ಹೇಳಿದರು.

ಅವರು ಇಂದು ಕೆ.ಆರ್.ಪೇಟೆ ಪಟ್ಟಣದ ರಾಮದಾಸ್ ಹೋಟೆಲ್‌ನ ಸುಲೋಚನಮ್ಮ ಸಭಾಂಗಣದಲ್ಲಿ ತಾಲೂಕು ಬ್ರಾಹ್ಮಣ ಮಹಾಸಭಾದ ವತಿಯಿಂದ ಆಯೋಜಿಸಿದ್ದ ಅಭಿನಂದನೆ ಹಾಗೂ ಸಮಾಜದ ಬಂಧುಗಳ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಮಾತನಾಡಿದರು..

ವಿಪ್ರ ಬಾಂಧವರ ಬೇಡಿಕೆಗಳನ್ನು ಪ್ರಾಮಾಣಿಕವಾಗಿ ಈಡೇರಿಸಿಕೊಡುತ್ತೇನೆ. ಹಾಗೂ ಅವರು ತಮ್ಮ ಸಮಾಜದ ನಿವೇಶನದಲ್ಲಿ ನಿರ್ಮಿಸುತ್ತಿರುವ ಸಂಘದ ಕಚೇರಿ ಹಾಗೂ ಗಾಯತ್ರಿ ವಿದ್ಯಾರ್ಥಿ ನಿಲಯದ ಕಟ್ಟಡದ ನಿರ್ಮಾಣಕ್ಕೆ ಅಗತ್ಯವಾಗಿ ಬೇಕಾದ ಅನುದಾನವನ್ನು ಸರ್ಕಾರದ ವತಿಯಿಂದ ಬಿಡುಗಡೆ ಮಾಡಿಸಿಕೊಡುವ ಜೊತೆಗೆ ಸಿಂದಘಟ್ಟ, ಸಂತೆಬಾಚಹಳ್ಳಿ, ಮಾದಾಪುರ, ಕಿಕ್ಕೇರಿ, ಅಕ್ಕಿಹೆಬ್ಬಾಳು, ಹೊಸಹೊಳಲು, ನಂದೀಪುರ, ಬಲ್ಲೇನಹಳ್ಳಿ ಗ್ರಾಮಗಳಲ್ಲಿ ರುದ್ರಭೂಮಿಯ ಜಾಗಕ್ಕೆ ಕಾಂಪೌಂಡ್ ನಿರ್ಮಿಸುವುದು ಸೇರಿದಂತೆ ಗ್ರಾಮೀಣ ಪ್ರದೇಶಗಳಲ್ಲಿ ನಿವೇಶನ ಹೊಂದಿರುವ ವಿಪ್ರ ಬಾಂಧವರು ಆಶ್ರಯ ಮನೆಗಳನ್ನು ನಿರ್ಮಿಸಲು ಫಲಾನುಭವಿಗಳನ್ನಾಗಿ ಆಯ್ಕೆ ಮಾಡಿಸಿ ಸಹಾಯ ಮಾಡುವುದಾಗಿ ಪ್ರಕಟಿಸಿದರು. ಇದೇ ಸಂದರ್ಭದಲ್ಲಿ ಶಾಸಕ ಹೆಚ್.ಟಿ.ಮಂಜು ಅವರನ್ನು ತಾಲೂಕು ಬ್ರಾಹ್ಮಣ ಮಹಾಸಭಾ ವತಿಯಿಂದ ಸನ್ಮಾನಿಸಲಾಯಿತು.



ಕಾರ್ಯಕ್ರಮದಲ್ಲಿ ಟಿಎಪಿಸಿಎಂಎಸ್ ಮಾಜಿ ನಿರ್ದೇಶಕ ಹೆಚ್.ಟಿ.ಲೋಕೇಶ್, ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಶಿವಪ್ರಸಾದ್, ತಾಲೂಕು ಜೆಡಿಎಸ್ ಅಧ್ಯಕ್ಷ ಜಾನಕೀ ರಾಂ, ತಾಲೂಕು ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅರವಿಂದಕಾರಂತ್, ಉಪಾಧ್ಯಕ್ಷ ರಘುರಾಮನಾಡಿಗ್, ಕಾರ್ಯದರ್ಶಿ ಸುಬ್ಬನರಸಿಂಹ, ಸಹ ಕಾರ್ಯದರ್ಶಿ ಕುಮಾರಸ್ವಾಮಿ, ಕುಪ್ಪಹಳ್ಳಿ ಸುಬ್ರಹ್ಮಣ್ಯ, ಸುಮಾ ಶ್ರೀನಿವಾಸ್, ಸವಿತಾ ಸುರೇಶ್, ಶೇಷಾದ್ರಿ, ಬಲ್ಲೇನಹಳ್ಳಿ ಮಂಜುನಾಥ್, ರಾಜಾರಾಂ, ಮೋದೂರು ಶ್ರೀಧರ್, ರಮೇಶ್, ಶಾಸಕ ಹೆಚ್.ಟಿ.ಮಂಜು ಅವರ ಆಪ್ತಸಹಾಯಕ ಅರಳಕುಪ್ಪೆ ಪ್ರತಾಪ್ ಮತ್ತಿತರರು ಉಪಸ್ಥಿತರಿದ್ದರು.

ಕೃಷ್ಣರಾಜಪೇಟೆ ತಾಲೂಕಿನ ನಾನಾ ಗ್ರಾಮಗಳಿಂದ ಆಗಮಿಸಿದ್ದ ನೂರಾರು ವಿಪ್ರ ಬಾಂಧವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಅಕ್ರಮ ಕಟ್ಟಡಕ್ಕೆ ಬೀಗ ಜಡಿದ ತಹಶೀಲ್ದಾರ್

ಮೇಲುಕೋಟೆ, ಮೇ 31– ಬೆಟ್ಟದ ಸಮೀಪ ನಿರ್ಮಿಸುತ್ತಿದ್ದ ಅಕ್ರಮ ಕಟ್ಟಡಕ್ಕೆ ಬೀಗ ಹಾಕಿಸಿದ್ದರೂ ಅದನ್ನು ತೆಗೆದು ಕಟ್ಟಡ ಕಾಮಗಾರಿ ಮುಂದುವರೆಸಿದ್ದ ಬೆಟ್ಟದ ಕಾವಲುಗಾರ ಬಸವರಾಜುನನ್ನು ತರಾಟೆಗೆ ತೆಗೆದುಕೊಂಡ ತಹಶೀಲ್ದಾರ್ ಸೌಮ್ಯ ಅಕ್ರಮ ಕಟ್ಟಡಕ್ಕೆ ಮತ್ತೆ ಬೀಗ ಜಡಿದಿದ್ದಾರೆ.

ಮೇಲುಕೋಟೆ ಯೋಗಾನರಸಿಂಹ ಸ್ವಾಮಿ ಬೆಟ್ಟದ ಕಾವಲುಗಾರ ಬಸವರಾಜು ಸರ್ವೆ ನಂಬರ್ 15ರಲ್ಲಿ ಅನಧಿಕೃತವಾಗಿ ಕಟ್ಟಡ ನಿರ್ಮಾಣ ಮಾಡುತ್ತಿದ್ದ ವೇಳೆ ಪರಿಶೀಲಿಸಿದ್ದ ತಹಶೀಲ್ದಾರ್ ಸೌಮ್ಯ ನೋಟೀಸ್ ನೀಡಿ, ಕಟ್ಟಡಕ್ಕೆ ಬೀಗ ಹಾಕಿಸಿದ್ದರು. ಆದರೆ ತಹಶೀಲ್ದಾರ್ ಸೂಚನೆ ಮತ್ತು ನೋಟೀಸ್ ಧಿಕ್ಕರಿಸಿದ್ದ ಬಸವರಾಜು ಬೀಗ ತೆಗೆದು ಮತ್ತೆ ಕೆಲಸ ಆರಂಭಿಸಿದ್ದರು. ಈ ಬೆಳವಣಿಗೆಯ ಸಂಬಂಧ ಆಕ್ರೋಶಗೊಂಡ ರೈತ ಸಂಘದ ಉಪಾಧ್ಯಕ್ಷ ಈಶ ಮುರುಳಿ, ಟಗರು ದಿಲೀಪ್, ಸುಬ್ಬಣ್ಣ, ಗ್ರಾಪಂ ಮಾಜಿ ಅಧ್ಯಕ್ಷೆ ಜಯಲಕ್ಷ್ಮಿ ನೇತೃತ್ವದಲ್ಲಿ ರೈತ ಸಂಘ ಮತ್ತು ಕಾಂಗ್ರೆಸ್ ಕಾರ್ಯಕರ್ತರು ಅಕ್ರಮ ಕಟ್ಟಡ ತೆರವುಗೊಳಿಸಲು ಶಾಸಕ ದರ್ಶನ್ ಪುಟ್ಟಣ್ಣಯ್ಯ ಮೊರೆ ಹೋಗಿದ್ದರು.

ಕಾರ್ಯಕರ್ತರ ದೂರಿಗೆ ಸ್ಪಂದಿಸಿದ ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ತಕ್ಷಣ ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಿ ದೇವಾಲಯದ ನೌಕರನೇ ಅನಧಿಕೃತ ಕಟ್ಟಡವನ್ನು ನಿರ್ಮಿಸುತ್ತಿರುವುದನ್ನು ತಡೆಗಟ್ಟಿ ಕಾನೂನು ಕ್ರಮಜರುಗಿಸಿ, ಕಟ್ಟಡ ತೆರವುಗೊಳಿಸಿ. ಕಾನೂನು ಉಲ್ಲಂಘಿಸಿ ಬೆಟ್ಟದ ಸುತ್ತಮುತ್ತ ನಿರ್ಮಾಣವಾಗಿರುವ ಎಲ್ಲಾ ಅಕ್ರಮ ಕಟ್ಟಡಗಳನ್ನೂ ತೆರವು ಮಾಡಿ ಎಂದು ಸೂಚಿಸಿದರು. ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದ ತಕ್ಷಣ ಮಂಗಳವಾರ ಮೇಲುಕೋಟೆಗೆ ಬಂದ ಪಾಂಡವಪುರ ತಹಶೀಲ್ದಾರ್ ಸೌಮ್ಯ ಕಟ್ಟಡ ನಿರ್ಮಾಣವನ್ನು ಸ್ಥಗಿತಗೊಳಿಸಿ, ಮತ್ತೆ ಹೊಸ ಬೀಗ ತರಿಸಿ ಕಟ್ಟಡಕ್ಕೆ ಬೀಗ ಜಡಿದಿದ್ದಾರೆ. ಈ ಸಲ ಬೀಗ ತೆಗೆದು ಕೆಲಸ ಮಾಡಿದರೆ ಕ್ರಿಮಿನಲ್ ಕೇಸ್ ದಾಖಲಿಸುವುದಾಗಿ ಎಚ್ಚರಿಸಿದ್ದಾರೆ. ಈ ವೇಳೆ ಕಂದಾಯ ಇಲಾಖೆ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು, ರೈತ ಸಂಘದ ಕಾರ್ಯಕರ್ತ ಗಂಗಾಧರ (ಕಪ್ಪೆ), ಲಕ್ಷ್ಮಿನರಸಿಂಹೇಗೌಡ, ನಾಗೇಗೌಡ ರೈತ ಸಂಘದ ಉಪಾಧ್ಯಕ್ಷ ಈಶ ಮುರುಳಿ, ಸುಬ್ಬಣ್ಣ ಟಗರು ದಿಲೀಪ್, ಯೋಗೀಶ, ಜಯಲಕ್ಷ್ಮಿ ಮತ್ತಿತರರು ಭಾಗವಹಿಸಿದ್ದರು.



> ಯೋಗಾನರಸಿಂಹಸ್ವಾಮಿ ಬೆಟ್ಟದ ಸುತ್ತ ಆಗಿರುವ ಒತ್ತುವರಿ ಮತ್ತು ಅಕ್ರಮ ಕಟ್ಟಡಗಳನ್ನು ಪಟ್ಟಿ ಮಾಡಿ ತೆರವುಗೊಳಿಸಲು ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೇನೆ. ದೇವಾಲಯದ ನೌಕರ ಬಸವರಾಜು ಧೈರ್ಯವಾಗಿ ಕಾನೂನು ಉಲ್ಲಂಘಿಸಿ ತಹಶೀಲ್ದಾರ್ ಸೂಚನೆಯನ್ನೂ ನಿರ್ಲಕ್ಷಿಸಿ ನಿರ್ಮಿಸುತ್ತಿರುವ ಕಟ್ಟಡವನ್ನು ತೆರವುಗೊಳಿಸಬೇಕು ಎಂದು ಹೇಳಿದ್ದೇವೆ. ದೇವಾಲಯದ ಪರಿಸರದ ಮತ್ತು ಪಾವಿತ್ರ್ಯತೆ ಕಾಪಾಡಬೇಕಾದ ಕಾರಣ ಕಠಿಣ ಕ್ರಮ ಜರುಗಿಸಬೇಕು ಎಂದು ಹೇಳಿದ್ದೇನೆ.
> -ದರ್ಶನ್ ಪುಟ್ಟಣ್ಣಯ್ಯ, ಶಾಸಕ

ಒಂದನೇ ಪುಟದಿಂದ

ಗ್ಯಾರಂಟಿಗಳು ಜಾರಿ

ಮಾಹಿತಿ ನೀಡಲು ಒಂದು ದಿನದ ಸಮಯಾವಕಾಶವಿದೆ. ಹೀಗಾಗಿ ನಾಳೆ ನಡೆಯಬೇಕಿದ್ದ ಸಂಪುಟ ಸಭೆಯನ್ನು ಜೂ.2ರಂದು ನಡೆಸಿ ಅಲ್ಲಿ ಪೂರ್ಣ ವರದಿ ಮಂಡಿಸುವುದಾಗಿ ಮುಖ್ಯಮಂತ್ರಿ ಅವರ ಗಮನಕ್ಕೆ ತಂದರು. ಅಧಿಕಾರಿಗಳ ಮಾಹಿತಿಯ ಬಳಿಕ ಸಚಿವರು, ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರಾದರೂ ಯೋಜನೆಗಳನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲು ಒಮ್ಮತ ಸಾಧ್ಯವಾಗಲಿಲ್ಲ.

ನಂತರ ಗ್ಯಾರಂಟಿಗಳನ್ನು ಎಂದಿನಿಂದ ಜಾರಿಗೊಳಿಸಬೇಕು. ಅವುಗಳ ದುರುಪಯೋಗ ಆಗುವುದನ್ನು ತಪ್ಪಿಸಲು ಕೆಲವು ಷರತ್ತುಗಳ ಅಗತ್ಯವಿದೆ ಎಂಬ ಅಭಿಪ್ರಾಯವೂ ಕೇಳಿಬಂದಿತು. ಇದಕ್ಕೆ ಮುಖ್ಯಮಂತ್ರಿ ಅವರು ತಲೆದೂಗಿದರು. ಹಿರಿಯ ಸಚಿವರೊಬ್ಬರ ಅಭಿಪ್ರಾಯದಂತೆ ಯೋಜನೆಯ ಅನುಷ್ಠಾನದ ಹೊಣೆಯನ್ನು ಮುಖ್ಯಮಂತ್ರಿ ಅವರಿಗೆ ಬಿಡಲು ಸಭೆ ಸರ್ವಾನುಮತದ ತೀರ್ಮಾನ ಕೈಗೊಂಡಿದೆ. ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ, ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ತೀರ್ಮಾನಿಸಿದ್ದು, ಜೂನ್ 2 ರಂದು ನಡೆಯಲಿರುವ ಸಚಿವ ಸಂಪುಟದ ಸಭೆಯಲ್ಲಿ ಚರ್ಚಿಸಿ, ತೀರ್ಮಾನಿಸಲಾಗುವುದು ಎಂದು ತಿಳಿಸಿದರು.

ಐದು ಗ್ಯಾರಂಟಿ ಯೋಜನೆಗಳಿಗೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯ ಅಧಿಕಾರಿಗಳು ಸಚಿವರಿಗೆ ಗ್ಯಾರಂಟಿ ಯೋಜನೆಗಳ ಆರ್ಥಿಕ ಪರಿಣಾಮ ಸೇರಿದಂತೆ ವಿವರಗಳ ಪ್ರಾತ್ಯಕ್ಷಿಕೆಯನ್ನು ಸಲ್ಲಿಸಿದ್ದಾರೆ ಎಂದು ಹೇಳಿದರು. ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ರಾಜ್ಯವೂ ಉಳಿಯಬೇಕು. ಜನತೆಗೂ ಅನುಕೂಲವಾಗುವ ಮಾನದಂಡವನ್ನಿಟ್ಟುಕೊಂಡು ನಾವು ಮತದಾರರಿಗೆ ನೀಡಿದ ಭರವಸೆಗಳನ್ನು ಈಡೇರಿಸುವುದಾಗಿ ತಿಳಿಸಿದರು. ಯಾರು ಏನೇ ಹೇಳಿಕೊಳ್ಳಲಿ, ನಾವು ಭರವಸೆಯನ್ನು ಈಡೇರಿಸುತ್ತೇವೆ. ಇಲ್ಲಿ ಷರತ್ತು ಮುಖ್ಯ ಎನ್ನಲಾಗುವುದಿಲ್ಲ. ರೀತಿ, ನೀತಿ, ಲೆಕ್ಕಾಚಾರದ ಅಗತ್ಯವಿದೆ. ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಅಧಿಕಾರಿಗಳು ನಾಲ್ಕೈದು ಆಯ್ಕೆಗಳನ್ನು ಮುಂದಿಟ್ಟಿದ್ದಾರೆ. ಜೂ.2ರಂದು ನಡೆಯುವ ಸಂಪುಟ ಸಭೆಯಲ್ಲಿ ತೀರ್ಮಾನ ಮಾಡುತ್ತೇವೆ ಎಂದರು ಹೇಳಿದರು.

ಮನೆ, ಕಚೇರಿ ಮೇಲೆ ಲೋಕಾಯುಕ್ತ ದಾಳಿ

ಮೌಲ್ಯದ ಹುಂಡೈ ಕ್ರೆಟಾ ಕಾರು, 83 ಸಾವಿರ ರೂ. ಮೌಲ್ಯದ ಸುಜುಕಿ ಆಕ್ಸಿಸ್ ಸ್ಕೂಟರ್, 3.75 ಲಕ್ಷ ರೂ. ನಗದು, ಲಕ್ಷ ರೂ. ಮೌಲ್ಯದ ಸ್ಕಾಚ್ ಲಿಕ್ಕರ್, 5 ಲಕ್ಷ ರೂ. ಮೌಲ್ಯದ ಟಿಲ್ಲರ್, 12 ಲಕ್ಷ ರೂ. ಮೌಲ್ಯದ ಗೃಹೋಪಯೋಗಿ ವಸ್ತುಗಳು, ಕುವೆಂಪುನಗರದಲ್ಲಿ ಕೋಟಿ ರೂ. ಮೌಲ್ಯದ ಮನೆ, ನಂಜನಗೂಡು ತಾಲೂಕು ಕಡಜೆಟ್ಟಿ ಗ್ರಾಮದ ಸರ್ವೆ ನಂ.35/8ರಲ್ಲಿ 8 ಎಕರೆ ಜಮೀನು, ಒಂದು ಫಾರಂ ಹೌಸ್ ಸೇರಿದಂತೆ ಕೋಟ್ಯಾಂತರ ರೂ. ಮೌಲ್ಯದ ಚರ ಹಾಗೂ ಸ್ಥಿರಾಸ್ತಿ ಪತ್ತೆ ಮಾಡಿದ್ದಾರೆ.

ಮುಡಾ ಇಂಜಿನಿಯರ್ ನಾಗೇಶ್: ಮುಡಾ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ನಾಗೇಶ್ ಅವರ ಕಚೇರಿ ಮತ್ತು ನಿವಾಸದ ಮೇಲೆ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು, 50 ಲಕ್ಷ ರೂ. ಮೌಲ್ಯದ 1.025 ಕೆ.ಜಿ. ಚಿನ್ನಾಭರಣ, 6 ಲಕ್ಷ ರೂ. ಮೌಲ್ಯದ 9.3 ಕೆ.ಜಿ. ಬೆಳ್ಳಿ ಪದಾರ್ಥ, 1.19 ಲಕ್ಷ ರೂ. ನಗದು, 10 ಲಕ್ಷ ರೂ. ಮೌಲ್ಯದ ನೆಕ್ಸಾಸ್ ಕಾರು, 7 ಲಕ್ಷ ರೂ. ಮೌಲ್ಯದ ಹುಂಡೈ ಕಾರು, 1.5 ಲಕ್ಷ ರೂ. ಮೌಲ್ಯದ ರಾಯಲ್ ಎನ್‌ಫೀಲ್ಡ್ ಬೈಕ್, ರಾಮಕೃಷ್ಣನಗರದಲ್ಲಿ 80 ಲಕ್ಷ ರೂ. ಮೌಲ್ಯದ ಮನೆ, ಮೈಸೂರು ತಾಲೂಕು ಮಾಡಗಳ್ಳಿಯ ರಾಮಯ್ಯ ರಾಯಲ್ ಸಿಟಿ ಬಡಾವಣೆಯಲ್ಲಿ 40 ಲಕ್ಷ ರೂ. ಮೌಲ್ಯದ ನಿವೇಶನ, ದಟ್ಟಗಳ್ಳಿ 3ನೇ ಹಂತದಲ್ಲಿ 30 ಲಕ್ಷ ರೂ. ಮೌಲ್ಯದ ನಿವೇಶನ, ಸಿದ್ಧಾರ್ಥನಗರದಲ್ಲಿ 25 ಲಕ್ಷ ರೂ. ಮೌಲ್ಯದ ಕಮರ್ಷಿಯಲ್ ಶಾಪ್, ದೀಪಾ ಹೌಸಿಂಗ್ ಸೊಸೈಟಿ ಬಡಾವಣೆಯಲ್ಲಿ 40 ಲಕ್ಷ ರೂ. ಮೌಲ್ಯದ ನಿವೇಶನ, ರಟ್ಟನಹಳ್ಳಿಯಲ್ಲಿ 20 ಲಕ್ಷ ರೂ. ಮೌಲ್ಯದ 13 ಗುಂಟೆ ಜಮೀನು, 1.5 ಕೋಟಿ ರೂ. ಮೌಲ್ಯದ 2 ಎಕರೆ ಜಮೀನು ಸೇರಿದಂತೆ ಕೋಟ್ಯಾಂತರ ರೂ. ಮೌಲ್ಯದ ಆಸ್ತಿ–ಪಾಸ್ತಿ ಪತ್ತೆ ಹಚ್ಚಿದ್ದಾರೆ.

ಮುಡಾ ಚೀಫ್ ಅಕೌಂಟೆಂಟ್ ಮುತ್ತ: ಮುಡಾ ಮುಖ್ಯ ಲೆಕ್ಕಾಧಿಕಾರಿ ಎನ್.ಮುತ್ತ ಅವರ ಕಚೇರಿ ಮತ್ತು ನಿವಾಸದ ಮೇಲೆ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು, 5 ಲಕ್ಷ ರೂ. ಮೌಲ್ಯದ ಮಾರುತಿ ಸ್ವಿಫ್ಟ್ ಕಾರು, 60 ಸಾವಿರ ರೂ. ಮೌಲ್ಯದ ಬಜಾಜ್ ಪಲ್ಸರ್ ಬೈಕ್, 10 ಲಕ್ಷ ರೂ. ಮೌಲ್ಯದ ಗೃಹೋಪಯೋಗಿ ವಸ್ತುಗಳು, ಬ್ಯಾಂಕ್ ಖಾತೆಯಲ್ಲಿ 36.50 ಲಕ್ಷ ರೂ. ನಗದು, 20 ಲಕ್ಷ ರೂ. ಮೌಲ್ಯದ 435 ಗ್ರಾಂ ಚಿನ್ನಾಭರಣ, ಲಕ್ಷ ರೂ. ಮೌಲ್ಯದ ಬೆಳ್ಳಿ ಪದಾರ್ಥ, ವಿಜಯನಗರ 4ನೇ ಹಂತದ 40X60 ವಿಸ್ತೀರ್ಣದ ನಿವೇಶನದಲ್ಲಿ ನಿರ್ಮಾಣವಾಗುತ್ತಿರುವ 4 ಅಂತಸ್ತಿನ ಕಟ್ಟಡ, ಬಸವನಪುರ ಬಳಿ 3 ಅಂತಸ್ತಿನ ಕಟ್ಟಡ ಸೇರಿದಂತೆ ಕೋಟ್ಯಾಂತರ ರೂ. ಆಸ್ತಿ–ಪಾಸ್ತಿ ಪತ್ತೆ ಮಾಡಿದ್ದಾರೆ.

ನಂ.ಗೂಡು ಸಬ್ ರಿಜಿಸ್ಟ್ರಾರ್ ಶಿವಶಂಕರಮೂರ್ತಿ: ನಂಜನಗೂಡು ಉಪ ನೋಂದಣಾಧಿಕಾರಿ ಶಿವಶಂಕರಮೂರ್ತಿ ಮನೆ ಮತ್ತು ನಿವಾಸದ ಮೇಲೆ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು, 12 ಲಕ್ಷ ರೂ. ಮೌಲ್ಯದ ಎಕೋ ಸ್ಪೋರ್ಟ್ಸ್ ಟೈಟಾನಿಯಂ ಕಾರು, 12 ಲಕ್ಷ ರೂ. ಮೌಲ್ಯದ ಇನ್ನೋವಾ ಕಾರು, 8 ಲಕ್ಷ ರೂ. ಮೌಲ್ಯದ ಗೂಡ್ಸ್ ವಾಹನ, ಟಿವಿಎಸ್ ಜೂಪಿಟರ್ ಸ್ಕೂಟರ್, ಟಿವಿಎಸ್ ವಿಗೋ ಸ್ಕೂಟರ್, ರಾಯಲ್ ಎನ್‌ಫೀಲ್ಡ್ ಬೈಕ್, ಪಲ್ಸರ್ ಬೈಕ್, 5 ನಿವೇಶನಗಳು, 35 ಲಕ್ಷ ರೂ. ಮೌಲ್ಯದ ಜಮೀನು, 2 ಮನೆ, ಬ್ಯಾಂಕ್ ಖಾತೆಯಲ್ಲಿ 7,13,446 ರೂ. ಮತ್ತೊಂದು ಬ್ಯಾಂಕ್ ಖಾತೆಯಲ್ಲಿ 17,588 ರೂ., ಪತ್ನಿಯ ಬ್ಯಾಂಕ್ ಖಾತೆಯಲ್ಲಿ 10,85,242 ರೂ., ತಾಯಿಯ ಬ್ಯಾಂಕ್ ಖಾತೆಯಲ್ಲಿ 1,00,418 ರೂ., 25 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಮತ್ತು 65 ಸಾವಿರ ರೂ. ಮೌಲ್ಯದ ಬೆಳ್ಳಿ ಪದಾರ್ಥಗಳನ್ನು ಲೋಕಾಯುಕ್ತ ಪೊಲೀಸರು ಪತ್ತೆ ಮಾಡಿದ್ದಾರೆ.

ವಿದ್ಯುತ್ ಲೈನ್‌ಗೆ ತಾಗುತ್ತಿದ್ದ ತೆಂಗಿನ ಗರಿ ತೆರವುಗೊಳಿಸುವಾಗ

ವಿದ್ಯುತ್ ಸ್ಪರ್ಶದಿಂದ ಲೈನ್‌ಮ್ಯಾನ್ ಸಾವು

ನಾಗಮಂಗಲ, ಮೇ 31– ತಾಲೂಕಿನ ಬೆಳ್ಳೂರು ಪಟ್ಟಣದ ಭೈರವೇಶ್ವರ ಬಡಾವಣೆಯ ಮೂಡ್ಲಿ ತೋಟದಲ್ಲಿ ವಿದ್ಯುತ್ ಸ್ಪರ್ಶದಿಂದ ಲೈನ್ ಮ್ಯಾನ್ ಸಾವಿಗೀಡಾದ ಘಟನೆ ನಡೆದಿದೆ. ಬೆಳ್ಳೂರು ಉಪವಿಭಾಗದ ಕಚೇರಿ ವ್ಯಾಪ್ತಿಯ ಲೈನ್‌ಮ್ಯಾನ್ ಅಭಿಜಿತ್ (28) ಅವರು ತೋಟದಲ್ಲಿ ವಿದ್ಯುತ್ ಲೈನ್‌ಗೆ ತಾಗುತ್ತಿದ್ದ ತೆಂಗಿನ ಗರಿ ತೆರವುಗೊಳಿಸುತ್ತಿದ್ದಾಗ ವಿದ್ಯುತ್ ಸ್ಪರ್ಶಗೊಂಡು ಅವರು ಸಾವನ್ನಪ್ಪಿದ್ದಾರೆ. ಸ್ಥಳಕ್ಕೆ ಚೆಸ್ಕಾಂ ವಿಭಾಗದ ಬೆಳ್ಳೂರು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಶ್ರೀಧರ್, ನಾಗಮಂಗಲ ಕಾರ್ಯಪಾಲಕ ಇಂಜಿನಿಯರ್ ರಘು, ಮಂಡ್ಯ ವಿದ್ಯುತ್ ಪರಿವೀಕ್ಷಕ ರವೀಶ್ ಸ್ಥಳ ಪರಿಶೀಲನೆ ನಡೆಸಿದರು.



ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ಅಬ್ಬಿಫಾಲ್ಸ್‌ಗೆ ಖಾಸಗಿ ಜೀಪ್‌ಗಳನ್ನು ಬಾಡಿಗೆಗೆ ಓಡಿಸಲು ಅವಕಾಶವಿಲ್ಲ

■ ಸಾರಿಗೆ ವಾಹನವಾಗಿ ಪರಿವರ್ತಿಸಿಕೊಂಡರೆ ಮಾತ್ರ ಅವಕಾಶ ■ ಆರ್‌ಟಿಓ ಎನ್.ಎಸ್. ಮಧುರ ಸೂಚನೆ



ಮಡಿಕೇರಿ, ಮೇ 31– ಖಾಸಗಿ ಜೀಪ್‌ಗಳನ್ನು ಬಾಡಿಗೆಗೆ ಓಡಿಸಲು ಅವಕಾಶವಿಲ್ಲ ಎಂದಿರುವ ಪ್ರಾದೇಶಿಕ ಸಾರಿಗೆ ಅಧಿಕಾರಿ ಎನ್.ಎಸ್. ಮಧುರ ಅವರು, ಖಾಸಗಿ ಜೀಪ್‌ಗಳನ್ನು ಸಾರಿಗೆ ವಾಹನಗಳನ್ನಾಗಿ ಪರಿವರ್ತಿಸಿಕೊಂಡು ನಿಯಮಾನುಸಾರ ಬಾಡಿಗೆಗೆ ಓಡಿಸಬಹುದು ಎಂದು ಸೂಚನೆ ನೀಡಿದ್ದಾರೆ.

ಇತ್ತೀಚೆಗೆ ಅಬ್ಬಿಫಾಲ್ಸ್ ಪ್ರವಾಸಿ ತಾಣದಲ್ಲಿ ನಡೆದ ಅಹಿತಕರ ಘಟನೆಗಳಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಯವರಿಗೆ ನೀಡಲಾಗಿರುವ ದೂರು ಮತ್ತು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವ ದೂರಿಗೆ ಸಂಬಂಧಿಸಿದಂತೆ ಸಾರಿಗೆ ಕಚೇರಿಯಲ್ಲಿ ಕೆ.ನಿಡುಗಣೆ ಗ್ರಾಮದ ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗೂ ಖಾಸಗಿ ಜೀಪ್ ಮಾಲೀಕರ ಸಭೆ ನಡೆಸಲಾಗಿದ್ದು, ಸಭೆಯಲ್ಲಿ ಜೀಪ್ ಮಾಲೀಕರುಗಳಿಗೆ ಮೋಟಾರು ವಾಹನ ಕಾಯ್ದೆ ಮತ್ತು ನಿಯಮಗಳ ಅಡಿಯಲ್ಲಿ ಖಾಸಗಿ ಜೀಪ್‌ಗಳನ್ನು ಬಾಡಿಗೆಗೆ ಓಡಿಸಲು ಅವಕಾಶವಿಲ್ಲದೇ ಇರುವುದರಿಂದ, ಖಾಸಗಿ ಜೀಪ್‌ಗಳನ್ನು ಸಾರಿಗೆ ವಾಹನಗಳನ್ನಾಗಿ ಪರಿವರ್ತಿಸಿಕೊಂಡು ನಿಯಮಾನುಸಾರ ಉಪಯೋಗಿಸುವಂತೆ ಕಟ್ಟುನಿಟ್ಟಾಗಿ ಸೂಚನೆ ನೀಡಿದರು.

ತಪ್ಪಿದಲ್ಲಿ ಕಾನೂನಿನಡಿಯಲ್ಲಿ ಸೂಕ್ತ ಕ್ರಮ ಕೈಗೊಂಡು ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದೆಂದು ತಿಳುವಳಿಕೆ ನೀಡಿದ ಅವರು, ಪರಿವರ್ತನೆಗೆ ಅನುಸರಿಸಬೇಕಾದ ವಿಧಾನದ ಬಗ್ಗೆ ಮತ್ತು ಪಾವತಿಸಬೇಕಾಗುವ ಶುಲ್ಕ ಮತ್ತು ತೆರಿಗೆಯ ಬಗ್ಗೆಯೂ ಚಾಲಕರಿಗೆ ಪೂರ್ಣ ಮಾಹಿತಿಯನ್ನು ನೀಡಿದರು. ಈ ನಿಟ್ಟಿನಲ್ಲಿ ಇಲಾಖಾ ವತಿಯಿಂದ ಖಾಸಗಿ ವಾಹನಗಳು ಸಾರಿಗೆ ವಾಹನಗಳಾಗಿ ಪರಿವರ್ತಿಸಲು, ಸುಗಮವಾಗಿ, ಶೀಘ್ರವಾಗಿ, ನಿಯಮಾನುಸಾರ ಈ ಕಚೇರಿಯಿಂದ ಎಲ್ಲಾ ರೀತಿಯಲ್ಲಿ ಸಹಕರಿಸುವುದಾಗಿಯೂ ಮತ್ತು ಪ್ರಥಮ ಆದ್ಯತೆಯ ಮೇರೆಗೆ ಪರಿವರ್ತನೆಗೆ ಆಸಕ್ತರು ಸಲ್ಲಿಸುವ ಅರ್ಜಿಗಳನ್ನು ಮಾಡಿಕೊಡಲಾಗುವುದೆಂದು, ನಿಯಮಗಳನ್ನು ಪಾಲನೆ ಮಾಡದಿದ್ದಲ್ಲಿ ಕಟ್ಟುನಿಟ್ಟಾಗಿ ಕಾನೂನಿನಡಿಯಲ್ಲಿ ಕ್ರಮ ಜರುಗಿಸಲಾಗುವುದೆಂದು ಸಾರಿಗೆ ಅಧಿಕಾರಿ ಮಧುರ ಎಸ್.ಎನ್ ಸ್ಪಷ್ಟಪಡಿಸಿದ್ದಾರೆ.

ಅಳಿವಿನಂಚಿನಿಂದ ಹೊರಬಂದ ಡೆಕ್ಕನ್ ಮಹಶಿರ್



ರಕ್ಷಣೆಯ ಉಪಕ್ರಮಗಳಿಂದ ಸಂಖ್ಯೆಯನ್ನು ವೃದ್ಧಿಸಿಕೊಂಡ ಅಪರೂಪದ ಮೀನು



ಮಡಿಕೇರಿ, ಮೇ 31– ಜೀವನದಿ ಕಾವೇರಿ ನದಿ ಹರಿವಿನ ಪ್ರದೇಶಗಳಲ್ಲಿ ಒಂದು ಕಾಲದಲ್ಲಿ ವಿಫುಲವಾಗಿ ಕಂಡು ಬರುತ್ತಿದ್ದ, ಇತ್ತೀಚಿನ ದಶಕಗಳಲ್ಲಿ ಅಳಿವಿನಂಚಿಗೆ ಸರಿದಿದ್ದ ಅತ್ಯಪರೂಪದ 'ಡೆಕ್ಕನ್ ಮಹಶಿರ್' ತಳಿಯ ಮೀನುಗಳು ಇದೀಗ ಹಲ ರಕ್ಷಣೆಯ ಉಪ ಕ್ರಮಗಳಿಂದ ತಮ್ಮ ಸಂಖ್ಯೆಯನ್ನು ವೃದ್ಧಿಸಿಕೊಂಡಿದ್ದು 'ಕನಿಷ್ಟ ಕಾಳಜಿ'ಯ ವಲಯ ಪ್ರವೇಶಿಸಿದೆ ಎಂದು ಹಾರಂಗಿ ಮೀನುಗಾರಿಕಾ ಇಲಾಖೆಯ ಸಹಾಯಕ ನಿರ್ದೇಶಕರಾದ ಎಸ್.ಎಂ. ಸಚಿನ್ ತಿಳಿಸಿದ್ದಾರೆ.

ಕೊಡಗು ಪತ್ರಕರ್ತರ ಸಂಘದ ಕುಶಾಲನಗರ ಘಟಕದ ವತಿಯಿಂದ ಹಾರಂಗಿಯ ಮೀನು ಉತ್ಪಾದನಾ ಕೇಂದ್ರದಲ್ಲಿ ಏರ್ಪಡಿಸಲಾಗಿದ್ದ 'ಸಂವಾದ' ಕಾರ್ಯಕ್ರಮದಲ್ಲಿ ಅವರು ಈ ಕುರಿತು ಮಾಹಿತಿ ನೀಡಿ, ಕಾವೇರಿ ನದಿಯಲ್ಲಿ ಪ್ರಮುಖವಾಗಿ 'ಡೆಕ್ಕನ್ ಮಹಶಿರ್' ಮತ್ತು 'ಹಂಪ್ ಬ್ಯಾಕ್ ಮಹಶಿರ್' ತಳಿಯ ಮೀನುಗಳು ಕಂಡು ಬರುತ್ತವೆ. ಇವುಗಳಲ್ಲಿ ಡೆಕ್ಕನ್ ಮಹಶಿರ್ ಇದೀಗ ಅಳಿವಿನಂಚಿನಿಂದ ಹೊರ ಬಂದಿದೆ ಎಂದು ಮಾಹಿತಿ ನೀಡಿದರು.

ಪೂರ್ಣ ಬೆಳವಣಿಗೆಯ ಬಳಿಕ ಮಹಶಿರ್ ತಳಿಯ ಮೀನುಗಳು ಸಾಮಾನ್ಯವಾಗಿ 40 ರಿಂದ 60 ಕೆ.ಜಿ. ತೂಗುತ್ತದೆ. ಅಪರೂಪವಾಗಿ ಕೆಲ ಮೀನುಗಳು 100 ಕೆ.ಜಿ. ಯನ್ನೂ ಮೀರಿದ ಉದಾಹರಣೆಗಳಿವೆ. ಅನಿಯಂತ್ರಿತವಾದ ಬೇಟೆ, ಅವೈಜ್ಞಾನಿಕವಾಗಿ ಡೈನಮೈಟ್, ರಾಸಾಯನಿಕ ಪದಾರ್ಥ, ವಿದ್ಯುಚ್ಛಕ್ತಿ ಬಳಸಿ ಮಾಡುವ ಮೀನುಗಾರಿಕೆ ಹಿನ್ನೆಲೆ ಇವುಗಳ ಸಂಖ್ಯೆ ಗಣನೀಯವಾಗಿ ಕುಸಿದು ವಿನಾಶದ ಅಂಚಿಗೆ ಸರಿದಿತ್ತು ಎಂದು ಕಳವಳಕಾರಿ ಅಂಶವನ್ನು ವಿವರಿಸಿದರು.

ಭಾರೀ ಗಾತ್ರಕ್ಕೆ ಬೆಳೆಯುವ ಮಹಶಿರ್ ಮೀನುಗಳ ವಂಶಾಭಿವೃದ್ಧಿ ಇತರ ಮೀನುಗಳಷ್ಟು ವೇಗವಾಗಿ ನಡೆಯದಿರುವುದು ಇವುಗಳು ಅಪಾಯಕ್ಕೆ ಸಿಲುಕಿಕೊಳ್ಳಲು ಮತ್ತೊಂದು ಕಾರಣವಾಗಿದೆ ಈ ಹಿನ್ನೆಲೆಯಲ್ಲಿ ಅತ್ಯಪರೂಪದ ಮಹಶಿರ್ ತಳಿಯ ಸಂರಕ್ಷಣೆಯ ಪ್ರಮುಖ ಉದ್ದೇಶದಿಂದ 1985 ರಲ್ಲಿ ಹಾರಂಗಿಯಲ್ಲಿ ಮೀನು ತಳಿ ಸಂವರ್ಧನಾ ಕೇಂದ್ರವನ್ನು ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿ ಸ್ಥಾಪಿಸಲಾಯಿತು. ಇದು ದಕ್ಷಿಣ ಭಾರತದ ಅತ್ಯಂತ ಪ್ರಮುಖವಾದ ಕೇಂದ್ರವಾಗಿದೆ ಎಂದು ಮಾಹಿತಿ ನೀಡಿದರು.

ತಳಿ ಸಂವರ್ಧನೆ: ಮಹಶಿರ್ ತಳಿ ಸಂವರ್ಧನೆಯ ಕಾರ್ಯ ವಿಧಾನಗಳನ್ನು, ಅದಕ್ಕಾಗಿ ಕೇಂದ್ರದಲ್ಲಿ ರೂಪಿಸಲಾಗಿರುವ ವಿವಿಧ ವಿಭಾಗಗಳಿಗೆ ಪತ್ರಕರ್ತರನ್ನು ಕರೆದೊಯ್ದು ಮಾಹಿತಿ ನೀಡಿದ ಅವರು, ಕೇಂದ್ರದಲ್ಲಿ ಮಹಶಿರ್ ತಳಿಯ ಮೀನುಗಳನ್ನು ಅಭಿವೃದ್ಧಿಪಡಿಸಿ ಕಾವೇರಿ ನದಿಗೆ ಬಿಡಲಾಗುತ್ತಿದೆ. 'ಹಂಪ್ ಬ್ಯಾಕ್ ಮಹಶಿರ್' ತಳಿಯ ಮೀನುಗಳು ವಿನಾಶದ ಅಂಚಿನಲ್ಲಿದ್ದು, ಅವುಗಳ 'ತಾಯಿ ಮೀನನ್ನು' ಸಂರಕ್ಷಿಸಿ, ಸಂತಾನೋತ್ಪತ್ತಿಗೆ ಹಲ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಕೇಂದ್ರದ ಸಿಬ್ಬಂದಿ ಸಂಖ್ಯೆ 11: ಹಾರಂಗಿ ಮೀನು ಸಂವರ್ಧನಾ ಕೇಂದ್ರದಲ್ಲಿ ಸಹಾಯಕ ನಿರ್ದೇಶಕರು ಬಬ್ಬರು, ಒಬ್ಬರು ಸೂಪರಿಟೆಂಟೆಂಟ್, 8 ಮಂದಿ ಫೀಲ್ಡ್ ಸಿಬ್ಬಂದಿಗಳು ಮತ್ತು ಒಬ್ಬರು ಡಿ ದರ್ಜೆ ನೌಕರರಿರಬೇಕು. ಇವರಲ್ಲಿಯೂ ಕೆಲ ಸಿಬ್ಬಂದಿಗಳು ಇಲ್ಲ ಇರುವ ಸೀಮಿತ ಸಿಬ್ಬಂದಿಗಳೊಂದಿಗೆ ಅತ್ಯಪರೂಪದ ಮಹಸೀರ್ ರಕ್ಷಣಾ ಕಾರ್ಯ ನಡೆಯುತ್ತಿದೆ. ವಿವಿಧ ಜಾತಿಯ ಮೀನು ಮರಿಗಳ ಉತ್ಪಾದನೆಯೂ ಈ ಕೇಂದ್ರದಲ್ಲಿ ನಡೆಯುತ್ತಿರುವುದು ವಿಶೇಷ ಎಂದು ಹೇಳಿದರು. ಕುಶಾಲನಗರ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ವಿಘ್ನೇಶ್ ಭೂತನಕಾಡು, ಕೊಡಗು ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಎ.ಮುರುಳೀಧರ್, ಜಿಲ್ಲಾ ಸಂಘದ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹರೀಶ್, ಸೇರಿದಂತೆ ಜಿಲ್ಲೆಯ ವಿವಿಧೆಡೆಗಳಿಂದ ಆಗಮಿಸಿದ್ದ ಪತ್ರಕರ್ತರು ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕಷ್ಟವಾಗಿರುವ ಬೇಟೆ ನಿಯಂತ್ರಣ

ಮೀನು ಮರಿ ಸಂವರ್ಧನಾ ಕೇಂದ್ರದಿಂದ ಉತ್ಪಾದಿಸಿದ 'ಮಹಶಿರ್' ತಳಿಯ ಮೀನುಗಳನ್ನು ವಾಲ್ನೂರು ವಿಭಾಗದ ಕಾವೇರಿ ನದಿಗೆ ಬಿಡಲಾಗುತ್ತದೆ. ಈ ವ್ಯಾಪ್ತಿಯ ಜನರಿಗೆ ಮಹಶಿರ್ ಮೀನಿನ ಮಹತ್ವದ ಬಗ್ಗೆ ಸಾಕಷ್ಟು ಅರಿವು ಮೂಡಿಸಿ, ಅವುಗಳನ್ನು ಬೇಟೆಯಾಡದಂತೆ ಮನವಿ ಮಾಡಿಕೊಳ್ಳಲಾಗಿದ್ದು, ಈ ಬಗ್ಗೆ ಇಲಾಖೆಯಿಂದ ನಿಗಾ ವಹಿಸಲಾಗಿದೆ. ಹೀಗಿದ್ದೂ ರಾತ್ರಿ ವೇಳೆಯ ಬೇಟೆ ಮೊದಲಾದವುಗಳನ್ನು ಸಂಪೂರ್ಣವಾಗಿ ತಡೆಗಟ್ಟಲು ಸಾಧ್ಯವಾಗಿಲ್ಲವೆಂದು ಅವರು ವಿಷಾದಿಸಿದರು.

ಕಾವೇರಿ ನದಿಯಲ್ಲಿ ಕಾಲು ಜಾರಿ ಬಿದ್ದು ವಿದ್ಯಾರ್ಥಿ ಸಾವು

● ಕೊಂಡಂಗೇರಿಯಲ್ಲಿ ಘಟನೆ ● ಮೃತ ದೇಹಕ್ಕಾಗಿ ಹುಡುಕಾಟ


ಸಿದ್ದಾಪುರ, ಮೇ 31– ಕಾವೇರಿ ನದಿ ದಡದಲ್ಲಿ ನಡೆದು ಹೋಗುತ್ತಿದ್ದ ಸಂದರ್ಭ ಆಕಸ್ಮಿಕವಾಗಿ ಕಾಲು ಜಾರಿ ಬಿದ್ದು ವಿದ್ಯಾರ್ಥಿಯೊಬ್ಬ ಮೃತಪಟ್ಟ ಘಟನೆ ವಿರಾಜಪೇಟೆ ತಾಲೂಕಿನ ಕೊಂಡಂಗೇರಿ ಗ್ರಾಮದಲ್ಲಿ ಸಂಭವಿಸಿದೆ.



ಕೊಂಡಂಗೇರಿ ಸರ್ಕಾರಿ ಶಾಲೆಯ 10ನೇ ತರಗತಿ ವಿದ್ಯಾರ್ಥಿ ಆಸಿಮ್ (15) ಮೃತ ದುರ್ದೈವಿಯಾಗಿದ್ದು, ಕೊಂಡಂಗೇರಿ ಅನಾಥಾಶ್ರಮದಲ್ಲಿ ಧಾರ್ಮಿಕ ಶಿಕ್ಷಣ ಕಲಿಯುತ್ತಿದ್ದ. ದಿವಂಗತ ಹಸೈನಾರ್ ಅವರ ಮಗನಾಗಿರುವ ಆಸಿಮ್ ಸ್ನೇಹಿತ ನೊಂದಿಗೆ ಸಮೀಪದಲ್ಲೇ ಇದ್ದ ಕಾವೇರಿ ನದಿ ದಡಕ್ಕೆ ತೆರಳಿದ್ದ ಎನ್ನಲಾಗಿದೆ. ಈ ವೇಳೆ ಈ ಘಟನೆ ಸಂಭವಿಸಿದೆ. ಸ್ಥಳಕ್ಕೆ ಸಿದ್ದಾಪುರ ಪೊಲೀಸ್ ಠಾಣಾಧಿಕಾರಿ ದಿಲೀಪ್ ಹಾಗೂ ಗೋಣಿಕೊಪ್ಪದ ಸಹಾಯಕ ಅಗ್ನಿಶಾಮಕದಳ ಅಧಿಕಾರಿ ಕಾಳಪ್ಪ ಹಾಗೂ ಸಿಬ್ಬಂದಿಗಳು ಭೇಟಿ ನೀಡಿ, ಪರಿಶೀಲನೆ ನಡೆಸಿದಲ್ಲದೆ, ಮೃತದೇಹಕ್ಕಾಗಿ ಸಂಜೆವರೆಗೂ ಹುಡುಕಾಟ ನಡೆಸಿದರೂ ಪತ್ತೆಯಾಗಲಿಲ್ಲ. ಸಿದ್ದಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವರದರಾಜ್ ನಿಧನ

ನಾಪೋಕ್ಲು, ಮೇ 31– ಕಕ್ಕುಂದಕಾಡು ನಿವಾಸಿ ತೆಲುಗು ಬಣಜಿಗರ ಕೆ. ವರದರಾಜ್ (85) ನಿಧನರಾಗಿದ್ದಾರೆ. ದಿವಂಗತರ ಅಂತ್ಯಕ್ರಿಯೆ ಜೂ.1 (ಗುರುವಾರ) ಮಧ್ಯಾಹ್ನ ಸ್ವಗ್ರಾಮದಲ್ಲಿ ಜರುಗಲಿದೆ. ಮೃತರು ಪತ್ನಿ ಪ್ರೇಮಾವತಿ, ಪುತ್ರಿ ಭವಾನಿ, ಪುತ್ರ ಸುರೇಂದ್ರ ಸೇರಿದಂತೆ ಬಂಧು ಬಾಂಧವರನ್ನು ಅಗಲಿದ್ದಾರೆ.



ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ, ಮೇ 31– ಪೊನ್ನಂಪೇಟೆ ಹೈಸೊಡ್ಲೂರು ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾಮಗಾರಿ ಕೈಗೊಳ್ಳಬೇಕಿರುವುದರಿಂದ ಜೂ.1 ರಂದು ಬೆಳಗ್ಗೆ 9.30 ರಿಂದ ಮಧ್ಯಾಹ್ನ 3 ಗಂಟೆವರೆಗೆ ಹುದಿಕೇರಿ, ಹೈಸೊಡ್ಲೂರು, ಬೆಳ್ಳೂರು, ಕೋಣಂಗೇರಿ ಸುತ್ತಮುತ್ತಲ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಎರಡು ತಿಂಗಳು ಮೀನು ಹಿಡಿಯುವುದು ನಿಷೇಧ

ಮಡಿಕೇರಿ, ಮೇ 31– ಮುಂಗಾರು ಮಳೆಗಾಲದ ಅವಧಿಯಲ್ಲಿ ಮೀನುಗಳ ವಂಶಾಭಿವೃದ್ಧಿ ಚಟುವಟಿಕೆಗಳು ನಡೆಯು ವುದರಿಂದ ಪ್ರತಿ ವರ್ಷದ ಜೂ.1 ರಿಂದ ಜುಲೈ 30 ರವರೆಗೆ ರಾಜ್ಯದ ಎಲ್ಲಾ ಸರ್ವಋತು ಕೆರೆಗಳು, ಜಲಾಶಯಗಳು, ತೊರೆಗಳು, ಅಳಿವೆಗಳು ಮತ್ತು ನದಿಗಳಲ್ಲಿ ಮೀನು ಹಿಡಿಯುವುದನ್ನು ಪೂರ್ಣವಾಗಿ ನಿಷೇಧಿಸಲಾಗಿದೆ.

ಈ ಅವಧಿಯು ಮೀನಿನ ಜೀವನ ಚಕ್ರದಲ್ಲಿ ಅತಿಮುಖ್ಯವಾದ ಘಟ್ಟವಾಗಿದೆ. ಸ್ಥಳೀಯ ತಳಿಗಳು ಮುಂದಿನ ಪೀಳಿಗೆಗೆ ತಮ್ಮ ಸಂತತಿಯನ್ನು ನೀಡುವ ಸಮಯವಾಗಿರುವುದರಿಂದ ಈ ಅವಧಿಯಲ್ಲಿ ಜಿಲ್ಲೆಯ ಸಾರ್ವಜನಿಕರು ಹಾಗೂ ಮೀನುಗಾರರು ಎಲ್ಲಾ ಸರ್ವಋತು ಕೆರೆಗಳು, ಜಲಾಶಯಗಳು ತೊರೆಗಳು, ಅಳಿವೆಗಳು ಮತ್ತು ನದಿಗಳಲ್ಲಿ, ಮೀನುಗಳನ್ನು ಈ ಎರಡು ತಿಂಗಳು ಹಿಡಿಯದೇ ಅವುಗಳ ಸಂತಾನ ಅಭಿವೃದ್ಧಿಗೆ ಪೂರಕ ವಾತಾವರಣ ಕಲ್ಪಿಸಿಕೊಟ್ಟು ಮೀನಿನ ಸ್ಥಳೀಯ ತಳಿಗಳ ಸಂರಕ್ಷಣೆಯಲ್ಲಿ ಇಲಾಖೆಯೊಂದಿಗೆ ಸಹಕರಿಸುವಂತೆ ಮೀನುಗಾರಿಕೆ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

ಪುಷ್ಪಗುಚ್ಛ, ಸಿಹಿ ನೀಡಿ ವಿದ್ಯಾರ್ಥಿಗಳಿಗೆ ಸ್ವಾಗತ



ಗೋಣಿಕೊಪ್ಪ, ಮೇ 31– ಗೋಣಿಕೊಪ್ಪ ಸರ್ಕಾರಿ ಕನ್ನಡ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಪುಷ್ಪಗುಚ್ಛ, ಸಿಹಿ ನೀಡಿ ವಿದ್ಯಾರ್ಥಿಗಳನ್ನು ಬರ ಮಾಡಿಕೊಳ್ಳಲಾಯಿತು.

ತಳಿರು ತೋರಣಗಳಿಂದ ಶೃಂಗರಿಸಿ ಶಾಲೆಯ ಮುಖ್ಯ ದ್ವಾರದಲ್ಲಿ ಹಾಜರಿದ್ದ ಮುಖ್ಯ ಶಿಕ್ಷಕರು ಹಾಗೂ ಸಹ ಶಿಕ್ಷಕರುಗಳು ವಿದ್ಯಾರ್ಥಿಗಳಿಗೆ ಗುಲಾಬಿ, ನೋಟ್ ಪುಸ್ತಕ, ಪೆನ್ನು, ಜಿಲೇಬಿ ಸಿಹಿ ನೀಡಿ ಸ್ವಾಗತಿಸಿದರು. ಗೋಣಿಕೊಪ್ಪ ಗ್ರಾಪಂ ಅಧ್ಯಕ್ಷೆ ಸೌಮ್ಯ ಬಾಲು, ಸದಸ್ಯರುಗಳಾದ ಬಿ.ಎನ್. ಪ್ರಕಾಶ್, ಕೋಣಿಯಂಡ ಬೋಜಮ್ಮ ಉತ್ತಪ್ಪ ಅವರುಗಳು ವಿದ್ಯಾರ್ಥಿಗಳನ್ನು ಆವರಣಕ್ಕೆ ಬರಮಾಡಿಕೊಂಡರು.

ಮುಖ್ಯ ಶಿಕ್ಷಕ ಹೆಚ್.ಕೆ. ಕುಮಾರ್, ಶಿಕ್ಷಕರುಗಳಾದ ಬಿ.ಆರ್ ಸತೀಶ್, ಟಿ.ಡಿ ರಮಾನಂದ, ಕೆ.ಎ. ಸರಸ್ವತಿ, ಬಿ.ಎಂ. ನಿರ್ಮಲ, ಎಂ.ಟಿ. ಜೋಸ್ಲಿಯ, ಎನ್.ಕೆ ಜಯಶ್ರೀ, ಎಂ.ಸಿ. ಇಂದಿರಾ, ಹೆಚ್.ಇ. ಅನಿತಾಕುಮಾರಿ, ಎ.ಎನ್. ದಮಯಂತಿ, ಕೆ.ಎಂ. ತ್ರಿವೇಣಿ, ಕೆ.ಎಸ್. ಶಾರದ, ಕೆ.ಟಿ.ರೀಟಾ, ಸಮನ್ವಯ ಸಂಪನ್ಮೂಲ ಅಧಿಕಾರಿ ರಾಧ ಇದ್ದರು.

ಮಳೆಯಿಂದ 584 ವಿದ್ಯುತ್ ಕಂಬಗಳಿಗೆ ಹಾನಿ

26 ಟ್ರಾನ್ಸ್‌ಫಾರ್ಮರ್‌ಗಳು ದುರಸ್ತಿ, 70 ಲಕ್ಷ ರೂ. ನಷ್ಟ

ಮಡಿಕೇರಿ, ಮೇ 31– ಮಳೆಗಾಲ ಪ್ರಾರಂಭಕ್ಕೆ ದಿನ ಗಣನೆ ಆರಂಭವಾಗಿದ್ದು, ಈ ಹಿಂದೆ ಸುರಿದ ಪೂರ್ವ ಮುಂಗಾರು ಅವಧಿಯಲ್ಲಿ ಚೆಸ್ಕಾಂ ಇಲಾಖೆಗೆ ಅಪಾರ ನಷ್ಟ ಉಂಟಾಗಿದೆ. ಏಪ್ರಿಲ್ 1ರಿಂದ ಈ ದಿನದವರೆಗೆ ಗಾಳಿ, ಮಳೆ ಮತ್ತು ಮರ ಮುರಿದು ಬಿದ್ದ ಪರಿಣಾಮ ಒಟ್ಟು 584 ವಿದ್ಯುತ್ ಕಂಬಗಳಿಗೆ ಹಾನಿಯಾಗಿದೆ.



ಒಟ್ಟು 26 ಟ್ರಾನ್ಸ್‌ಫಾರ್ಮರ್‌ಗಳು ದುರಸ್ಥಿಗೀಡಾಗಿದ್ದು, ಒಟ್ಟು 70.36 ಲಕ್ಷ ರೂ. ನಷ್ಟವಾಗಿದೆ ಎಂದು ಕೊಡಗು ಜಿಲ್ಲಾ ವಿಪತ್ತು ನಿರ್ವಹಣಾ ಘಟಕ ಮಾಹಿತಿ ನೀಡಿದೆ. ಇನ್ನು ಕಳೆದ 24 ಗಂಟೆ ಅವಧಿಯಲ್ಲಿ ಜಿಲ್ಲೆಯ ವಿವಿಧ ಕಡೆಗಳಲ್ಲಿ ಸುರಿದ ಧಾರಾಕಾರ ಮಳೆಗೆ 26 ವಿದ್ಯುತ್ ಕಂಬಗಳು ಮುರಿದು ಬಿದ್ದಿದ್ದು, 2.60 ಲಕ್ಷ ರೂ.ನಷ್ಟ ಸಂಭವಿಸಿದೆ. ಮಾರ್ಚ್ ಮತ್ತು ತದನಂತರ ಅವಧಿಯಲ್ಲಿ ಜಿಲ್ಲೆಯ ವಿವಿಧ ಕಡೆಗಳಲ್ಲಿ ಸುರಿದ ಮಳೆಗೆ ಒಟ್ಟು 24 ಮನೆಗಳಿಗೆ ಅಲ್ಪ ಪ್ರಮಾಣದ ಹಾನಿಯಾಗಿದೆ. ಕಳೆದ 24 ಗಂಟೆ ಅವಧಿಯಲ್ಲಿ ಸಿಡಿಲು ಬಡಿದು 1 ಮನೆಗೆ ಹಾನಿ ಉಂಟಾಗಿದೆ. ಮನೆ ಹಾನಿ ಪ್ರಕರಣಗಳು ಕಂಡು ಬಂದ ಸ್ಥಳಗಳಿಗೆ ಕಂದಾಯ ಅಧಿಕಾರಿಗಳು ತೆರಳಿ ಪರಿಶೀಲನೆ ನಡೆಸಿದ್ದಾರೆ.

ಇಂದು ನಗರದಲ್ಲಿ ವಿಶ್ವ ತಂಬಾಕು ರಹಿತ ದಿನ ಕಾರ್ಯಕ್ರಮ



ಚಾಮರಾಜನಗರ, ಮೇ 31– ಯುವ ಕಾರ್ಯ ಹಾಗೂ ಕ್ರೀಡಾ ಸಚಿವಾಲಯದ ನೆಹರು ಯುವ ಕೇಂದ್ರ, ಶ್ರೀ ವರಮಹಾಲಕ್ಷ್ಮೀ ಸಾಂಸ್ಕೃತಿಕ ಕ್ರೀಡಾ ಸೇವಾ ಸಂಸ್ಥೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಹಯೋಗದೊಂದಿಗೆ ವಿಶ್ವ ತಂಬಾಕು ರಹಿತ ದಿನ ಕಾರ್ಯಕ್ರಮವನ್ನು ಜೂ.1 ರಂದು ಬೆಳಗ್ಗೆ 11 ಗಂಟೆಗೆ ನಗರದ ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಆಯೋಜಿಸಲಾಗಿದೆ.

ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಜೆ. ಉದೇಶ್ ಅವರು ಕಾರ್ಯಕ್ರಮ ಉದ್ಘಾಟಿಸುವರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಸ್. ಚಂದ್ರಮ್ಮ ಅವರು ಅಧ್ಯಕ್ಷತೆ ವಹಿಸುವರು. ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಮಂಜುನಾಥ ಪ್ರಸನ್ನ ಅವರು ಬಹುಮಾನ ವಿತರಿಸುವರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ವಿಶ್ವೇಶ್ವರಯ್ಯ ಅವರು ಮುಖ್ಯ ಭಾಷಣ ಮಾಡುವರು.

ಶ್ರೀ ವರಮಹಾಲಕ್ಷ್ಮೀ ಸಾಂಸ್ಕತಿಕ ಕ್ರೀಡಾ ಸೇವಾ ಸಂಸ್ಥೆಯ ಅಧ್ಯಕ್ಷರಾದ ಜಿ. ಬಂಗಾರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಮಾಜಶಾಸ್ತ್ರದ ಸಹಾಯಕ ಪ್ರಾಧ್ಯಾಪಕರು ಹಾಗೂ ಸಾಂಸ್ಕತಿಕ ಸಂಚಾಲಕರಾದ ಡಾ. ಪಿ. ಎಂ. ನಾಗೇಂದ್ರ ಕುಮಾರ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಜಿಲ್ಲಾ ನೆಹರು ಯುವ ಕೇಂದ್ರದ ಅಧಿಕಾರಿ ಅಭಿಷೇಕ್ ಚವರೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಾಮರಾಜನಗರ ಜಿಲ್ಲೆಯಲ್ಲಿ ಸರ್ಕಾರಿ ಶಾಲೆಗಳು ಆರಂಭ

ಮಕ್ಕಳಿಗೆ ಸಿಹಿ ವಿತರಿಸಿ, ಗುಲಾಬಿ ಹೂ ನೀಡಿ ಸ್ವಾಗತ





ಚಾಮರಾಜನಗರ, ಮೇ 31– ಬೇಸಿಗೆ ರಜೆಯ ನಂತರ ಜಿಲ್ಲೆಯಲ್ಲಿ ಸರ್ಕಾರಿ ಶಾಲೆಗಳು ಪುನರಾರಂಭಗೊಂಡಿದ್ದು, ರಜೆ ಮುಗಿಸಿ ಶಾಲೆಗೆ ಆಗಮಿಸಿದ ಮಕ್ಕಳಿಗೆ ಸಿಬ್ಬಂದಿ ಸಿಹಿ, ಗುಲಾಬಿ ಹೂ ವಿತರಿಸಿ ಸ್ವಾಗತ ಕೋರಿದರು.

ಜಿಲ್ಲೆಯ ಚಾಮರಾಜನಗರ, ಕೊಳ್ಳೇಗಾಲ, ಹನೂರು, ಯಳಂದೂರು, ಗುಂಡ್ಲುಪೇಟೆ ತಾಲೂಕು ವ್ಯಾಪ್ತಿಯಲ್ಲಿ ಬುಧವಾರ ಎಲ್ಲಾ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ತರಗತಿಗಳು ಆರಂಭಗೊಂಡವು. ಜಿಲ್ಲೆಯ ಎಲ್ಲ ಶಾಲೆಗಳಲ್ಲಿ ಹಬ್ಬದ ವಾತಾವರಣವಿತ್ತು. ಶಾಲೆಯ ಅಂಗಳವನ್ನು ಸ್ವಚ್ಛಗೊಳಿಸಿ ತಳಿರು– ತೋರಣಗಳಿಂದ ಸಿಂಗರಿಸಲಾಗಿತ್ತು ಮೊದಲ ದಿನವಾದ್ದರಿಂದ ಮಕ್ಕಳ ಹಾಜರಾತಿ ಕಡಿಮೆ ಇತ್ತು. ಆದರೂ ಶಾಲೆಗೆ ಬಂದ ಮಕ್ಕಳನ್ನು ಶಿಕ್ಷಕರು ಅದ್ದೂರಿಯಾಗಿ ಬರಮಾಡಿಕೊಂಡರು.

ಶಾಲೆಗೆ ಆಗಮಿಸಿದ ಮಕ್ಕಳಿಗೆ ಶಾಲೆಯ ಗೇಟ್ ಬಳಿಯೇ ಶಿಕ್ಷಕರು ಗುಲಾಬಿ ಹೂ, ಸಿಹಿ ನೀಡಿ ಸ್ವಾಗತಿಸಿದರು. ನಗರದ ಪೇಟೆ ಪ್ರೈಮರಿ ಶಾಲೆಯಲ್ಲಿ ಮಕ್ಕಳ ಮೇಲೆ ಪುಷ್ಪ ವೃಷ್ಟಿ ಸುರಿಸಿ ಬರಮಾಡಿಕೊಳ್ಳಲಾಯಿತು. ಇನ್ನೂ ಹಲವು ಕಡೆಗಳಲ್ಲಿ ಎತ್ತಿನಗಾಡಿ, ಟ್ರ್ಯಾಕ್ಟರ್‌ಗಳಲ್ಲಿ ಮಕ್ಕಳನ್ನು ಮೆರವಣಿಗೆ ಮೂಲಕ ಕರೆ ತರಲಾಯಿತು. ಕೆಲವು ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಸಮವಸ್ತ್ರ, ಪಠ್ಯಪುಸ್ತಕಗಳನ್ನು ವಿತರಿಸಲಾಯಿತು. ಚಾಮರಾಜನಗರದ ಪೇಟೆ ಪ್ರೈಮರಿ ಶಾಲೆಯಲ್ಲಿ ಹೂವು ಹಾಸು ಹಾಸಿ, ಸಿಹಿ ಹಾಗೂ ಗುಲಾಬಿ ವಿತರಿಸಿ ಮಕ್ಕಳಿಗೆ ಹೂವು ಎರಚುವ ಮೂಲಕ ಸ್ವಾಗತಿಸಿದರು. ತಾಲೂಕಿನ ಉತ್ತುವಳ್ಳಿ ಗ್ರಾಮದಲ್ಲಿ ಪೂರ್ಣಕುಂಭ ಸ್ವಾಗತದೊಂದಿಗೆ ಮಕ್ಕಳನ್ನು ಗ್ರಾಮದಲ್ಲಿ ಮೆರವಣಿಗೆ ಮಾಡಿ ಬಳಿಕ ಶಾಲೆಗೆ ಕರೆತರಲಾಯಿತು.

ಚೆನ್ನಿಪುರದಮೋಳೆ ಶಾಲೆಯಲ್ಲಿ ಅದ್ದೂರಿ ಸ್ವಾಗತ: ನಗರದ ಚೆನ್ನಿಪುರದ ಮೋಳೆ ಬಡಾವಣೆಯಲ್ಲಿರುವ ಸರ್ಕಾರಿ ಶಾಲೆಯಲ್ಲಿ ಮಕ್ಕಳಿಗೆ ಸಿಹಿ, ಹೂವು ನೀಡಿ ಅದ್ದೂರಿಯಾಗಿ ಸ್ವಾಗತ ಕೋರಲಾಯಿತು.

ಮಕ್ಕಳಿಗೆ ಪಠ್ಯಪುಸ್ತಕ, ಸಮವಸ್ತ್ರ ವಿತರಿಸಿ ಬಿಇಓ ಸೋಮಣ್ಣೇಗೌಡ ಮಾತನಾಡಿ, ಕಳೆದ ಎರಡು ವರ್ಷಗಳಲ್ಲಿ ಕೊರೊನಾದಿಂದಾಗಿ ಶೈಕ್ಷಣಿಕ ಚಟುವಟಿಕೆಗಳು ಕುಂಠಿತವಾಗಿತ್ತು. ಕಳೆದ ವರ್ಷ ಸ್ವಲ್ಪ ಮಟ್ಟಿಗೆ ಚೇತರಿಸಿಕೊಂಡಿತ್ತು. ಈ ವರ್ಷದಲ್ಲಿ ಕ್ರಿಯಾಶೀಲವಾಗಿ ಇಡಬೇಕು. ಉತ್ತಮವಾಗಿ ನಡೆಸಬೇಕು ಸಿಹಿಯೊಂದಿಗೆ ಸ್ವಾಗತಿಸಬೇಕು. ವಿಭಿನ್ನವಾಗಿ ತಾಲೂಕಿನ ಎಲ್ಲಾ ಶಾಲೆಗಳಲ್ಲಿ ಉತ್ಸಾಹದಿಂದ ಶಾಲಾ ಪ್ರಾರಂಭೋತ್ಸವ ಮಾಡಲಾಗುತ್ತಿದೆ. ಗುಣಮಟ್ಟದ ಶಿಕ್ಷಣ ನೀಡಲು ಗುರಿ ಹೊಂದಲಾಗಿದೆ ಎಂದರು.

ಈ ಸಂದರ್ಭದಲ್ಲಿ ಸಿಆರ್‌ಪಿ ಗಂಗಾವತಿ, ಪ್ರಭಾರ ಮುಖ್ಯ ಶಿಕ್ಷಕ ಪ್ರಕಾಶ, ಮುಖಂಡರಾದ ಮಸಣಶೆಟ್ಟಿ ಸೇರಿದಂತೆ ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು ಹಾಜರಿದ್ದರು.

ಪಿಎಲ್‌ಡಿ ಬ್ಯಾಂಕ್‌ಗೆ ಫಯಾಜ್ ಖಾನ್ ಅಧ್ಯಕ್ಷ



ಕೊಳ್ಳೇಗಾಲ, ಮೇ 31– ಕೊಳ್ಳೇಗಾಲ ಪ್ರಾಥಮಿಕ ಸಹಕಾರ ಕೃಷಿ ಗ್ರಾಮೀಣಾಭಿವೃದ್ಧಿ (ಪಿಎಲ್‌ಡಿ) ಬ್ಯಾಂಕಿನ ನೂತನ ಅಧ್ಯಕ್ಷರಾಗಿ ಹಾಲಿ ಉಪಾಧ್ಯಕ್ಷರಾಗಿರುವ ಫಯಾಜ್ ಖಾನ್ ಅವರನ್ನೇ ಮುಂದುವರೆಸಲು ಸಭೆಯಲ್ಲಿ ಆಡಳಿತ ಮಂಡಳಿ ಸದಸ್ಯರು ಸರ್ವ ಸಮ್ಮತದಿಂದ ತೀರ್ಮಾನಿಸಿದ್ದಾರೆ.

ಹಾಲಿ ಅಧ್ಯಕ್ಷರಾಗಿದ್ದ ಮಾದೇಗೌಡ ನಿಧನರಾಗಿರುವ ಹಿನ್ನೆಲೆಯಲ್ಲಿ ಮಂಗಳವಾರ ಕರೆಯಲಾಗಿದ್ದ ಸಭೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಉಪಾಧ್ಯಕ್ಷರನ್ನೇ ನೇಮಿಸುವ ಕುರಿತು ಅಶೋಕ, ಮಸಣಪ್ಪ ಹಾಗೂ ಹಿರಿಯ ಸದಸ್ಯರುಗಳಾದ ಕೆ.ಕೆ. ನಟರಾಜು, ಮಲ್ಲಯ್ಯ ಸೇರಿದಂತೆ ಇನ್ನಿತರ ಸದಸ್ಯರು ಚರ್ಚಿಸಿದ ಬಳಿಕ ಪ್ರಭಾರ ಅಧ್ಯಕ್ಷರಿಗೆ ಅಧಿಕಾರಿಗಳ ಸಮ್ಮುಖದಲ್ಲಿ ಅಧಿಕಾರ ಹಸ್ತಾಂತರಿಸಲಾಯಿತು. ಈ ಸಂದರ್ಭದಲ್ಲಿ ಪದನಿಮಿತ್ತ ವ್ಯವಸ್ಥಾಪಕ ಅಕ್ಬರ್, ನಿರ್ದೇಶಕರುಗಳಾದ ಮುದ್ದಪ್ಪ ಇನ್ನಿತರರು ಇದ್ದರು.

ಅರಿಶಿನ ಖರೀದಿ ಅವಧಿ ವಿಸ್ತರಣೆಗೆ ಮನವಿ

ಚಾಮರಾಜನಗರ, ಮೇ 31– ತೋಟಗಾರಿಕೆ ಇಲಾಖೆಯಿಂದ 2022–23ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ ಅರಿಶಿನವನ್ನು ಖರೀದಿಸಲು ನಿಗದಿಪಡಿಸಿದ್ದ ಕಾಲಾವಕಾಶವನ್ನು ವಿಸ್ತರಿಸಲು ಜಿಲ್ಲಾಡಳಿತದಿಂದ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದ್ದು, ಸರ್ಕಾರದಿಂದ ಅವಧಿ ವಿಸ್ತರಣೆ ಆದೇಶ ಬಂದ ಕೂಡಲೇ ಅರಿಶಿನ ಖರೀದಿಗೆ ಈಗಾಗಲೇ ನೋಂದಣಿ ಮಾಡಿಕೊಂಡಿರುವ ರೈತರಿಂದ ಖರೀದಿ ಪ್ರಕ್ರಿಯೆ ಪ್ರಾರಂಭಿಸಲಾಗುವುದು. ಎಲ್ಲಾ ರೈತ ಬಾಂಧವರು ಸಹಕರಿಸುವಂತೆ ತೋಟಗಾರಿಕೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಕಾನೂನು ನೆರವು ಅಭಿರಕ್ಷಕರ ಕಚೇರಿ ಉದ್ಘಾಟನೆ



ಚಾಮರಾಜನಗರ, ಮೇ 31– ನಗರದ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿರುವ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಕಟ್ಟಡದಲ್ಲಿ ನೂತನವಾಗಿ ನಿರ್ಮಾಣವಾಗಿರುವ ಕಾನೂನು ನೆರವು ಅಭಿರಕ್ಷಕರ ಕಚೇರಿಯನ್ನು ಹೈಕೋರ್ಟ್ ನ್ಯಾಯಾಧೀಶ ಪ್ರಸನ್ನ ಬಿ ವರಲೇ ವೀಡಿಯೋ ಕಾನ್ಫರೆನ್ಸ್ ಮೂಲಕ ಉದ್ಘಾಟಿಸಿದರು.

ನಂತರ ಮಾತನಾಡಿ, ಸರ್ವರಿಗೂ ನ್ಯಾಯ ಎಂಬ ಪರಿಕಲ್ಪನೆಯಡಿ ಜನಸಾಮಾನ್ಯರ ಅನುಕೂಲಕ್ಕಾಗಿ ಶೀಘ್ರವಾಗಿ ಹಾಗೂ ತ್ವರಿತವಾಗಿ ಪ್ರಕರಣ ಇತ್ಯರ್ಥವಾಗಬೇಕು. ಈ ನಿಟ್ಟಿನಲ್ಲಿ ನ್ಯಾಯ ಒದಗಿಸಬೇಕೆಂಬ ಆಶಯದಡಿ ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ ಹಾಗೂ ರಾಜ್ಯ ಕಾನೂನು ಸೇವಾ ಪ್ರಾಧಿಕಾರ ನಿರ್ದೇಶನದ ಮೇರೆಗೆ ಕಾನೂನು ಅಭಿರಕ್ಷಕರ ಕಚೇರಿಯನ್ನು ಸ್ಥಾಪಿಸಲಾಗಿದೆ ಎಂದರು.

ಪ್ರಾಧಿಕಾರದ 1987 ಕಾಯ್ದೆ ಕಲಂ 12ರಡಿ ಸೂಚಿಸಲಾದ ಅರ್ಹತಾ ಮಾನದಂಡದಡಿ ದಸ್ತಗಿರಿ ಪೂರ್ವ, ದಸ್ತಗಿರಿ, ರಿಮ್ಯಾಂಡ್ ಕ್ರಿಮಿನಲ್ ಮೇಲ್ಮನವಿ ಹಂತಗಳಲ್ಲಿ ಆರೋಪಿಗಳಿಗೆ ಕಾನೂನು ನೆರವು ಒದಗಿಸುವ ನಿಟ್ಟಿನಲ್ಲಿ ಕಾನೂನು ಸೇವೆಗಳನ್ನು ಒದಗಿಸುತ್ತಾ, ಕ್ರಿಮಿನಲ್ ಪ್ರಕರಣವನ್ನು ಸಕಾಲದಲ್ಲಿ ಶೀಘ್ರವಾಗಿ ಇತ್ಯರ್ಥಪಡಿಸಲು ಹಾಗೂ ಸಂಘರ್ಷಕ್ಕೊಳಗಾದವರಿಗೆ ಕ್ರಿಮಿನಲ್ ಪ್ರಕರಣಗಳಲ್ಲಿ ಸಕ್ಷಮ ನ್ಯಾಯಾಲಯದಲ್ಲಿ ಉಚಿತ ಕಾನೂನು ನೆರವನ್ನು ಶೀಘ್ರವಾಗಿ ನೀಡಲು ಈ ಕಚೇರಿಯಲ್ಲಿ ಸ್ಥಾಪಿಸಿದ್ದು, ಇದರ ಸದ್ಬಳಕೆಯನ್ನು ಜನರು ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹೈಕೋರ್ಟ್ ನ್ಯಾಯಾಧೀಶರಾದ ಬಿ. ವೀರಪ್ಪ ಕೆ. ಸೋಮಶೇಖರ್, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಬಿ.ಎಸ್. ಭಾರತಿ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ. ಶ್ರೀಧರ, ಕಾನೂನು ಅಭಿರಕ್ಷಕರ ಕಚೇರಿಗೆ ನೂತನವಾಗಿ ಆಯ್ಕೆಯಾಗಿರುವ ವಕೀಲ ಸಿ.ಎನ್. ರವಿಕುಮಾರ್, ಸೌಮ್ಯವತಿ, ಮಹಾಲಿಂಗಸ್ವಾಮಿ ಸೇರಿದಂತೆ ಇತರರಿದ್ದರು.

ಆತಂಕ ಸೃಷ್ಟಿಸಿದ ಎಲೆಕ್ಟ್ರಿಕ್ ಸ್ಕೂಟರ್



ಚಾಮರಾಜನಗರ, ಮೇ 31– ಎಲೆಕ್ಟ್ರಿಕ್ ಸ್ಕೂಟರ್‌ನ ಬ್ಯಾಟರಿಯಲ್ಲಿ ಹೊಗೆ ಕಾಣಿಸಿಕೊಂಡು ಆತಂಕ ಸೃಷ್ಟಿಸಿದ ಘಟನೆ ನಗರದ ಭುವನೇಶ್ವರಿ ವೃತ್ತದಲ್ಲಿ ಸಂಭವಿಸಿದೆ. ಸ್ಕೂಟರ್ ಮಾಲೀಕನ ಸಮಯಪ್ರಜ್ಞೆಯಿಂದ ಅನಾಹುತ ತಪ್ಪಿದೆ.

ಕಾಗಲವಾಡಿ ಬಸವಣ್ಣ ಅವರು ತಮ್ಮ ಬೆನ್‌ಲಿಂಗ್ ಕಂಪನಿಯ ಸ್ಕೂಟರ್‌ನ ಬ್ಯಾಟರಿಯನ್ನು ತಮ್ಮ ಕಚೇರಿಯಲ್ಲಿ ಚಾರ್ಜ್ ಮಾಡಿ, ತ್ಯಾಗರಾಜ ರಸ್ತೆಯಲ್ಲಿ ನಿಲ್ಲಿಸಿದ್ದ ಸ್ಕೂಟರ್‌ಗೆ ಅಳವಡಿಸಿದರು. ಈ ಸಂದರ್ಭದಲ್ಲಿ ಬ್ಯಾಟರಿಯಲ್ಲಿ ಹೊಗೆ ಕಾಣಿಸಿಕೊಂಡಿತು. ಬೆಂಕಿ ಹತ್ತಿಕೊಂಡರೆ ಅಕ್ಕ ಪಕ್ಕದಲ್ಲಿದ್ದ ದ್ವಿಚಕ್ರವಾಹನಗಳಿಗೆ ಹಾನಿಯಾದೀತು ಎಂದುಕೊಂಡು ಸ್ಕೂಟರ್ ಅನ್ನು ಪಕ್ಕದಲ್ಲೇ ಇದ್ದ ಭುವನೇಶ್ವರಿ ವೃತ್ತಕ್ಕೆ ತೆಗೆದುಕೊಂಡು ಹೋದರು.

ನಂತರ ಹೊಗೆಯಾಡುತ್ತಿದ್ದ ಬ್ಯಾಟರಿಯನ್ನು ಹೊರ ತೆಗೆದು ವೃತ್ತದ ಮಧ್ಯದಲ್ಲಿಟ್ಟರು. ಬ್ಯಾಟರಿಯಲ್ಲಿ ಹೊಗೆ ತೀವ್ರವಾಯಿತು. ಸ್ಥಳದಲ್ಲಿದ್ದ ಪೊಲೀಸರು ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದರು. ತಕ್ಷಣ ಸ್ಥಳಕ್ಕೆ ಬಂದ ಸಿಬ್ಬಂದಿ ಬ್ಯಾಟರಿಗೆ ನೀರು ಎರಚಿ ಬೆಂಕಿ ಹತ್ತಿಕೊಳ್ಳದಂತೆ ನೋಡಿಕೊಂಡರು. ಅದೃಷ್ಟವಶಾತ್ ಬಸವಣ್ಣ ಅವರ ಸ್ಕೂಟರ್‌ಗೂ ಹಾನಿಯಾಗಿಲ್ಲ.

ಮಾದಪ್ಪನ ಹುಂಡಿಯಲ್ಲಿ 2.53ಕೋಟಿ ಸಂಗ್ರಹ



ಹನೂರು, ಮೇ 31– ತಾಲೂಕಿನ ಪ್ರಸಿದ್ಧ ಯಾತ್ರಾ ಸ್ಥಳ ಮಲೆ ಮಹದೇಶ್ವರಸ್ವಾಮಿ ಬೆಟ್ಟದ ಮಹದೇಶ್ವರಸ್ವಾಮಿ ದೇವಾಲಯದ ಹುಂಡಿ ಹಣ ಎಣಿಕೆ ಕಾರ್ಯ ನಡೆದಿದ್ದು, 32 ದಿನಗಳ ಅವಧಿಯಲ್ಲಿ ಒಟ್ಟು 2.53 ಕೋಟಿ ರೂ. ಕಾಣಿಕೆ ಸಂಗ್ರಹವಾಗಿದೆ.

65 ಗ್ರಾಂ ಚಿನ್ನ ಹಾಗೂ 3.358 ಕೆಜಿಯಷ್ಟು ಬೆಳ್ಳಿಯನ್ನೂ ಭಕ್ತರು ಕಾಣಿಕೆ ರೂಪದಲ್ಲಿ ಹುಂಡಿಗಳಿಗೆ ಹಾಕಿದ್ದಾರೆ. ಮಂಗಳವಾರ ರಾತ್ರಿವರೆಗೂ ಬೆಟ್ಟದಲ್ಲಿ ಹುಂಡಿ ಹಣ ಎಣಿಕೆ ಕಾರ್ಯ ನಡೆಯಿತು.

2,39,16,520 ಮೊತ್ತ ನೋಟುಗಳ ರೂಪದಲ್ಲಿ, 14,41,999 ಹಣ ನಾಣ್ಯಗಳ ರೂಪದಲ್ಲಿ ಸೇರಿ ಒಟ್ಟು 2,53,58,519 ರೂ. ಹಣ ಸಂಗ್ರಹವಾಗಿದೆ. ಈ ಹಿಂದೆ ಏಪ್ರಿಲ್ 28ರಂದು ಹುಂಡಿ ಹಣ ಎಣಿಕೆ ನಡೆದಿತ್ತು.

ಮಹದೇಶ್ವರಬೆಟ್ಟದ ದೇವಾಲಯದಲ್ಲಿ ಜರುಗಿದ ಅಮಾವಾಸ್ಯೆ ವಿಶೇಷ ಪೂಜೆ ಸೇರಿದಂತೆ ಬಸವವಾಹನ, ಹುಲಿವಾಹನ, ರುದ್ರಾಕ್ಷಿ ಮಂಟಪೋತ್ಸವ, ಚಿನ್ನದ ಉತ್ಸವ ಹಾಗೂ ವಿವಿಧ ಉತ್ಸವಗಳಲ್ಲಿ ಪಾಲ್ಗೊಂಡಿದ್ದ ಅಪಾರ ಸಂಖ್ಯೆಯ ಭಕ್ತರು ಕಾಣಿಕೆ ಅರ್ಪಿಸಿದ್ದಾರೆ ಎಂದು ಅಧಿಕಾರಿಗಳಿಂದ ತಿಳಿದು ಬಂದಿದೆ. ಶ್ರೀಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಸ್.ಕಾತ್ಯಾಯಿನಿದೇವಿ, ಉಪಕಾರ್ಯದರ್ಶಿ ಬಸವರಾಜು ಹಾಗೂ ಅಧಿಕಾರಿಗಳು ಎಣಿಕೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ನೂರಾರು ಸಿಬ್ಬಂದಿ ಎಣಿಕೆ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

ವೀರನಪುರ ಸರ್ಕಾರಿ ಗೋಮಾಳ ಘೋಷಣೆ

ಕಂದಾಯ ಇಲಾಖೆಯ ಅಧಿಕಾರಿಗಳಿಂದ ನಾಮಫಲಕ ಅಳವಡಿಕೆ

ಚಾಮರಾಜನಗರ, ಮೇ 31– ತಾಲೂಕಿನ ವೀರನಪುರ ಗ್ರಾಮದ ವ್ಯಾಪ್ತಿಯಲ್ಲಿರುವ ಸರ್ಕಾರಿ ಗೋಮಾಳವನ್ನು ಕಂದಾಯ ಇಲಾಖೆಯ ಅಧಿಕಾರಿಗಳು ತೆರವು ಮಾಡಿ, ನಾಮಫಲಕ ಅಳವಡಿಸಿದರು.

ವೀರನಪುರ ಸರ್ವೆ ನಂ 80 ರಲ್ಲಿ ಸರ್ಕಾರಿ ಗೋಮಾಳ ಎಂದು 136.02 ಎಕರೆ ಪ್ರದೇಶ ಇದೆ. ಈ ಪ್ರದೇಶದ ಸುತ್ತಮುತ್ತಲಿನಲ್ಲಿ ರೈತರ ಜಮೀನುಗಳಿದ್ದು, ಈ ಪ್ರದೇಶವು ಜಾನುವಾರುಗಳಿಗೆ ಮೇವು ನೀಡುವ ತಾಣವಾಗಿದೆ. ಈ ಬಗ್ಗೆ ರೈತರು ತಾಲೂಕು ಕಚೇರಿಗೆ ಮನವಿ ಮಾಡಿಕೊಂಡಿದ್ದ ಹಿನ್ನೆಲೆಯಲ್ಲಿ ಇಲಾಖೆಯ ಅಧಿಕಾರಿಗಳು ಸರ್ವೆ ಮಾಡಿಸಿ, ಗೋಮಾಳ ಎಂದು ಘೋಷಣೆ ಮಾಡಿದ್ದಾರೆ. ತಹಶೀಲ್ದಾರ್ ಬಸವರಾಜು ಅವರ ಸೂಚನೆ ಮೇರೆಗೆ ಕಂದಾಯ ನಿರೀಕ್ಷಕ ಷಡಕ್ಷರಿ ಹಾಗೂ ಗ್ರಾಮ ಆಡಳಿತಾಧಿಕಾರಿ ಸಂತೋಷ್ ನೇತೃತ್ವದಲ್ಲಿ ಸಿಬ್ಬಂದಿಗಳು ತೆರಳಿ 136 ಎಕರೆ ಪ್ರದೇಶವನ್ನು ಸರ್ವೆ ಮಾಡಿ, ಸುತ್ತೋಲೆಯ ಬಗ್ಗೆ ಈ ಭಾಗದ ರೈತರಿಗೆ ಮನವರಿಕೆ ಮಾಡಿಕೊಡುವ ಜೊತೆಗೆ ಈ ವ್ಯಾಪ್ತಿಯ ಜಮೀನು ಸರ್ಕಾರಿ ಗೋಮಾಳ ಎಂದು ನಾಮಫಲಕವನ್ನು ಅಳವಡಿಸಿದರು. ಈ ಸಂದರ್ಭದಲ್ಲಿ ವೀರನಪುರ ಹಾಗೂ ಸುತ್ತಮುತ್ತಲಿನ ಜಮೀನಿನ ರೈತರು ಇದ್ದರು.

ಜೂ.3 ಸೌರಮಾನ ಶ್ರೀ ನರಸಿಂಹ ಜಯಂತಿ





ಮೈಸೂರು, ಮೇ 31– ನಗರದ ಕಾಳಿದಾಸ ರಸ್ತೆಯಲ್ಲಿರುವ ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಜೂ.3 ರಂದು ಶನಿವಾರ ಸೌರಮಾನ ಶ್ರೀ ಲಕ್ಷ್ಮೀನರಸಿಂಹ ಜಯಂತಿಯನ್ನು ಆಯೋಜಿಸಲಾಗಿದೆ. ಅಂದು ಬೆಳಗ್ಗೆ 7.30ಕ್ಕೆ ವಿಶ್ವರೂಪ ದರ್ಶನ, 9ಕ್ಕೆ ನವಕಲಶ ಸ್ಥಾಪನ ತಿರುಮಂಜನ (ಅಭಿಷೇಕ), ಮಧ್ಯಾಹ್ನ 1.30ಕ್ಕೆ ವಿಶೇಷ ಅಲಂಕಾರ, ತೀರ್ಥ ಪ್ರಸಾದ ವಿನಿಯೋಗವನ್ನು ಏರ್ಪಡಿಸಲಾಗಿದೆ. ಸಂಜೆ 6.30ಕ್ಕೆ ತಿರುವೀದಿ ಉತ್ಸವವನ್ನು ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನದ ಆಡಳಿತಾಧಿಕಾರಿ ಕೆ.ಆರ್. ಯೋಗ ನರಸಿಂಹನ್ (ಮುರುಳಿ) ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊಬೈಲ್ 9342188323, 7598832271 ಸಂಪರ್ಕಿಸಬಹುದು.

ಜೂ.14 ಸುತ್ತೂರು ಕ್ಷೇತ್ರದಲ್ಲಿ ಸಾಮೂಹಿಕ ವಿವಾಹ

ಸುತ್ತೂರು, ಮೇ 31– ನಂಜನಗೂಡು ತಾಲೂಕಿನ ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜೂ. 14 ರಂದು ಮಾಸಿಕ ಸಾಮೂಹಿಕ ವಿವಾಹ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಸಾಮೂಹಿಕ ವಿವಾಹದಲ್ಲಿ ಹರಗುರು ಚರಮೂರ್ತಿಗಳು, ವಧು–ವರರ ಬಂಧುಮಿತ್ರರು ಹಾಗೂ ಸಾರ್ವಜನಿಕರು ಭಾಗವಹಿಸಿ ನೂತನ ದಂಪತಿಗಳಿಗೆ ಶುಭ ಹಾರೈಸಲಿದ್ದಾರೆ. ಈ ವಿವಾಹದಲ್ಲಿ ಭಾಗವಹಿಸುವ ವರನಿಗೆ 21 ವರ್ಷ, ವಧುವಿಗೆ 18 ವರ್ಷ ಪೂರ್ಣಗೊಂಡಿರಬೇಕು. ಅರ್ಜಿ ನಮೂನೆಯಲ್ಲಿ ವರ ಮತ್ತು ವಧುವಿನ ಭಾವಚಿತ್ರಗಳನ್ನು ಲಗತ್ತಿಸಿರಬೇಕು. ಜಾತಿ ದೃಢೀಕರಣ ಪತ್ರ ವಧು–ವರರ ವಯಸ್ಸಿನ ಬಗ್ಗೆ ಶಾಲೆಯಿಂದ ಪಡೆದ ದಾಖಲಾತಿ ಪತ್ರ, ದೃಢೀಕರಣ ಪತ್ರ ಲಗತ್ತಿಸಿರಬೇಕು. ಬಾಲ್ಯವಿವಾಹಕ್ಕೆ ಅವಕಾಶವಿರುವುದಿಲ್ಲ. ಆಸಕ್ತ ವಧು–ವರರು 8 ದಿನಗಳ ಮುಂಚಿತವಾಗಿ ಆಡಳಿತಾಧಿಕಾರಿಗಳು, ಜೆಎಸ್ಎಸ್ ಶಿಕ್ಷಣ ಸಂಸ್ಥೆಗಳು, ಸುತ್ತೂರು ಇವರನ್ನು ನೇರವಾಗಿ ಸಂಪರ್ಕಿಸಿ ಅಥವಾ ದೂರವಾಣಿ: 08221–232217, 232033, 9741342222, 9449030588 ಸಂಪರ್ಕಿಸಿ ಮಾಹಿತಿ ಪಡೆದು ನೋಂದಣಿ ಮಾಡಿಸಿಕೊಳ್ಳಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಅಕ್ಕನ ಬಳಗ ಶಾಲೆಯ ವಿದ್ಯಾರ್ಥಿಗಳಿಗೆ ಅದ್ದೂರಿ ಸ್ವಾಗತ



ಮೈಸೂರು, ಮೇ 31– ಬುಧವಾರ ಶಾಲೆಗಳು ಪ್ರಾರಂಭಗೊಂಡಿದ್ದು, ನಗರದ ತ್ಯಾಗರಾಜ ರಸ್ತೆಯಲ್ಲಿರುವ ಅಕ್ಕನ ಬಳಗ ಶಾಲೆಯ ವಿದ್ಯಾರ್ಥಿಗಳಿಗೆ ಪುಷ್ಪವೃಷ್ಟಿ ಗರೆದು, ಸಿಹಿ ನೀಡಿ ಸ್ವಾಗತಿಸಲಾಯಿತು. ವಿದ್ಯಾರ್ಥಿಗಳು ನಗುಮೊಗದಿಂದ ಶಾಲೆಗೆ ಮರಳಿದರು. ಶಾಲೆಗಳನ್ನು ಮಾವಿನ ತಳಿರು ಮತ್ತು ಹೂವುಗಳಿಂದ ಅಲಂಕರಿಸಿ, ಶಿಕ್ಷಕರು ಸಂಭ್ರಮದಿಂದ ಶಾಲಾ ದ್ವಾರದಲ್ಲಿ ನಿಂತು ವಿದ್ಯಾರ್ಥಿಗಳನ್ನು ಬರಮಾಡಿಕೊಂಡರು.

ಇಲ್ಲಿನ ಅಕ್ಕನ ಬಳಗ ಶಾಲೆಯ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣವನ್ನು ರಂಗೋಲಿಯ ಚಿತ್ತಾರ ದೊಂದಿಗೆ, ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ವಿದ್ಯಾರ್ಥಿಗಳಿಗೆ ಆರತಿ ಎತ್ತಿ, ಹಣೆಗೆ ತಿಲಕವಿಟ್ಟು, ಹೂವು ನೀಡಿ, ಸಿಹಿ ಹಾಗೂ ಪಠ್ಯಪುಸ್ತಕ ಹಂಚುವ ಮೂಲಕ ಶಾಲೆಗೆ ಸ್ವಾಗತಿಸಲಾಯಿತು.

ಈ ವೇಳೆ ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ ಮಾತನಾಡಿ, ಮಕ್ಕಳು ಸಂತೋಷದಿಂದ ಶಾಲೆಗೆ ಆಗಮಿಸಬೇಕು. ಶಿಕ್ಷಕರು ಕೂಡ ಮಕ್ಕಳ ಎಳೆ ಮನಸ್ಸನ್ನು ಅರಿತುಕೊಂಡು ಪಾಠ ಮಾಡಬೇಕು. ಬಾಹ್ಯ ಆಕರ್ಷಣೆಗಳಿಗೆ ಒಳಗಾಗಬಾರದು. ಜೊತೆಗೆ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳಬೇಕು. ಆಗ ಜೀವನ ಪರಿಪೂರ್ಣವಾಗುತ್ತದೆ ಎಂದು ಮಕ್ಕಳಿಗೆ ಕಿವಿಮಾತು ಹೇಳಿದರು

ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಚಿನ್ನ ಬೆಳ್ಳಿ ವ್ಯಾಪಾರ ಸಂಘದ ಅಧ್ಯಕ್ಷರಾದ ಸುರೇಶ್ ಗೋಲ್ಡ್, ಬೈರತಿ ಲಿಂಗರಾಜು, ಎಸ್.ಎನ್. ರಾಜೇಶ್, ಶಾಲೆಯ ಮುಖ್ಯ ಶಿಕ್ಷಕರಾದ ಸುಗುಣಾವತಿ, ಶಿವಯ್ಯ, ಶಿಲ್ಪ, ನಾಗರತ್ನ ಹಾಗೂ ಶಿಕ್ಷಕ ವೃಂದದವರು ಹಾಜರಿದ್ದರು.



ಮೈಸೂರಿನ ರಾಮಕೃಷ್ಣನಗರದ ನೃಪತುಂಗ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ಮತ್ತು ಕನ್ನಡ ವಿಕಾಸ ವಿದ್ಯಾಸಂಸ್ಥೆಯಲ್ಲಿ ಶಾಲಾ ಪ್ರಾರಂಭೋತ್ಸವವನ್ನು ಆಚರಿಸಲಾಯಿತು. ಸಂಸ್ಥೆಯ ಉಪಾಧ್ಯಕ್ಷ ಸ.ರ. ಸುದರ್ಶನ ಹಾಗೂ ಕಾರ್ಯದರ್ಶಿ ಸವಿತಾ ವಿದ್ಯಾರ್ಥಿಗಳಿಗೆ ಸಿಹಿಯನ್ನು ನೀಡಿ, ಸಂಭ್ರಮದಿಂದ ಸ್ವಾಗತಿಸಿದರು. ಮಕ್ಕಳಿಗೆ ಸಿಹಿ ನೀಡುವ ಮೂಲಕ ಈ ವರ್ಷದ ಅಕ್ಷರ ದಾಸೋಹಕ್ಕೆ ಚಾಲನೆ ನೀಡಲಾಯಿತು. ಚಿತ್ರದಲ್ಲಿ ಪ್ರೌಢಶಾಲಾ ಮುಖ್ಯ ಶಿಕ್ಷಕಿ ಸೌಮ್ಯ ಕೆ.ಆರ್. ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕ ಎಂ.ಎಸ್.ಗಣೇಶ್ ಹಾಗೂ ಶಾಲೆಯ ಸಹಶಿಕ್ಷಕರು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

11 ಕೋಟಿ ದಂಡ ಸಂಗ್ರಹ

ಇಲಾಖೆಯಿಂದಲೂ ಸಹಾಯವನ್ನು ಕೋರಿದ್ದೇವೆ. 12,583 ಬಿಪಿಎಲ್ ಫಲಾನುಭವಿಗಳು ಐಷಾರಾಮಿ 4 ಚಕ್ರ ವಾಹನಗಳನ್ನು ಹೊಂದಿರುವುದು ತಿಳಿದುಬಂದಿದೆ. ಮೂರು ಹೆಕ್ಟೇರ್‌ಗಿಂತ ಹೆಚ್ಚು ಕೃಷಿ ಭೂಮಿ ಹೊಂದಿರುವ 2.9 ಲಕ್ಷ ರೈತರು ಸಹ ಬಿಪಿಎಲ್ ಕಾರ್ಡ್‌ಗಳನ್ನು ಪಡೆದಿರುವುದನ್ನು ನಾವು ಕಂಡುಕೊಂಡಿದ್ದೇವೆ. ನಮ್ಮ ಅಧಿಕಾರಿಗಳು 2,679 ಅನರ್ಹ ಫಲಾನುಭವಿಗಳನ್ನು ಪತ್ತೆಹಚ್ಚಿದ್ದಾರೆ. ವಾರ್ಷಿಕ 1.2 ಲಕ್ಷ ರೂ.ಗಿಂತ ಹೆಚ್ಚು ಆದಾಯ ಹೊಂದಿರುವ 50,000 ಜನರನ್ನು ಆದಾಯ ತೆರಿಗೆ ಇಲಾಖೆಯ ದತ್ತಾಂಶಗಳಿಂದ ನಾವು ಪತ್ತೆಹಚ್ಚಿದ್ದೇವೆ ಎಂದು ಅವರು ಹೇಳಿದ್ದಾರೆ.

ಸರ್ಕಾರಿ ನೌಕರರನ್ನು ಶಿಕ್ಷಿಸಲು ಕೇವಲ ದಂಡ ವಿಧಿಸುವುದಷ್ಟೇ ಸಾಕೇ ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಇದು ಮೊದಲ ನಿದರ್ಶನವಾಗಿರುವುದರಿಂದ ಹಾಗೆ ಮಾಡಲಾಗಿದೆ. ಭಾರೀ ದಂಡ ವಿಧಿಸಿದ ನಂತರವಷ್ಟೇ ಅವರನ್ನು ಕ್ಷಮಿಸಲಾಗಿದೆ ಎಂದು ಹೇಳಿದ್ದಾರೆ. ಅಂತಹ 21,232 ನೌಕರರ ಪೈಕಿ 17,521 ಮಂದಿ ಈಗಾಗಲೇ ತಮ್ಮ ಪಡಿತರ ಚೀಟಿಯನ್ನು ಎಪಿಎಲ್ ವರ್ಗಕ್ಕೆ ಪರಿವರ್ತಿಸಿದ್ದಾರೆ ಎಂದು ಅವರು ತಿಳಿಸಿದ್ದಾರೆ. ದಂಡವನ್ನು ವಿಧಿಸುವಾಗ, ನಾವು ಅವರ ಆರ್ಥಿಕ ಸ್ಥಿತಿಯನ್ನು ಪರಿಗಣಿಸಿದ್ದೇವೆ. ಸರ್ಕಾರಿ ನೌಕರರು, ಸಿಬ್ಬಂದಿಗೆ ಭಾರೀ ಮೊತ್ತದ ದಂಡ ವಿಧಿಸಲಾಗುತ್ತದೆ ಎಂದು ಅವರು ಹೇಳಿರುವುದಾಗಿ ವರದಿ ಉಲ್ಲೇಖಿಸಿದೆ.

ಅವಧಿ ಜೂ.15ಕ್ಕೆ ವಿಸ್ತರಣೆ

ಶಾಲೆಗಳು ಪುನಾರಂಭ: ವಿದ್ಯಾರ್ಥಿಗಳು ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಕೆಗೆ ಹಾಗೂ ಪಾಸು ಪಡೆಯಲು ಕಾಲಾವಕಾಶ ನೀಡಬೇಕಿರುತ್ತದೆ. ಜೊತೆಗೆ ವಿದ್ಯಾರ್ಥಿಗಳ ಶೈಕ್ಷಣಿಕ ತರಗತಿಗಳಿಗೆ ಹಾಜರಾಗಲು ಯಾವುದೇ ಅನಾನುಕೂಲವಾಗದಂತೆ ಕ್ರಮವಹಿಸ ಬೇಕಿರುತ್ತದೆ. ಈ ಸಂಬಂಧ ವಿದ್ಯಾರ್ಥಿಗಳಿಗೆ ಜೂನ್ 15ರವರೆಗೆ ಈ ಕೆಳಕಂಡ ದಾಖಲೆಗಳನ್ನು ನಿಗಮದ ಬಸ್ಸುಗಳಲ್ಲಿ ತೋರಿಸಿ ನಿಗಮದ ನಗರ, ಹೊರವಲಯ, ಸಾಮಾನ್ಯ ಹಾಗೂ ವೇಗದೂತ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ನೀಡಲಾಗಿದೆ ಎಂದು ಕೆಎಸ್ಆರ್‌ಟಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

ಮೈಸೂರು ಜಿಲ್ಲೆಯಲ್ಲಿ ಶಾಲೆಗಳು ಆರಂಭ

ಗುಲಾಬಿ, ಸಿಹಿ ನೀಡಿ ಸಂಭ್ರಮದಿಂದ ಮಕ್ಕಳನ್ನು ಬರಮಾಡಿಕೊಂಡ ಶಿಕ್ಷಕರು, ಅಧಿಕಾರಿಗಳು, ಜನಪ್ರತಿನಿಧಿಗಳು





ಮೈಸೂರು, ಮೇ31(ಆರ್‌ಕೆ)– ರಾಜ್ಯಾದ್ಯಂತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳು ಇಂದಿನಿಂದ ಆರಂಭವಾದವು.

ಮೈಸೂರು ಜಿಲ್ಲೆಯ ಖಾಸಗಿ, ಅನುದಾನಿತ ಹಾಗೂ ಸರ್ಕಾರಿ ಶಾಲೆಗಳಲ್ಲಿ ಜನಪ್ರತಿನಿಧಿಗಳು, ಅಧಿಕಾರಿಗಳು ಮಕ್ಕಳನ್ನು ಗುಲಾಬಿ ಮತ್ತು ಸಿಹಿ ನೀಡಿ ಆತ್ಮೀಯವಾಗಿ ಬರಮಾಡಿಕೊಂಡರು. ಇದೇ ವೇಳೆ ಪಠ್ಯಪುಸ್ತಕ, ನೋಟ್ ಬುಕ್, ಸಮವಸ್ತ್ರಗಳನ್ನು ಮಕ್ಕಳಿಗೆ ವಿತರಿಸಲಾಯಿತಲ್ಲದೆ, ಎಲ್ಲಾ ಶಾಲೆಗಳಲ್ಲೂ ಮೊದಲ ದಿನವೇ ಮಧ್ಯಾಹ್ನದ ಬಿಸಿ ಊಟ ನೀಡಲಾಯಿತು.

ಶಾಲಾ ಆರಂಭಕ್ಕೆ ನಿನ್ನೆ (ಮೇ 30) ಯೇ ಸ್ವಚ್ಛತೆ, ಶೌಚಾಲಯ, ಕುಡಿಯುವ ನೀರು, ವಿದ್ಯುತ್ ಸೌಕರ್ಯಗಳಂತಹ ವ್ಯವಸ್ಥೆಯನ್ನು ಕಲ್ಪಿಸಿ ಅಧಿಕಾರಿಗಳು ಹಾಗೂ ಶಿಕ್ಷಕರು ಸರ್ವರೀತಿಯಲ್ಲಿ ಸಿದ್ಧತೆ ಮಾಡಿ ಮಕ್ಕಳನ್ನು ಬರಮಾಡಿಕೊಳ್ಳಲು ತಯಾರಿ ನಡೆಸಿದ್ದರು. ಅದರಂತೆ ಜಿಲ್ಲೆಯ ಎಲ್ಲಾ 3,446 ಶಾಲೆಗಳಲ್ಲಿ ಇಂದಿನಿಂದ ತರಗತಿಗಳು ಆರಂಭವಾಗಿವೆ.

ಕೆ.ಆರ್. ಕ್ಷೇತ್ರ ವ್ಯಾಪ್ತಿಯ ಕನಕಗಿರಿ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಶಾಸಕ ಟಿ.ಎಸ್. ಶ್ರೀವತ್ಸ, ಮಕ್ಕಳಿಗೆ ಸಿಹಿ ನೀಡಿ ಬರಮಾಡಿಕೊಂಡರು. ಶಾಸಕ ತನ್ವೀರ್ ಸೇಠ್ ಅವರು ಕಲ್ಯಾಣಗಿರಿ ಸರ್ಕಾರಿ ಶಾಲೆ, ಲಷ್ಕರ್ ಮೊಹಲ್ಲಾದ ಸರ್ಕಾರಿ ನಿಜಾಮಿಯಾ ಶಾಲೆಯಲ್ಲಿ ಮಕ್ಕಳ ಶಾಲಾ ಪ್ರಾರಂಭೋತ್ಸವದಲ್ಲಿ ಪಾಲ್ಗೊಂಡು ಶುಭ ಕೋರಿದರು. ಚಾಮರಾಜ ಕ್ಷೇತ್ರದ ಕುಂಬಾರಕೊಪ್ಪಲು ಸರ್ಕಾರಿ ಶಾಲೆಯಲ್ಲಿ ಶಾಸಕ ಕೆ. ಹರೀಶ್‌ಗೌಡ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್ ಅವರು ಇಂದು ಶಾಲೆ ಪ್ರಾರಂಭೋತ್ಸವದಲ್ಲಿ ಪಾಲ್ಗೊಂಡು ಮಕ್ಕಳಿಗೆ ಸಮವಸ್ತ್ರ ವಿತರಿಸಿ ಶುಭ ಕೋರಿದರು. ಜಿಲ್ಲೆಯಾದ್ಯಂತ ಶಾಸಕರು, ಜಿಲ್ಲಾ ಪಂಚಾಯ್ತಿ, ತಾಲೂಕು ಪಂಚಾಯ್ತಿ ಸದಸ್ಯರು ತಮ್ಮ ವ್ಯಾಪ್ತಿಯ ಶಾಲೆಗಳಲ್ಲಿ ಮಕ್ಕಳಿಗೆ ಸ್ವಾಗತ ಕೋರಿದರು. ಮೊದಲ ದಿನವಾದ ಇಂದು ಪೋಷಕರು ತಮ್ಮ ಮಕ್ಕಳನ್ನು ಶಾಲೆಗಳಿಗೆ ಕರೆ ತಂದು ಬಿಡುತ್ತಿದ್ದರು. ಆಟೋ, ವ್ಯಾನ್‌ಗಳಲ್ಲೂ ಮಕ್ಕಳು ಬಂದು ಉತ್ಸಾಹದಿಂದ ತರಗತಿಗಳಿಗೆ ಹಾಜರಾಗುತ್ತಿದ್ದುದು ಕಂಡು ಬಂದಿತು. ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲೆಗಳಿಗೆ ಭೇಟಿ ನೀಡಿ ಮಕ್ಕಳ ವಿದ್ಯಾಭ್ಯಾಸಕ್ಕೆ ಅಗತ್ಯವಿರುವ ವಾತಾವರಣ ಸೃಷ್ಟಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಿ ಸುರಕ್ಷತೆ ದೃಷ್ಟಿಯಿಂದ ಅಗತ್ಯ ಕ್ರಮ ವಹಿಸುವಂತೆ ಶಾಲಾ ಮುಖ್ಯೋಪಾಧ್ಯಾಯರಿಗೆ ಸೂಚನೆಗಳನ್ನು ನೀಡಿದರು.

ಶಾಲಾಭಿವೃದ್ಧಿ ಸಮಿತಿ ಸದಸ್ಯರೂ ಸಹ ಹಾಜರಿದ್ದು, ಶಾಲೆಗಳಲ್ಲಿ ಒದಗಿಸಿರುವ ಸೌಲಭ್ಯಗಳನ್ನು ಪರಿಶೀಲಿಸಿ ಮಧ್ಯಾಹ್ನ ಮಕ್ಕಳೊಂದಿಗೆ ಬಿಸಿಯೂಟ ಮಾಡಿದರಲ್ಲದೇ, ಮಕ್ಕಳನ್ನು ಶಾಲೆಗೆ ಸೇರಿಸುವಂತೆ ಪೋಷಕರಿಗೆ ಸಲಹೆ ನೀಡಿದರು.

ತಂಬಾಕು ಸೇವನೆ ಬಿಡಿ; ಗಿಡ ನೆಡಿ, ಪರಿಸರ ಉಳಿಸಿ



ಮೈಸೂರು, ಮೇ 31– ಮೈಸೂರಿನ ಜಲಪುರಿ ಪೊಲೀಸ್ ಕ್ವಾಟರ್ಸ್‌ನಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಆಸ್ಪತ್ರೆಯ ಆವರಣದಲ್ಲಿ ಪರಿಸರ ಸ್ನೇಹಿ ತಂಡದ ವತಿಯಿಂದ ತಂಬಾಕು ರಹಿತ ದಿನಾಚರಣೆ ಅಂಗವಾಗಿ ತಂಬಾಕು ಬಿಡಿ, ಇತರೆ ಉಪಯುಕ್ತ ಸಸಿಗಳನ್ನು ನೆಡಿ, ಆರೋಗ್ಯ ಹಾಗೂ ಪರಿಸರ ಉಳಿಸಿ ಎಂದು ಸಸಿ ನೆಟ್ಟು ಜಾಗೃತಿ ಮೂಡಿಸಲಾಯಿತು.

ಈ ವೇಳೆ ಡಾ.ಪುಷ್ಪಲತಾ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ವಯಸ್ಸಾದವರಿಗಿಂತ ಯುವಕರೇ ಹೆಚ್ಚಾಗಿ ತಂಬಾಕು ಹಾಗೂ ಇದರಿಂದ ಮಾಡಿದ ವಸ್ತುಗಳನ್ನು ಸೇವಿಸುತ್ತಿದ್ದಾರೆ. ಯುವಕರಿಗೆ ಅದರಿಂದಾಗುವ ಹಾನಿ, ತೊಂದರೆಗಳನ್ನು ಅರ್ಥ ಮಾಡಿಸುವ ಸಲುವಾಗಿ ಈ ಕಾರ್ಯಕ್ರಮವನ್ನು ವಿಶ್ವದಾದ್ಯಂತ ಆಚರಿಸುತ್ತಿದೆ.

ತಂಬಾಕು ಸೇವನೆಯಿಂದ ಆಗುತ್ತಿರುವ ಸಾವಿನ ಸಂಖ್ಯೆಯು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಸಿಗರೇಟ್ ಸೇದುವವರು ತಮ್ಮ ಅಕ್ಕಪಕ್ಕದಲ್ಲಿರುವವರಿಗೆ ಹೆಚ್ಚಿನ ಹಾನಿಯನ್ನು ಮಾಡುತ್ತಾರೆ. ತಮಗೆ ಕಾಯಿಲೆಯನ್ನು ತಂದುಕೊಳ್ಳುವುದಲ್ಲದೆ ಈ ಚಟ ಇಲ್ಲದ ಜನರಿಗೂ ಕಾಯಿಲೆಗಳನ್ನು ಹರಡುತ್ತಾರೆ. ಹೀಗಾಗಿ ಅಮಾಯಕರೂ ಸಾಯುತ್ತಾರೆ. ಇದನ್ನು ತಡೆಯುವ ನಿಟ್ಟಿನಲ್ಲಿ ಯುವಕರು ಪ್ರಯತ್ನಶೀಲರಾಗಬೇಕು ಎಂದರು.

ಪರಿಸರ ಸ್ನೇಹ ತಂಡದ ಅಧ್ಯಕ್ಷ ಡಿ. ಲೋಹಿತ್ ಮಾತನಾಡಿ, ತಂಬಾಕು ಸೇವನೆಯಿಂದ ಆರೋಗ್ಯ ಹಾಗೂ ಪರಿಸರ ಹಾಳಾಗುತ್ತದೆ. ಆದ್ದರಿಂದ ವಿಷಕಾರಿಯಾದಂತಹ ತಂಬಾಕು ವುಳ್ಳ ಪದಾರ್ಥಗಳನ್ನು ತ್ಯಜಿಸಬೇಕು. ಶಾಲಾ ಕಾಲೇಜು, ಆಸ್ಪತ್ರೆ, ದೇವಸ್ಥಾನ ಗಳಲ್ಲಿ ಸಸಿಗಳನ್ನು ನೆಟ್ಟರೆ ಆರೋಗ್ಯಕ್ಕೂ ಒಳ್ಳೆಯದು ಪರಿಸರಕ್ಕೂ ನಮ್ಮ ಕಡೆಯಿಂದ ಕೊಡುಗೆ ಕೊಟ್ಟಂತಾಗುತ್ತದೆ. ಆದ್ದರಿಂದ ಪರಿಸರ ಕಾಳಜಿಯಿಂದ ನಮ್ಮ ಬಡಾವಣೆಯ ಸರ್ಕಾರಿ ಆಸ್ಪತ್ರೆಯಲ್ಲಿ ಸಸಿಗಳನ್ನು ನೆಟ್ಟು ಗಿಡ ನೆಡಿ, ತಂಬಾಕು ಬಿಡಿ ಎಂದು ಯುವ ಸಮುದಾಯಕ್ಕೆ ಜಾಗೃತಿ ಮೂಡಿಸಿದರು

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರಾದ ಮುತ್ತಣ್ಣ ಬಿಡನಾಳ, ಪೊಲೀಸ್ ಅಧಿಕಾರಿ ರಾಜೇಂದ್ರ, ಆದಿಶಕ್ತಿ ದೇವಸ್ಥಾನದ ಅಧ್ಯಕ್ಷರಾದ ಹೇಮಾವತಿ, ಆಸ್ಪತ್ರೆಯ ಸಿಬ್ಬಂದಿವರ್ಗದವರಾದ ಸರ್ದಾರ್, ಸತೀಶ್, ವಾಹಿದ್, ಹೇಮಲತಾ, ದೀಪ, ಮೂರ್ತಿ, ರುಕ್ಮಿಣಿ, ರೂಪ, ಪೂರ್ಣಿಮಾ, ರವಿಕುಮಾರ್ ಹಾಗೂ ಪರಿಸರ ಸ್ನೇಹಿ ತಂಡದ ಸದಸ್ಯರಾದ ರಂಗಸ್ವಾಮಿ, ಮನೋಹರ, ಕಿಶೋರ್, ಇತರರು ಉಪಸ್ಥಿತರಿದ್ದರು.

ನೂತನ ಪದಾಧಿಕಾರಿಗಳು

ಮೈಸೂರು, ಮೇ 31– ಶ್ರೀಆದಿಶಕ್ತಿ ಪಟ್ಟಲಮ್ಮ ಮತ್ತು ಶ್ರೀ ಕತ್ತಿಮುನೇಶ್ವರ ದೇವಸ್ಥಾನ ಸಮಿತಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಆರ್. ಮಹದೇವ, ಪಿ. ಮಂಜುನಾಥ್ (ಸಭಾಧ್ಯಕ್ಷರು), ಸಿ.ಎಂ. ಮಹದೇವ (ದೇವಸ್ಥಾನದ ಉಸ್ತುವಾರಿ ಅಧ್ಯಕ್ಷ), ಎಸ್.ಎಂ. ಪಳನಿಸ್ವಾಮಿ (ಛೇರ್ಮನ್), ಸಿ.ಎನ್. ಕುಮಾರಸ್ವಾಮಿ (ಉಪಾಧ್ಯಕ್ಷ), ಎನ್.ಶೇಖರ್, ಆರ್.ರಂಗಸ್ವಾಮಿ, ಪೆದ್ದಣ್ಣ, ಮಂಜುನಾಥ್, ಸುಬ್ರಮಣಿ, ಸುರೇಂದ್ರ, ಮಣಿ (ಯಜಮಾನರು). ಡಾ.ಬಿ.ಆರ್.ಅಂಬೇಡ್ಕರ್ ಆದಿ ದ್ರಾವಿಡ ಯುವಕರ ಅಭಿವೃದ್ಧಿ ಸಂಘದ ಪದಾಧಿಕಾರಿಗಳು: ಎನ್. ನಂಜುಂಡ–ಕಾರ್ಯಾಧ್ಯಕ್ಷ, ಎಂ.ಮೋಹನ್ ಕುಮಾರ್–ಉಪಾಧ್ಯಕ್ಷ, ಆರ್.ಶಿವಕುಮಾರ್ –ಕಾರ್ಯದರ್ಶಿ, ಆರ್. ಕೃಷ್ಣ–ಖಜಾಂಚಿ, ಆರ್.ನವೀನ್ ಕುಮಾರ್–ಸಂಘಟನಾ ಕಾರ್ಯದರ್ಶಿ, ರಾಜ (ಸದಸ್ಯರು).

ನನ್ನ ಜೀವನ ನನ್ನ ಸ್ವಚ್ಛ ನಗರ ಜಾಗೃತಿ ಜಾಥಾ

ಮೈಸೂರು, ಮೇ 31– ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕ ಹಾಗೂ ವಿದ್ಯಾರಣ್ಯ ಟ್ರಸ್ಟ್ ಮತ್ತು ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ಸಹಯೋಗದೊಂದಿಗೆ ನನ್ನ ಜೀವನ ನನ್ನ ಸ್ವಚ್ಛ ನಗರ ಜಾಗೃತಿ ಜಾಥಾ ಜೂನ್ 1 ರಂದು ಸಂಜೆ 5.30 ಗಂಟೆಗೆ ವಿದ್ಯಾರಣ್ಯಪುರಂನಲ್ಲಿರುವ ವಿದ್ಯಾರಣ್ಯ ಕೋಚಿಂಗ್ ಸೆಂಟರ್ ಮುಂಭಾಗದಿಂದ ಹೊರಡುವುದು ಎಂದು ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಅಧ್ಯಕ್ಷ ಡಾ.ಜಿ.ವಿ. ರವಿಶಂಕರ್ ತಿಳಿಸಿದ್ದಾರೆ

ಮುಖ್ಯ ಅತಿಥಿಗಳಾಗಿ ಮಹಾಪೌರ ಶಿವಕುಮಾರ್, ನಗರಪಾಲಿಕೆ ಆರೋಗ್ಯ ಅಧಿಕಾರಿ ಡಾ.ನಾಗರಾಜ್, ನಗರಪಾಲಿಕೆ ಸದಸ್ಯ ಮಾ.ವಿ. ರಾಮಪ್ರಸಾದ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಅರ್ಥಶಾಸ್ತ್ರದ ವಿಭಾಗದ ಪ್ರಾಧ್ಯಾಪಕರಾದ ಡಾ.ಆರ್.ಹೆಚ್ ಪವಿತ್ರ, ಸಾಮಾಜಿಕ ಹೋರಾಟಗಾರ ವಿಕ್ರಂ ಅಯ್ಯಂಗಾರ್ ಇನ್ನಿತರರು ಭಾಗವಹಿಸಲಿದ್ದಾರೆ.

ಸಿದ್ಧ ಸಮಾಧಿ ಯೋಗ ಶಿಬಿರ

ಮೈಸೂರು, ಮೇ 31– ಋಷಿ ಸಂಸ್ಕೃತಿ ವಿದ್ಯಾಕೇಂದ್ರದ ವತಿಯಿಂದ ಜೂ. 5 ರಿಂದ 14 ದಿನಗಳ ಕಾಲ ಸಿದ್ಧ ಸಮಾಧಿ ಯೋಗ ಶಿಬಿರ ಹಮ್ಮಿಕೊಳ್ಳಲಾಗಿದೆ. ಈ ಸಂಬಂಧ ಜೂ. 4 ರಂದು ಸಂಜೆ 6.30ಕ್ಕೆ ಉಚಿತ ಪರಿಚಯ ಕಾರ್ಯಕ್ರಮ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9448458050, 8618762110 ಸಂಪರ್ಕಿಸಬಹುದು.

ಗ್ಯಾರಂಟಿಗೆ ಅಪಸ್ವರ; ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಐಎಸ್‌ಎನ್ ಪ್ರಸಾದ್ ಅಧಿಕಾರಕ್ಕೆ ಕತ್ತರಿ!

ಜೂ.30ಕ್ಕೆ ವಯೋನಿವೃತ್ತಿ ಹಿನ್ನೆಲೆಯಲ್ಲಿ ಆ ಸ್ಥಾನಕ್ಕೆ ಅತೀಕ್ ತರುವ ನಿರ್ಧಾರ



ಪ್ರಸಾದ್

ಬೆಂಗಳೂರು, ಮೇ 31(ಕೆಎಂಶಿ)– ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆ ಅನುಷ್ಠಾನಕ್ಕೆ ಅಪಸ್ವರ ಎತ್ತಿದ ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಐಎಸ್‌ಎನ್ ಪ್ರಸಾದ್ ಅವರ ಅಧಿಕಾರ ಕಸಿದುಕೊಳ್ಳಲಾಗಿದೆ.

ಹಠಾತ್ ಬೆಳವಣಿಗೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಆಪ್ತ ಬಳಗದಲ್ಲಿರುವ ಗ್ರಾಮೀಣ ಮತ್ತು ಪಂಚಾಯತ್ ರಾಜ್ ಇಲಾಖೆ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಎಲ್.ಕೆ.ಅತೀಕ್ ಅವರನ್ನು ಹಣಕಾಸು ಇಲಾಖೆಯಲ್ಲಿ ವಿಶೇಷ ಅಧಿಕಾರಿಯ ಹುದ್ದೆ ಸೃಷ್ಟಿಸಿ ನೇಮಕ ಮಾಡಿದ್ದಾರೆ.

ಐಎಸ್‌ಎನ್ ಪ್ರಸಾದ್ ಜೂ.30ಕ್ಕೆ ವಯೋನಿವೃತ್ತಿ ಹೊಂದಲಿದ್ದಾರೆ. ಇನ್ನೂ ಒಂದು ತಿಂಗಳ ಅವಧಿಯಲ್ಲಿ ಬೇರೆ ಇಲಾಖೆಗೆ ವರ್ಗಾವಣೆ ಮಾಡಬಾರದು ಎಂಬ ಉದ್ದೇಶದಿಂದ ಸರ್ಕಾರ ಪರೋಕ್ಷವಾಗಿ ಅವರ ಅಧಿಕಾರವನ್ನು ಕಸಿದು, ನೆಪ ಮಾತ್ರಕ್ಕೆ ಮುಂದುವರೆಸಿದೆ. ಪ್ರಸಾದ್ ನಿವೃತ್ತಿಯ ನಂತರ ತೆರವಾಗುವ ಈ ಸ್ಥಾನಕ್ಕೆ ಇಂದೇ ಆದೇಶ ಹೊರಡಿಸಿ ಅತೀಕ್ ಅವರನ್ನು ವರ್ಗಾವಣೆ ಮಾಡುವುದರ ಜತೆಗೆ ಅಲ್ಲಿಯವರೆಗೂ ಹೊಸದೊಂದು ಹುದ್ದೆ ಸೃಷ್ಟಿಸಲಾಗಿದೆ.


ಒಂದು ತಿಂಗಳ ತಾತ್ಕಾಲಿಕ ಅವಧಿಗೆ ಅತೀಕ್ ಅವರು ಹಣಕಾಸು ಇಲಾಖೆಯ ವಿಶೇಷಾಧಿಕಾರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸಲಿದ್ದಾರೆ.

ಗ್ಯಾರಂಟಿ ಯೋಜನೆಗಳ ಅನುಷ್ಠಾನಗೊಳಿಸಲು ಹಣಕಾಸು ಇಲಾಖೆಯಿಂದ ಸಾಧ್ಯವೇ ಇಲ್ಲವೆಂದು ಪ್ರಸಾದ್ ಸರ್ಕಾರಕ್ಕೆ ವರದಿ ನೀಡಿದ್ದರು. ಈ ಎಲ್ಲಾ ಯೋಜನೆಗಳ ಅನುಷ್ಠಾನಕ್ಕೆ 50–55 ಸಾವಿರ ಕೋಟಿ ರೂ.ಗಳ ಅಗತ್ಯವಿದೆ. ಇಷ್ಟು ಪ್ರಮಾಣದ ಬೃಹತ್ ಸಂಪನ್ಮೂಲವನ್ನು ಏಕಾಏಕಿ ಸೃಷ್ಟಿಸಲು ಸಾಧ್ಯವಿಲ್ಲ. 23000 ಕೋಟಿ ರೂ.ಗಳಷ್ಟು ಬಾಕಿ ಬಿಲ್‌ಗಳಿದ್ದು, ಇವುಗಳನ್ನು ಪಾವತಿಸಲು ಹಣವಿಲ್ಲ. ಇನ್ನೂ ಹೊಸ ಯೋಜನೆ ಹೇಗೆ ಕೈಗೆತ್ತಿಕೊಳ್ಳುವುದು ಎಂಬ ಬಗ್ಗೆ ಸವಿಸ್ತಾರ ಮಾಹಿತಿ ನೀಡಿದ್ದರು. ಮೂರರಿಂದ ನಾಲ್ಕು ಸಾವಿರ ಕೋಟಿ ರೂ.ಗಳಷ್ಟು ಸಂಪನ್ಮೂಲ ಆಸ್ತಿ ತೆರಿಗೆ ಹೆಚ್ಚಿಸಿ ಸಂಗ್ರಹಿಸಬಹುದು.

ಕೇಂದ್ರ ಸರ್ಕಾರದ ಜಿಎಸ್‌ಟಿ ಅನುಷ್ಠಾನದ ನಂತರ ರಾಜ್ಯ ಸರ್ಕಾರಕ್ಕೆ ಸಂಪನ್ಮೂಲ ಸಂಗ್ರಹದಲ್ಲಿ ಇತಿಮಿತಿಗಳಿವೆ.

ಈ ಇತಿಮಿತಿಯಲ್ಲಿ ನಾವು ದೊಡ್ಡ ಪ್ರಮಾಣದ ಸಂಪನ್ಮೂಲ ಕ್ರೋಢೀಕರಣ ಸಾಧ್ಯವೇ ಇಲ್ಲ ಎಂದು ಸ್ಪಷ್ಟಪಡಿಸಿದರು. ಸರ್ಕಾರ ಪರ್ಯಾಯ ಮಾರ್ಗ ಹುಡುಕುವಂತೆ ನೀಡಿದ ಸಲಹೆಗೂ ಅವರು ಸ್ಪಂದಿಸಿರಲಿಲ್ಲ. ಅತೀಕ್ ಅವರನ್ನು ಏಕಾಏಕಿ ಈ ಸ್ಥಾನಕ್ಕೆ ತಂದ ಮುಖ್ಯಮಂತ್ರಿ ಅವರು ಸಂಪುಟ ಸಭೆಯನ್ನು ಒಂದು ದಿನ ಮುಂದೂಡಿ ಇಲಾಖೆಯಲ್ಲಿ ಸಮಗ್ರವಾದ ಮಾಹಿತಿ ಪಡೆದುಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದಾರೆ. ರಾಜ್ಯ ಮುಖ್ಯಕಾರ್ಯದರ್ಶಿ ವಂದಿತಾ ಶರ್ಮ ಅವರ ಪತಿಯೇ ಪ್ರಸಾದ್, ಕಳೆದ 10 ವರ್ಷಕ್ಕೂ ಹೆಚ್ಚು ಕಾಲ ಹಣಕಾಸು ಇಲಾಖೆಯ ಹೊಣೆಗಾರಿಕೆಯನ್ನು ನಿರ್ವಹಿಸುತ್ತಿದ್ದರು.

ರಾಜ್ಯದಲ್ಲಿ ಯುಪಿಎಸ್‌ಸಿ ಪರೀಕ್ಷೆ ತೆಗೆದುಕೊಳ್ಳುವವರ ಸಂಖ್ಯೆ ಹೆಚ್ಚಾಗಬೇಕು



ಮೈಸೂರು, ಮೇ 31– ಕರ್ನಾಟಕದಲ್ಲಿ ಯುಪಿಎಸ್‌ಸಿ ಪರೀಕ್ಷೆ ತೆಗೆದುಕೊಳ್ಳುವವರ ಸಂಖ್ಯೆ ಹೆಚ್ಚಾಗಬೇಕು ಎಂದು ಯುಪಿಎಸ್‌ಸಿ ಪರೀಕ್ಷೆಯಲ್ಲಿ 448ನೇ ರ್‍ಯಾಂಕ್ ಪಡೆದ ಡಾ. ಭಾನುಪ್ರಕಾಶ್ ತಿಳಿಸಿದರು.

ಯುಪಿಎಸ್‌ಸಿ ಪರೀಕ್ಷೆಯಲ್ಲಿ 448ನೇ ರ್‍ಯಾಂಕ್ ಪಡೆದಿರುವ ಡಾ. ಭಾನುಪ್ರಕಾಶ್ ಅವರಿಗೆ ಹಿನಕಲ್‌ನಲ್ಲಿ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿತ್ತು. ಈ ವೇಳೆ ಮಾತನಾಡಿದ ಅವರು, ನಾನು 1 ರಿಂದ 5ನೇ ತರಗತಿಯವರೆಗೆ ಬೆಳವಾಡಿಯ ಸರ್ಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡಿದ್ದೇನೆ. ಸರ್ಕಾರಿ ಶಾಲೆಯಲ್ಲಿ ಓದಿದವರು ರಾಜ್ಯದ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಕರ್ನಾಟಕದಿಂದ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗುವವರ ಸಂಖ್ಯೆ ಕಡಿಮೆ ಇದ್ದು, ಹೆಚ್ಚು ಹೆಚ್ಚು ಮಂದಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯಬೇಕು. ಒಂದು ಬಾರಿ ಬರೆದರೆ ಸಾಲದು. ಪ್ರಯತ್ನ, ಶ್ರಮ, ಶ್ರದ್ಧೆ ನಿರಂತರವಾಗಿದ್ದರೆ ಸಾಧನೆ ಸಾಧ್ಯವಾಗುತ್ತದೆ. ನನಗೆ ಈಗ ಐಪಿಎಸ್ ಹುದ್ದೆ ಸಿಗಬಹುದು. ಆದ್ದರಿಂದ ನಾನು ಮತ್ತೊಮ್ಮೆ ಯುಪಿಎಸ್‌ಸಿ ಪರೀಕ್ಷೆಯನ್ನು ಬರೆಯುತ್ತಿದ್ದೇನೆ. ನಮ್ಮ ಸಮಾಜದ ವಿದ್ಯಾವಂತ ಪದವೀಧರರು ಹೆಚ್ಚಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಿ ಸರ್ಕಾರಿ ಸೇವೆಗೆ ಸೇರಬೇಕು. ನಿಮ್ಮ ಈ ಅಭಿಮಾನಕ್ಕೆ ನಾನು ಚಿರಋಣಿ ಎಂದರು.

ಈ ಸಂದರ್ಭದಲ್ಲಿ ಹಿನಕಲ್ ಗ್ರಾಮದ ಹಿರಿಯರಾದ ಪಾಪಣ್ಣ, ಗ್ರಾಪಂ ಮಾಜಿ ಉಪಾಧ್ಯಕ್ಷ ಹೊನ್ನಪ್ಪ, ದೇವಣ್ಣ, ದೊಡ್ಡೇಗೌಡ, ಶ್ರೀನಿವಾಸ ಕೆ.ಜಿ. ನಾಗರಾಜು, ಉದಯ್, ಕರಿಯಪ್ಪ ಸಿದ್ದಪ್ಪ ಉಮಾಶಂಕರ್, ಡಾ. ಭಾನುಪ್ರಕಾಶ್ ತಂದೆ ಜಯರಾಮೇಗೌಡ, ಸುರೇಶ್, ಶೇಖರ್, ಕೀರ್ತಿ, ರಟ್ನಳ್ಳಿ ಶಿವಣ್ಣ, ಮಹಾದೇವ ಹಾಜರಿದ್ದರು.

ತಂಬಾಕಿನ ವಿಷಕಾರಿ ಅಂಶಗಳಿಂದ ಮನುಷ್ಯನ ದೇಹದ ಮೇಲೆ ಭಾರೀ ದುಷ್ಪರಿಣಾಮ

ಖ್ಯಾತ ವೈದ್ಯ ಡಾ.ಮಂಜುನಾಥ್ ಎಚ್ಚರಿಕೆ



ಮೈಸೂರು, ಮೇ 31– ತಂಬಾಕಿನಲ್ಲಿ 300ಕ್ಕೂ ಹೆಚ್ಚು ವಿಷಕಾರಿ ಅಂಶಗಳಿದ್ದು, ತಂಬಾಕು ಸೇವನೆಯ ಪರಿಣಾಮ ನೇರವಾಗಿ ದೇಹದ ಪ್ರತಿಯೊಂದು ಪ್ರಮುಖ ಅಂಗದ ಮೇಲೆ ಪರಿಣಾಮ ಬೀರುತ್ತದೆ ಎಂದು ಡಿಆರ್‌ಎಂ ಆಸ್ಪತ್ರೆಯ ನಿರ್ದೇಶಕ ಡಾ. ಮಂಜುನಾಥ್ ತಿಳಿಸಿದ್ದಾರೆ.

ಮೈಸೂರಿನ ಒಂಟಿಕೊಪ್ಪಲಿನಲ್ಲಿರುವ ಡಿಆರ್‌ಎಂ ಆಸ್ಪತ್ರೆ ಹಾಗೂ ಜೀವಧಾರ ರಕ್ತ ನಿಧಿ ಕೇಂದ್ರದ ಸಹಯೋಗದೊಂದಿಗೆ ವಿಶ್ವ ತಂಬಾಕು ರಹಿತ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಸ್ವಯಂ ಪ್ರೇರಿತ ರಕ್ತದಾನ ಶಿಬಿರದಲ್ಲಿ ಡಾ. ಮಂಜುನಾಥ್ ಸ್ವಯಂ ಪ್ರೇರಿತ ರಕ್ತದಾನ ಮಾಡಿ, ಮಾತನಾಡಿದರು.

ಬಾಯಿ ಕ್ಯಾನ್ಸರ್ ಅನ್ನು ಮೊದಲ ಹಂತದಲ್ಲಿ ಪತ್ತೆ ಹಚ್ಚಿದಲ್ಲಿ ಶೇ.90 ಗುಣಪಡಿಸಬಹುದು. ನಾಲ್ಕನೇ ಹಂತದಲ್ಲಿ ಕ್ಯಾನ್ಸರ್ ಪತ್ತೆ ಹಚ್ಚಿದಲ್ಲಿ ಸಂಪೂರ್ಣವಾಗಿ ಗುಣಪಡಿಸಲು ಸಾಧ್ಯವಾಗುವುದಿಲ್ಲ. ಬಾಯಿ ಕ್ಯಾನ್ಸರ್‌ಗೆ ಸರ್ಜರಿ, ರೇಡಿಯೇಶನ್, ಕಿಮೋಥೆರಪಿ ಚಿಕಿತ್ಸೆಗಳಿದ್ದು, ಸರ್ಜರಿ ಮೂಲಕ ಸಂಪೂರ್ಣವಾಗಿ ಗುಣಪಡಿಸಬಹುದು. ತಂಬಾಕು ಸೇವನೆ ಬಹುದೊಡ್ಡ ಸಮಸ್ಯೆಯಾಗಿದ್ದು, ಇದಕ್ಕೆ ಹೆಚ್ಚಾಗಿ ಬಲಿಯಾಗುತ್ತಿರುವವರು 15ಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು. ಇದು ಬಹಳ ಅಪಾಯಕಾರಿ. ಮೋಜು, ಮಸ್ತಿಗಾಗಿ ಪ್ರಾರಂಭವಾಗಿ ಅದೊಂದು ಚಟವಾಗಿ ಪರಿವರ್ತನೆಯಾಗುತ್ತದೆ. ತಂಬಾಕು ಸೇವನೆಗೆ ಇತ್ತೀಚೆಗೆ ಯುವಜನತೆ ಹೆಚ್ಚಾಗಿ ಬಲಿಯಾಗುತ್ತಿದ್ದು ತಂಬಾಕು ಸುಲಭವಾಗಿ ಸಿಗದಂತೆ ಮಾಡಬೇಕು ಎಂದರು. ಡಿಆರ್‌ಎಂ ಆಸ್ಪತ್ರೆಯ ನಿರ್ದೇಶಕ ಡಿ.ಟಿ.ಪ್ರಕಾಶ್ ಮಾತನಾಡಿ, ತಂಬಾಕು ರಹಿತ ದಿನಾಚರಣೆಯು ಒಂದು ದಿನಕ್ಕೆ ಮಾತ್ರ ಸೀಮಿತವಾಗಿರದೇ ಪ್ರತಿನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ, ತಂಬಾಕು ಸೇವನೆ ಮಾಡುವುದು ಕಂಡುಬಂದಲ್ಲಿ ತಂಬಾಕು ಸೇವನೆ ಮಾಡಿದವರಿಗೆ ಮಾತ್ರವಲ್ಲದೆ ಅವರ ಸಮೀಪವಿರುವವರಿಗೂ ಕಾಯಿಲೆ ಬರುವ ಸಾಧ್ಯತೆ ಇರುವುದರಿಂದ ನಮಗೆ ಯಾಕೆ ಎಂದು ಸುಮ್ಮನಿರದೆ ಖಂಡಿಸಬೇಕು ಎಂದು ಹೇಳಿದರು.

50 ಮಂದಿ ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿ ವರ್ಗದವರು ಸ್ವಯಂ ಪ್ರೇರಿತ ರಕ್ತದಾನ ಮಾಡಿದರು.

ಘಟಕ ಮುಖ್ಯಸ್ಥರಾದ ಚಿದು, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಮುತ್ತಣ್ಣ, ರಶ್ಮಿ, ಜನರಲ್ ಮ್ಯಾನೇಜರ್ ಲೋಕೇಶ್, ಅಕೌಂಟ್ ಮ್ಯಾನೇಜರ್ ಸಂಜಯ್, ಆಸ್ಪತ್ರೆಯ ಸಿಬ್ಬಂದಿಗಳಾದ ಜಬ್ಬಿ, ಲಾವಣ್ಯ, ರೂಪ, ನಂದಿನಿ, ತೆಂಜಿಲ್, ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

ತಿ.ನರಸೀಪುರವನ್ನು ಉದ್ಯಮ ವಲಯವನ್ನಾಗಿ ಅಭಿವೃದ್ಧಿಪಡಿಸಿ

ಮುಖ್ಯಮಂತ್ರಿ ಸಿದ್ದರಾಮಯ್ಯನವರಲ್ಲಿ ಕಾಂಗ್ರೆಸ್ ಮುಖಂಡರ ನಿಯೋಗ ಮನವಿ

ತಿ.ನರಸೀಪುರ, ಮೇ 31– ಯುವ ಜನತೆಗೆ ಉದ್ಯೋಗ ಕಲ್ಪಿಸಲು ತಿ.ನರಸೀಪುರವನ್ನು ಉದ್ಯಮ ವಲಯವನ್ನಾಗಿ ಅಭಿವೃದ್ಧಿಪಡಿಸಬೇಕು ಎಂದು ಕಾಂಗ್ರೆಸ್ ಮುಖಂಡರ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಮನವಿ ಮಾಡಿದೆ.

ಟೌನ್ ಒಕ್ಕಲಿಗರ ಸಂಘದ ಅಧ್ಯಕ್ಷ ಪಿ. ಸ್ವಾಮಿನಾಥಗೌಡ ನೇತೃತ್ವದ ವರುಣ ಕಾಂಗ್ರೆಸ್ ಮುಖಂಡರ ನಿಯೋಗ ಬೆಂಗಳೂರಿನ ಮುಖ್ಯಮಂತ್ರಿಗಳ ಅಧಿಕೃತ ನಿವಾಸದಲ್ಲಿ ಸಿದ್ದರಾಮಯ್ಯ ಅವರನ್ನು ಬೇಟಿ ಮಾಡಿ ತಿ.ನರಸೀಪುರವನ್ನು ಔದ್ಯೋಗಿಕ ನಗರವನ್ನಾಗಿಸಲು ಯೋಜನೆ ರೂಪಿಸಬೇಕು. ಗ್ರಾಮೀಣ ಯುವ ಜನತೆಗೆ ಉದ್ಯೋಗವಕಾಶಗಳನ್ನು ಕಲ್ಪಿಸಿಕೊಡಬೇಕು ಎಂದು ಮನವಿ ಮಾಡಿತು.



ಹಿಂದಿನ ಬಿಜೆಪಿ ಸರ್ಕಾರದ ನಿರ್ಲಕ್ಷದಿಂದಾಗಿ ವರುಣ ವಿಧಾನಸಭಾ ಕ್ಷೇತ್ರದ ಟೌನ್ ವ್ಯಾಪ್ತಿಯಲ್ಲಿ ಕೋಟ್ಯಂತರ ರೂಪಾಯಿಗಳ ಹಲವು ಯೋಜನೆಗಳು ನೆನೆಗುದಿಗೆ ಬಿದ್ದಿದ್ದು, ಈಗಿನ ಸರ್ಕಾರದ ಮೊದಲ ವರ್ಷದಲ್ಲೇ ಅವುಗಳನ್ನು ಪೂರ್ಣಗೊಳಿಸಲು ಇರುವ ಅಡೆತಡೆಗಳನ್ನು ನಿವಾರಿಸಬೇಕು. ಕುಡಿಯುವ ನೀರಿನ ಯೋಜನೆಯನ್ನು ಶೀಘ್ರದಲ್ಲಿ ಅನುಷ್ಠಾನಗೊಳಿಸಬೇಕು. ಪಟ್ಟಣದಲ್ಲಿ ಮುಂದುವರೆದ ಅಭಿವೃದ್ಧಿ ಕಾಮಗಾರಿಗಳಿಗಾಗಿ ಹೆಚ್ಚಿನ ಅನುದಾನವನ್ನು ಕಲ್ಪಿಸಿ ಕೊಡಬೇಕು ಎಂದು ಮುಖಂಡರು ಮನವಿ ಮಾಡಿಕೊಂಡರು.

ಶಾಸಕರಾಗಿದ್ದಾಗ ಡಾ. ಯತೀಂದ್ರ ಸಿದ್ದರಾಮಯ್ಯ ಅವರು ಕ್ಷೇತ್ರದ ಅಭಿವೃದ್ಧಿ ಹಾಗೂ ಜನರ ಸಮಸ್ಯೆಗಳಿಗೆ ಸ್ಪಂದಿಸಿ ಉತ್ತಮವಾದ ಕೆಲಸವನ್ನು ಮಾಡಿದ್ದರಿಂದ ಬಿಜೆಪಿಯ ಕುತಂತ್ರ ರಾಜಕಾರಣದ ನಡುವೆಯೂ ಕಾಂಗ್ರೆಸ್ ಗೆಲ್ಲಲು ಕಾರಣಕರ್ತರಾಗಿದ್ದಾರೆ. ಹಾಗಾಗಿ ಅವರಿಗೆ ಅಭಿವೃದ್ಧಿ ಕೆಲಸ ಮಾಡಲು ಸರ್ಕಾರದಿಂದ ಸೂಕ್ತ ಸ್ಥಾನಮಾನವನ್ನು ನೀಡಬೇಕು ಎಂದು ಇದೇ ಸಂದರ್ಭದಲ್ಲಿ ಪಿ.ಸ್ವಾಮಿನಾಥ ಗೌಡ ಸಿದ್ದರಾಮಯ್ಯ ಅವರನ್ನು ಮನವಿ ಮಾಡಿಕೊಂಡರು.

ತಿ.ನರಸೀಪುರ ಮತ್ತು ವರುಣದಲ್ಲಿ ಅನೇಕ ಮಂದಿ ನಿರುದ್ಯೋಗಿ ಯುವಕರಿದ್ದು, ಅವರಿಗೆ ತಿ.ನರಸೀಪುರದ ಕೆಎಸ್ಐಸಿಯಲ್ಲಿ ಉದ್ಯೋಗವಕಾಶ ಕಲ್ಪಿಸಬೇಕು ಎಂದು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಎ.ಜೆ. ವೆಂಕಟೇಶ್, ಮನವಿ ಮಾಡಿಕೊಂಡರು

ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಪಿ.ಪುಟ್ಟರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ. ಬಸವರಾಜು, ಸಿದ್ದರಾಮಯ್ಯ ಅಭಿಮಾನಿ ಬಳಗದ ತಿರುಮಕೂಡಲು ಸಂದೇಶ್ ಸ್ವಾಮಿನಾಥ ಗೌಡ ಹಾಗೂ ಇನ್ನಿತರರು ಹಾಜರಿದ್ದರು.

ಬೈಕ್‌ಗೆ ಟಾಟಾ ಏಸ್ ಡಿಕ್ಕಿ: ಸವಾರ ಸಾವು

ಹುಣಸೂರು, ಮೇ 31– ಸ್ನೇಹಿತರಿಬ್ಬರು ಹೊಸ ಬೈಕ್‌ನಲ್ಲಿ ಹೋಗುತ್ತಿದ್ದಾಗ ಎದುರಿನಿಂದ ಬಂದ ಟಾಟಾ ಏಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಸವಾರ ಮೃತಪಟ್ಟು, ಮತ್ತೋರ್ವ ಗಾಯಗೊಂಡಿರುವ ಘಟನೆ ತಾಲೂಕಿನ ಬೋಳಿಕೆರೆ ಗ್ರಾಮದ ಬಳಿ ಇಂದು ಮಧ್ಯಾಹ್ನ ಸಂಭವಿಸಿದೆ.



ನಗರದ ಸೇತುವೆ ನಿವಾಸಿ ಹಾಗೂ ಜಿಯಾ ಚಿಕನ್ ಸೆಂಟರ್ ಮಾಲೀಕ ಜಿಯಾಉಲ್ಲಾರವರ ಮಗ ಸುಹೇಬ್ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಹಿದಾಯಿತುಲ್ಲಾರವರ ಮಗ ಜುನೇಬ್ ತೀವ್ರವಾಗಿ ಗಾಯಗೊಂಡು ಮೈಸೂರಿನ ಖಾಸಗಿ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಬುಧವಾರ ಮಧ್ಯಾಹ್ನ ಸುಹೇಬ್ ತನ್ನ ಹೊಸ ಬೈಕ್‌ನಲ್ಲಿ ಕೆ.ಅರ್. ನಗರಕ್ಕೆ ಹೋಗುವಾಗ ತಾಲೂಕಿನ ಬೋಳಿಕೆರೆ ಬಳಿ ಎದುರಿನಿಂದ ಬಂದ ಟಾಟಾ ಏಸ್ ವಾಹನ ಹೊಡೆಯಿತು. ಇದರ ಪರಿಣಾಮ ಸುಹೇಬ್‌ಗೆ ತಲೆಗೆ ತೀವ್ರವಾಗಿ ಪೆಟ್ಟು ಬಿದ್ದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಹೊಸ ಬೈಕ್ ಕೂಡ ಜಖಂಗೊಂಡಿದೆ.

ಈ ಸಂಬಂಧ ಹುಣಸೂರು ಗ್ರಾಮಾಂತರ ಪೋಲಿಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಸಹಕಾರಿ ಸಂಘಗಳಿಂದ ಉತ್ತಮ ಕೆಲಸ

ಉಮ್ಮತ್ತೂರಲ್ಲಿ ಕೃಷಿ ಪತ್ತಿನ ಸಹಕಾರಿ ಸಂಘದ ಕಟ್ಟಡಕ್ಕೆ ಶಾಸಕ ಹರೀಶ್ ಗೌಡ ಗುದ್ದಲಿ ಪೂಜೆ

ಹುಣಸೂರು, ಮೇ 31– ಸಹಕಾರಿ ಸಂಘಗಳು ಸಮಾಜದಲ್ಲಿ ಉತ್ತಮ ಕೆಲಸ ಮಾಡುತ್ತಿವೆ ಎಂದು ಶಾಸಕ ಹರೀಶ್‌ಗೌಡ ಹೇಳಿದರು.

ಸಮೀಪದ ಉಮ್ಮತ್ತೂರು ಗ್ರಾಮದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಕಟ್ಟಡಕ್ಕೆ ಗುದ್ದಲಿ ಪೂಜೆ ಸಲ್ಲಿಸಿ ಮಾತನಾಡಿ, ಸಹಕಾರಿ ರಂಗದ ಧುರೀಣ ಸಿದ್ದನಗೌಡ ಪಾಟೀಲರು ಸಹಕಾರಿ ಸಂಘಗಳನ್ನು ಹುಟ್ಟು ಹಾಕಿದರು. ಇಂದು ಸಹಕಾರಿ ಸಂಸ್ಥೆಗಳು ಸಾಲ, ವಿವಿಧ ಸವಲತ್ತು ನೀಡಿ ಉತ್ತಮ ಕೆಲಸ ಮಾಡುತ್ತಿವೆ ಎಂದರು.



ರಾಜ್ಯದಲ್ಲಿ ಶೂನ್ಯ ದರದಲ್ಲಿ ಸಾಲ ನೀಡಲಾಗುತ್ತಿದೆ. ಪ್ರತಿ ಮೂರು ವರ್ಷಕ್ಕೊಮ್ಮೆ ಸಾಲ ಹೆಚ್ಚಳಕ್ಕೆ ಕ್ರಮ ಕೈಗೊಳ್ಳಲಾಗುವುದು. ಸಹಕಾರಿ ಸಂಘವು ಉತ್ತಮ ಸಾಧನೆ ಮಾಡಲಿ ಎಂದರು.

ಗ್ರಾಮದ ಅಭಿವೃದ್ಧಿಯಲ್ಲಿ ಪಿಕೆಪಿಎಸ್‌ಗಳು ಮಹತ್ವದ ಪಾತ್ರ ವಹಿಸುತ್ತವೆ. ಸಹಕಾರ ತತ್ವದಡಿ ಸಂಘಗಳು ಉತ್ತಮ ಕಾರ್ಯ ಮಾಡುವಂತಾಗಲಿ ಎಂದರು.

ಜಿ.ಪಂ. ಮಾಜಿ ಸದಸ್ಯ ಸಿ.ಟಿ.ರಾಜಣ್ಣ, ಉದ್ಯಮಿ ಹೊಸೂರು ಅಣ್ಣಯ್ಯ, ಗ್ರಾಪಂ ಅಧ್ಯಕ್ಷ ರಾಮಕೃಷ್ಣ, ಉಪಾಧ್ಯಕ್ಷರಾದ ರಾಣಿ. ಸೊಸೈಟಿ ಅಧ್ಯಕ್ಷ ಭಾಸ್ಕರ್, ಪಿಡಿಓ ಮಹಾದೇವ್, ಮೇಲ್ವಿಚಾರಕರಾದ ಶ್ರೀನಿವಾಸ್ ಗುರುಕುಮಾರ್, ಕಾರ್ಯದರ್ಶಿ ದಯಾನಂದ್ ಹಾಗೂ ಆಡಳಿತ ಮಂಡಳಿ ಉಪಸ್ಥಿತರಿದ್ದರು.

ಯುವ ಸಮೂಹ ದುಶ್ಚಟಗಳಿಂದ ದೂರ ಇರಬೇಕು

ಹೆಚ್.ಡಿ.ಕೋಟೆ, ಮೇ 31– ಯುವಕರು ಧೂಮಪಾನ ಮತ್ತು ಮಾದಕ ವ್ಯಸನಗಳಿಗೆ ಒಳಗಾಗದಂತೆ ಪೋಷಕರು ಎಚ್ಚರಿಕೆಯಿಂದ ನೋಡಿಕೊಳ್ಳಬೇಕು ಎಂದು ಆರಕ್ಷಕ ಉಪನಿರೀಕ್ಷಕ ರಸುಲ ಪಾಗವಾಲೆ ತಿಳಿಸಿದರು.

ಪಟ್ಟಣದ ಕೃಷ್ಣಾಪುರ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಏರ್ಪಡಿಸಿದ್ದ ತಂಬಾಕು ವಿರೋಧಿ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.



ಯುವಕರು ಕಾಲೇಜು ಶಿಕ್ಷಣ ಪಡೆಯುವ ಸಂದರ್ಭದಲ್ಲಿ ಬೀಡಿ, ಸಿಗರೇಟ್ ಸೇದುವ ದುಶ್ಚಟಗಳ ಕಡೆ ಗಮನ ನೀಡುತ್ತಾರೆ, ಆಗ ಪೋಷಕರು ನಿಗಾ ವಹಿಸಿ ಅವುಗಳಿಗೆ ದಾಸರಾಗದಂತೆ ನೋಡಿಕೊಳ್ಳಬೇಕು ಎಂದರು.

ತಂಬಾಕು ಸೇವನೆಯಿಂದ ಮಾನಸಿಕ, ದೈಹಿಕ ಆರೋಗ್ಯದ ಮೇಲೆ ದುಷ್ಪಾರಿಣಾಮ ಬೀರುವುದಲ್ಲದೆ ಹೃದಯಾಘಾತ, ಕ್ಯಾನ್ಸರ್ ರೋಗಗಳಿಗೆ ತುತ್ತಾಗಬೇಕಾಗುತ್ತದೆ. ಹಾಗಾಗಿ ಇಂತಹ ದುಶ್ಚಟ ವಿರುದ್ದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯು ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮವನ್ನು ಕಾಲೇಜುಗಳಲ್ಲಿ ಹಮ್ಮಿಕೊಂಡು ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸುತ್ತಿರುವುದು ಶ್ಲಾಘನೀಯ ಎಂದರು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ತಾಲೂಕು ಯೋಜನಾಧಿಕಾರಿ ಭಾಸ್ಕರ್ ಮಾತನಾಡಿ ಮಹಿಳೆಯರು ಆರ್ಥಿಕ ಸಬಲೀಕರಣವಾಗಲು ನೀಡುವ ಸಾಲವನ್ನು ಸದುಪಯೋಗಪಡಿಸಿಕೊಂಡು ಮರುಪಾವತಿ ಮಾಡುತ್ತಿರುವುದರಲ್ಲಿ ತಾಲ್ಲೂಕು ಪ್ರಥಮ ಸ್ಥಾನದಲ್ಲಿದೆ ಎಂದರು.

ಕಾರ್ಯಕ್ರಮದಲ್ಲಿ ಪುರಸಭಾ ಸದಸ್ಯೆ ಶಾಂತಮ್ಮ, ಅಪರಾಧ ವಿಭಾಗದ ಆರಕ್ಷಕ ಉಪನಿರೀಕ್ಷಕ ಶೇಖರಪ್ಪ, ಜಿಲ್ಲಾ ಜನಜಾಗೃತಿ ಸದಸ್ಯರಾದ ಸಿ.ಎನ್.ನಾಗಣ್ಣ, ಕನ್ನಡ ಪ್ರಮೋದ, ಜೆ.ಪಿ.ಶಿವರಾಜಪ್ಪ, ಮೇಲ್ವಿಚಾರಕಿ ಪವಿತ್ರ, ಒಕ್ಕೂಟದ ಅಧ್ಯಕ್ಷೆ ನಾಗವೇಣಿ, ಸೇವಾ ಪ್ರತಿನಿಧಿ ಮಂಗಳಾ, ಶಾಲಾ ಮುಖ್ಯ ಶಿಕ್ಷಕಿ ಜಯಮ್ಮ, ಮಹಿಳಾ ಸ್ವ ಸಹಾಯ ಸಂಘದ ಸದಸ್ಯರು ಭಾಗವಹಿಸಿದ್ದರು.

ಇಂದು ಶ್ರೀ ಕಾಲಭೈರವೇಶ್ವರ ಸ್ವಾಮಿಯ ವಿಗ್ರಹ ಪ್ರತಿಷ್ಠಾಪನೆ, ವಿಮಾನ ಕಳಸ ಮಹೋತ್ಸವ

ತಿ.ನರಸೀಪುರ, ಮೇ 31– ಪಟ್ಟಣದ ಹೊಸ ತಿರುಮಕೂಡಲು ಗ್ರಾಮದಲ್ಲಿ ಜೂ.1ರ ಗುರುವಾರದಂದು) ಶ್ರೀ ಕಾಲಭೈರವೇಶ್ವರ ಸ್ವಾಮಿಯ ವಿಗ್ರಹ ಪ್ರತಿಷ್ಠಾಪನೆ ಮತ್ತು ವಿಮಾನ ಕಳಸ ಮಹೋತ್ಸವ ನಡೆಯಲಿದೆ.



ಮಹೋತ್ಸವದ ಹಿನ್ನೆಲೆಯಲ್ಲಿ ಬುಧವಾರ ಬೆಳಗ್ಗೆಯಿಂದಲೇ ಅಲಯ ಪ್ರವೇಶದೊಂದಿಗೆ ಚಿಕ್ಕ ಅರಸಿನ ಕೆರೆ ಬಸಪ್ಪ ಹಾಗೂ ಶ್ರೀ ಗಂಗಾಧರೇಶ್ವರ ಬಸಪ್ಪನ ಮೆರವಣಿಗೆ, ಧಾರ್ಮಿಕ ಉತ್ಸವಗಳು ನಡೆದಿದ್ದು, ಸಂಜೆ ಗಣಪತಿ ಪೂಜೆ ಪುಣ್ಯಾಹ, ಪಂಚಗವ್ಯ ಸಾಧನ, ದೀಕ್ಷಾ ಲಂಕಾರಾಧನೆ, ವಾಸ್ತು ಪೂಜೆ, ರಕ್ಷೋಘ್ನ ಪೂಜೆ ಹಾಗೂ ಹೋಮ ಕವನಗಳು ನಡೆದವು. ಜೂ.1ರ ಬೆಳಗ್ಗೆ ಬ್ರಾಹ್ಮಿ ಮುಹೂರ್ತದಲ್ಲಿ ರತ್ನನ್ಯಾಸ, ಯಂತ್ರ ಸ್ಥಾಪನೆ, ವಿಮಾನ ಕಳಸ ಸ್ಥಾಪನೆ, ಪ್ರಧಾನ ಹೋಮ, ಪೂರ್ಣಾಹುತಿ, ಕುಂಬಾಭಿಷೇಕ, ಮಹಾ ಮಂಗಳಾರತಿ ಮತ್ತು ಮಹಾ ನೈವೇದ್ಯ, ಮಂತ್ರಪುಷ್ಪ, ರಾಷ್ಟ್ರಾಶೀರ್ವಾದ, ತೀರ್ಥ ಪ್ರಸಾದ ವಿನಿಯೋಗ ಹಾಗೂ ಅನ್ನ ಸಂತರ್ಪಣೆ ನಡೆಯಲಿದೆ.

ಭೈರವೈಕ್ಯ ಬಾಲಗಂಗಾಧರನಾಥ ಸ್ವಾಮೀಜಿಗಳು ಹಾಗೂ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿಯವರ ದಿವ್ಯ ಆಶೀರ್ವಾದಗಳೊಂದಿಗೆ ಬೀಜಿಪುರ ಮಠದ ಜ್ಞಾನಾನಂದ ಚನ್ನರಾಜ ಅರಸ್ ಹಾಗೂ ಮೈಸೂರು ಶಾಖಾ ಮಠದ ಸೋಮನಾಥ ಸ್ವಾಮೀಜಿಗಳ ದಿವ್ಯ ಸಮ್ಮುಖದಲ್ಲಿ ಪ್ರತಿಷ್ಠಾಪನ ಮಹೋತ್ಸವವನ್ನು ಹಮ್ಮಿಕೊಳ್ಳಲಾಗಿದ್ದು, ಸಾರ್ವಜನಿಕರು ಭಾಗವಹಿಸಿ ದೇವರ ಕೃಪೆಗೆ ಪಾತ್ರರಾಗಬೇಕು ಎಂದು ಅರ್ಚಕ ಸೋಮಣ್ಣ ಪ್ರಕಟಣೆಯಲ್ಲಿ ಕೋರಿದ್ದಾರೆ.

ಸಿಹಿ ವಿತರಿಸಿ ವಿದ್ಯಾರ್ಥಿಗಳಿಗೆ ಸ್ವಾಗತ



ಭೇರ್ಯ, ಮೇ 31– ಬೇಸಿಗೆ ರಜೆಯ ಬಳಿಕ ಸೋಮವಾರದಿಂದ ಸರ್ಕಾರಿ ಶಾಲೆಗಳು ಪುನರಾರಂಭಗೊಂಡವು. ಉತ್ಸಾಹದಿಂದ ಮಕ್ಕಳು ಶಾಲೆಗೆ ಆಗಮಿಸಿದರು.

ಭೇರ್ಯ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾಡಳಿತ ಮತ್ತು ಶಿಕ್ಷಕ ವೃಂದದವರು ವಿದ್ಯಾರ್ಥಿಗಳನ್ನು ಗುಲಾಬಿ ಹೂವುಗಳನ್ನು ನೀಡುವುದರ ಜತೆಗೆ ಮಕ್ಕಳ ಮೇಲೆ ಹೂ ಚೆಲ್ಲಿ ಸ್ವಾಗತಿಸಿ ನಂತರ ಮಕ್ಕಳಿಗೆ ಸಿಹಿ ಹಂಚಿ ಪ್ರೀತಿಯಿಂದ ಬರಮಾಡಿಕೊಂಡರು.

ತಳಿರು–ತೋರಣ, ಹಸಿರೆಲೆಗಳಿಂದ ಶಾಲೆಗಳನ್ನು ಸಿಂಗರಿಸಲಾಗಿತ್ತು. ಇದಕ್ಕೂ ಎರಡು ದಿನ ಮೊದಲು ಶಾಲೆಯ ಆವರಣ, ಅಡುಗೆ ಮನೆ, ಕೊಠಡಿಯಲ್ಲಿ ಸ್ವಚ್ಛಗೊಳಿಸಿ ಶಾಲೆಯ ಮುಂಬಾಗ ರಂಗೋಲಿಯ ಚಿತ್ತಾರ ಬಿಡಿಸಲಾಗಿತ್ತು.

2023–24ನೇ ಶೈಕ್ಷಣಿಕ ವರ್ಷದಲ್ಲಿ ಸಂಭ್ರಮ, ಸಡಗರದಿಂದ ಶಾಲೆ ಆರಂಭವಾಗಿದ್ದು, ಸರ್ಕಾರದ ಸುತ್ತೋಲೆಯಂತೆ ಮುಂಜಾಗ್ರತಾ ಕ್ರಮಗಳನ್ನು ವಹಿಸುವುದರ ಜತೆಗೆ ಇದರೊಟ್ಟಿಗೆ ಮಧ್ಯಾಹ್ನದ ಬಿಸಿಯೂಟ ಕೂಡ ಪ್ರಾರಂಭ ಆಗಿದೆ ಎಂದು ಶಾಲೆಯ ಮುಖ್ಯ ಶಿಕ್ಷಕ ಶಿವಪ್ಪನಾಯಕ ತಿಳಿಸಿದರು.

ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ರೇವಣ್ಣ, ಪೋಷಕ ಬ್ಯಾಟಪ್ಪ, ದೈಹಿಕ ಶಿಕ್ಷಕಿ ಪುಷ್ಪಲತಾ, ಸಹ ಶಿಕ್ಷಕರಾದ ಕುಮಾರಸ್ವಾಮಿ, ಮಾನಸ, ವಿಜಯಕುಮಾರಿ, ವನಿತಾ ಬಾಯಿ, ನೀಲಮ್ಮ, ಇದ್ದರು.

ದೇಶದಲ್ಲಿ 27 ಕೋಟಿ ಜನರಿಂದ ತಂಬಾಕು ಸೇವನೆ

ಸರಗೂರು, ಮೇ 31– ಇತ್ತೀಚಿಗೆ ಯುವಕರೇ ಹೆಚ್ಚಾಗಿ ತಂಬಾಕು ಉತ್ಪನ್ನಗಳನ್ನು ಸೇವಿಸುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದು ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರಾದ ಕೆ.ಜಿ. ಸತೀಶ್ ವಿಷಾದ ವ್ಯಕ್ತಪಡಿಸಿದರು.

ಸಮೀಪದ ತುಂಬಸೋಗೆ ಗ್ರಾಮದ ಅಂಬೇಡ್ಕರ್ ಸಮುದಾಯ ಭವನದಲ್ಲಿ ಬುಧವಾರ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಜೈಭೀಮ್ ಕಟ್ಟಡ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘ, ಎಂಎಂಕೆ ಪದವಿ ಪೂರ್ವ ಶಿಕ್ಷಣ ಸಂಸ್ಥೆ ಜಂಟಿಯಾಗಿ ಆಯೋಜಿಸಿದ್ದ 'ಅಂತರಾಷ್ಟ್ರೀಯ ಕಾರ್ಮಿಕರ ದಿನ ಮತ್ತು ವಿಶ್ವ ತಂಬಾಕು ನಿಷೇಧ ದಿನ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ತಂಬಾಕು ಸೇವನೆಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲಿದೆ. ಭಾರತದಲ್ಲಿ 27 ಕೋಟಿ ಜನ ತಂಬಾಕು ಉತ್ಪನ್ನಗಳನ್ನು ಸೇವಿಸುತ್ತಿದ್ದಾರೆ. ಅದರಲ್ಲೂ ಯುವಕರೇ ಹೆಚ್ಚಾಗಿ ತಂಬಾಕು ಸೇವನೆ ಮಾಡುತ್ತಿರುವುದು ಆತಂಕದ ವಿಚಾರ. ಸಾರ್ವಜನಿಕರ ಸ್ಥಳಗಳಲ್ಲಿ ತಂಬಾಕು ಸೇವನೆ ಅಪರಾಧವಾಗಿದ್ದು, ದಂಡವನ್ನೂ ವಿಧಿಸಲಾಗುವುದು. ಹೀಗಾಗಿ ಯುವಕರು ತಂಬಾಕು ಉತ್ಪನ್ನಗಳ ಸೇವನೆಯಿಂದ ದೂರವಿರಬೇಕು ಎಂದು ಮನವರಿಕೆ ಮಾಡಿಕೊಟ್ಟರು.

ಸರಗೂರಿನ ಸೋಮೇಶ್ವರ ಕಟ್ಟಡ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಎಸ್. ಎಚ್.ರಮೇಶ್ ಮಾತನಾಡಿ, ರಾಜ್ಯದಲ್ಲಿ ನಿಜವಾದ ಕಟ್ಟಡ ಕಾರ್ಮಿಕರಿಗಿಂತ ಆರ್ಥಿಕವಾಗಿ ಸಬಲರಾಗಿರುವವರು ನಕಲಿ ದಾಖಲೆ ಸೃಷ್ಟಿಸಿ ಕಾರ್ಡ್ ಪಡೆದಿದ್ದಾರೆ. ಇದರಿಂದ ಫಲಾನುಭವಿಗಳಿಗೆ ಅನ್ಯಾಯವಾಗಿದೆ. ಶ್ರಮ ಸಾಮರ್ಥ್ಯ ಕಿಟ್‌ನಲ್ಲಿಯೂ ಅನ್ಯಾಯವಾಗಿದೆ ಎಂದು ದೂರಿದರು.

ಮೈಸೂರು ಉಪ ವಿಭಾಗದ ಕಾರ್ಮಿಕ ಅಧಿಕಾರಿ ಕೆ.ರಾಜೇಶ್, ಕಾರ್ಮಿಕರಿಗೆ ಸರಕಾರದಿಂದ ಸಿಗುವ ಸೇವಾಸೌಲಭ್ಯಗಳ ಬಗ್ಗೆ ತಿಳಿಸಿಕೊಟ್ಟರು. ವಕೀಲೆ ನಾಗಶ್ರೀ ವಿಶ್ವ ತಂಬಾಕು ನಿಷೇಧದ ಬಗ್ಗೆ ಮಾತನಾಡಿದರು. ಜೈಭೀಮ್ ಕಟ್ಟಡ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಶಿವಣ್ಣ, ವಕೀಲರ ಸಂಘದ ತಾಲೂಕು ಅಧ್ಯಕ್ಷ ರವಿಕುಮಾರ್, ಕಾರ್ಯದರ್ಶಿ ಎಚ್.ಎಸ್.ದಿನೇಶ್, ಕಾಲೇಜು ಪ್ರಾಂಶುಪಾಲ ಎಸ್.ಪಿ.ಪ್ರಕಾಶ್, ಪಿಎಸ್ಐ ಸುಬ್ರಹ್ಮಣ್ಯ, ಎಎಸ್ಐ ಲಿಂಗರಾಜು, ಸಂಘದ ಗೌರವಾಧ್ಯಕ್ಷ ಶಿವಣ್ಣ, ಪ್ರಧಾನ ಕಾರ್ಯದರ್ಶಿ ಶಿವಲಿಂಗಯ್ಯ, ಸರಗೂರು ರಮೇಶ್, ಉಪಾಧ್ಯಕ್ಷ ಶಿವಣ್ಣ, ಖಜಾಂಚಿ ಮಂಜುನಾಥ್, ಸದಸ್ಯರಾದ ಬಿ.ನಾಗಣ್ಣ, ಶಿವು, ರಾಜೇಶ್, ಶಿವಕುಮಾರ್ ಸೇರಿದಂತೆ ಕಾಲೇಜು ಮಕ್ಕಳು ಇನ್ನಿತರರು ಹಾಜರಿದ್ದರು.



ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶ್ರಮಿಸುವೆ: ಶಾಸಕ ದರ್ಶನ್ ಧ್ರುವನಾರಾಯಣ್



ಮಲ್ಕುಂಡಿ, ಮೇ 31– ನನ್ನ ತಂದೆ ಆರ್. ಧ್ರುವನಾರಾಯಣ್ ಅವರು ಕನಸು ಕಂಡಂತೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದ್ದಾರೆ.

ನಂಜನಗೂಡು ತಾಲೂಕಿನ ಶಿರಮಳ್ಳಿ ಗ್ರಾಪಂ ವ್ಯಾಪ್ತಿಯ ಬೆಳಲೆ, ಹುಸ್ಕೂರು ಗ್ರಾಮಗಳಲ್ಲಿ ಮತದಾರರಿಗೆ ಕೃತಜ್ಞತೆ ಸಲ್ಲಿಸಿ ಮಾತನಾಡಿದ ಅವರು, ಬಿಜೆಪಿ ಸರ್ಕಾರದ ದುರಾಡಳಿತದಿಂದ ಬೇಸತ್ತು ರಾಜ್ಯದ ಜನತೆ ಈ ಬಾರಿ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡಿದ್ದಾರೆ. ಅದಕ್ಕೆ ಎಲ್ಲರಿಗೂ ನನ್ನ ಧನ್ಯವಾದಗಳನ್ನು ಸಲ್ಲಿಸುತ್ತೇನೆ ಎಂದರು.

ಚುನಾವಣೆಗೂ ಮುನ್ನ ನೀಡಿದ 5 ಗ್ಯಾರಂಟಿಗಳನ್ನು ತಕ್ಷಣವೇ ಸರ್ಕಾರ ಜಾರಿ ಮಾಡಲಿದೆ. ಕಾಂಗ್ರೆಸ್ ಪಕ್ಷ ಕೊಟ್ಟ ಮಾತಿಗೆ ಎಂದು ತಪ್ಪಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ನುಡಿದಂತೆ ನಡೆಯುತ್ತಾರೆ ಎಂದು ಹೇಳಿದರು.

ನನ್ನ ತಂದೆ ಆರ್.ಧ್ರುವನಾರಾಯಣ್ ಅವರು ಹಿಂದೆ ಸಂಸದರಾಗಿದ್ದಾಗ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿದ್ದರು. ಅದೇ ರೀತಿ ನಾನು ಅವರ ಹಾದಿಯಲ್ಲೇ ಸಾಗಿ ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸುತ್ತೇನೆ ನಾನು ನಿಮ್ಮ ಮಗನಂತೆ ಕೆಲಸ ಮಾಡುತ್ತೇನೆ ಎಂದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷ ಕೆ.ಮಾರುತಿ, ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಶ್ರೀಕಂಠ ನಾಯಕ, ಗ್ರಾಪಂ ಅಧ್ಯಕ್ಷ ಮಹದೇವಶೆಟ್ಟಿ, ಕಾಂಗ್ರೆಸ್ ಯುವ ಘಟಕ ಅಧ್ಯಕ್ಷ ಆಶೋಕ್, ಮುಖಂಡರುಗಳಾದ ಗೋವಿಂದರಾಜು, ಬಸವಣ್ಣ, ಅಭಿನಂದ್ ಪಟೇಲ್, ಜಯ ಕರ್ನಾಟಕದ ಹೋಬಳಿ ಅಧ್ಯಕ್ಷ ಜವರನಾಯಕ, ಸೇರಿದಂತೆ ಪ್ರಮುಖರು ಹಾಜರಿದ್ದರು.

ಸುತ್ತೂರು ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಹೂ ನೀಡಿ ಸ್ವಾಗತ

ಸುತ್ತೂರು, ಮೇ 31– ಬೇಸಿಗೆ ರಜೆ ಕಳೆದು ಇಂದಿನಿಂದ ಶಾಲೆಗಳು ಆರಂಭಗೊಂಡಿದ್ದು, ನಂಜನಗೂಡು ತಾಲೂಕಿನ ಸುತ್ತೂರು ಗ್ರಾಮದಲ್ಲಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳನ್ನು, ಶಾಲೆಯ ಶಿಕ್ಷಕರು ಬ್ಯಾಂಡ್‌ಸೆಟ್ ವಾದನಗಳೊಂದಿಗೆ ಸ್ವಾಗತ ಕೋರಿ ಹೂ ನೀಡಿ ಶಾಲೆಗೆ ಬರಮಾಡಿಕೊಂಡರು.

ಇದೇ ಸಂದರ್ಭದಲ್ಲಿ ಸಿಆರ್‌ಪಿ ಉಮ್ಮೆ ಅಸ್ಮ, ಮುಖ್ಯಶಿಕ್ಷಕರಾದ ನಾಗರಾಜು, ಎಸ್.ಡಿ.ಎಂ.ಸಿ. ಅಧ್ಯಕ್ಷೆ ಪಾರ್ವತಿ, ಉಪಾಧ್ಯಕ್ಷ ರವಿಕುಮಾರ್, ಮಕ್ಕಳ ಪೋಷಕರು, ವಿದ್ಯಾರ್ಥಿಗಳು, ಗ್ರಾಮಸ್ಥರು, ಹಾಜರಿದ್ದರು.

ನಿವೃತ್ತ ಶಿಕ್ಷಕ ಮಾದನಾಯಕ ನಿಧನ



ಸರಗೂರು, ಮೇ 31– ಪಟ್ಟಣದ 9ನೇ ವಾರ್ಡ್ ನಿವಾಸಿ ನಿವೃತ್ತ ಶಿಕ್ಷಕ ಮಾದನಾಯಕ (82) ಬುಧವಾರ ನಿಧನರಾಗಿದ್ದಾರೆ. ಮೃತರು ಓರ್ವ ಪುತ್ರ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಪಟ್ಟಣದ ನಾಯಕ ಸಮಾಜದ ರುದ್ರಭೂಮಿಯಲ್ಲಿ ಜೂ.1 (ಗುರುವಾರ) ರಂದು ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು–ಮ.ಬೆಟ್ಟ ಹೆದ್ದಾರಿಯಲ್ಲಿ ಅಪಘಾತ ನಿಯಂತ್ರಣಕ್ಕೆ ಕ್ರಮ

10 ಮಂದಿ ಬಲಿ ಪಡೆದ ಸ್ಥಳಕ್ಕೆ ಪ್ರಾದೇಶಿಕ ಸಾರಿಗೆ ದಕ್ಷಿಣ ವಲಯದ ಆಯುಕ್ತ ಮಲ್ಲಿಕಾರ್ಜುನ್ ಭೇಟಿ



ತಿ.ನರಸೀಪುರ, ಮೇ 31– ಮೈಸೂರಿನಿಂದ ತಿ.ನರಸೀಪುರ ಮಾರ್ಗವಾಗಿ ಕೊಳ್ಳೇಗಾಲಕ್ಕೆ ಮತ್ತು ಚಾಮರಾಜನಗರ. ಮಲೆ ಮಹದೇಶ್ವರಬೆಟ್ಟ ಹೋಗುವ ರಾಷ್ಟ್ರೀಯ ಹೆದ್ದಾರಿ 212 ರಲ್ಲಿ ಅಪಘಾತ ವಲಯಗಳನ್ನು ಗುರುತಿಸಿ ನಿಯಂತ್ರಣದ ಪರಿಹಾರೋಪಾಯಗಳನ್ನು ಕಂಡುಕೊಂಡು ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು ಎಂದು ಪ್ರಾದೇಶಿಕ ಸಾರಿಗೆ ದಕ್ಷಿಣ ವಲಯದ ಆಯುಕ್ತ ಮಲ್ಲಿಕಾರ್ಜುನ್ ತಿಳಿಸಿದರು.

ತಾಲೂಕಿನ ಕುರುಬೂರು ಬಳಿ ಸೋಮವಾರ ನಡೆದ ಭೀಕರ ಅಪಘಾತದಲ್ಲಿ 10 ಮಂದಿ ಬಲಿಪಡೆದ ಘಟನೆಯ ಹಿನ್ನೆಲೆಯಲ್ಲಿ ಬುಧವಾರ ಸಾರಿಗೆ ಹಾಗೂ ಪೊಲೀಸ್ ಅಧಿಕಾರಿಗಳೊಂದಿಗೆ ಅಪಘಾತ ಸ್ಥಳ ಪರಿಶೀಲಿಸಿದ ಬಳಿಕ ಮಾತನಾಡಿದರು.

ಸೋಮವಾರ ನಡೆದ ಅಪಘಾತದಲ್ಲಿ 10 ಮಂದಿ ಮೃತಪಟ್ಟಿರುವುದು ಬಹಳ ದುರ್ದೈವದ ಸಂಗತಿ. ವಾಹನ ಚಾಲಕರ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣ ಎಂಬುದು ಮೇಲ್ನೋಟಕ್ಕೆ ತಿಳಿಯುತ್ತದೆ. ಈ ರಸ್ತೆಯಲ್ಲಿ ಅಲ್ಲಲ್ಲಿ, ಆಗಾಗ್ಗೆ ಅಪಘಾತ ನಡೆಯುತ್ತಿರುವ ಬಗ್ಗೆ ಮಾಹಿತಿ ಇದೆ. ಈ ಹಿನ್ನೆಲೆಯಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಸೂಚನೆ ಮೇರೆಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಅಧಿಕಾರಿಗಳ ಸಭೆ ನಡೆಸಿ ಅಪಘಾತ ನಿಯಂತ್ರಣಕ್ಕೆ ಪೂರಕ ಕ್ರಮ ತೆಗೆದುಕೊಳ್ಳಲಾಗುವುದು. ರಸ್ತೆಗಳಲ್ಲಿ ಡಂಬ್ಲರ್ಸ್ ಅಳವಡಿಕೆ, ರಸ್ತೆ, ಅಗಲೀಕರಣ ಹಾಗೂ ಗಿಡಗಂಟಿಗಳ ತೆರವು ಸೇರಿದಂತೆ ಇತರೆ ಮಾರ್ಗೋಪಾಯಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಕೈಗೊಂಡ ಮಾಹಿತಿಯನ್ನು ಕೇಂದ್ರ ಕಚೇರಿ ಹಾಗೂ ಸರ್ಕಾರಕ್ಕೆ ರವಾನಿಸಲಾಗುವುದು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಅರಣ್ಯ ಹಾಗೂ ಸಾರಿಗೆ ಸ್ಥಳೀಯ ಅಧಿಕಾರಿಗಳ ಜತೆ ಚರ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತದೆ. ಪ್ರತಿ ಜಿಲ್ಲೆಯಲ್ಲೂ ಜಿಲ್ಲಾ ರಸ್ತೆ ಸುರಕ್ಷಾ ಸಮಿತಿ ರಚಿಸಲಾಗಿದ್ದು ಸಮಿತಿಗಳ ಸಭೆ ಕರೆದು ಅಪಘಾತ ನಿಯಂತ್ರಣದ ಬಗ್ಗೆ ಚರ್ಚಿಸಲಾಗುವುದು ಎಂದು ತಿಳಿಸಿದರು.

ಅಪಘಾತಕ್ಕೀಡಾಗಿದ್ದ ಖಾಸಗಿ ಬಸ್ ಹಾಗೂ ಇನೋವಾ ಕಾರನ್ನು ಮೂಗೂರಿನ ಪೊಲೀಸ್ ಠಾಣೆಯ ಬಳಿ ಪರಿಶೀಲಿಸಿದರು.

ಜಿಲ್ಲಾ ಸಾರಿಗೆ ಆಯುಕ್ತ ಡಾ.ಸಿ.ಟಿ. ಮೂರ್ತಿ, ಮೈಸೂರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಾದ ದೀಪಕ್, ಭೀಮನಗೌಡ ಪಾಟೀಲ್, ಚಾಮರಾಜನಗರದ ಆರ್‌ಟಿಓ ಲತಾಮಣಿ, ಮೈಸೂರು ಜಿಲ್ಲಾ ಖಾಸಗಿ ಬಸ್ ಮಾಲೀಕರ ಸಂಘದ ಗೌರವ ಕಾರ್ಯದರ್ಶಿ ಹಾಗೂ ಮಹದೇಶ್ವರ ಬಸ್ ಮಾಲೀಕ ಕೆ. ವಜ್ರೇಗೌಡ, ಪಟ್ಟಣ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಮಹೇಶ್ ಹಾಜರಿದ್ದರು.

ಮತದಾರರ ಪಟ್ಟಿ ಪರಿಷ್ಕರಣೆಗೆ ಚುನಾವಣಾ ಆಯೋಗದಿಂದ ವೇಳಾಪಟ್ಟಿ ನಿಗದಿ

ಇಂದಿನಿಂದ ಪರಿಷ್ಕರಣೆ ಪೂರ್ವ ಕಾರ್ಯಕ್ರಮ ಆರಂಭ

ಅರ್ಹತಾ ದಿನಾಂಕ 2024ರ ಜ.1ರನ್ವಯ ಪರಿಷ್ಕರಣೆ ಪ್ರಕ್ರಿಯೆ; 2024ರ ಜ.5ರಂದು ಅಂತಿಮ ಮತದಾರರ ಪಟ್ಟಿ ಪ್ರಕಟ



ಮೈಸೂರು,ಮೇ 31(ಪಿಎಂ)– ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳ ಮತದಾರರ ಪಟ್ಟಿಗಳನ್ನು ಅರ್ಹತಾ ದಿನಾಂಕ 2024ರ ಜ.1ರನ್ವಯ ಪರಿಷ್ಕರಿಸಲು ಭಾರತ ಚುನಾವಣಾ ಆಯೋಗ ವೇಳಾಪಟ್ಟಿ ನಿಗದಿಪಡಿಸಿದೆ. ಜೂ.1ರಿಂದ ಪರಿಷ್ಕರಣೆ ಪೂರ್ವ ಕಾರ್ಯಕ್ರಮಗಳು ಆರಂಭವಾಗಲಿವೆ ಎಂದು ಜಿಲ್ಲಾಧಿಕಾರಿಗಳೂ ಆದ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.

ಜೂ.1ರಿಂದ ಜು.20ರವರೆಗೆ ಇಆರ್‌ಓ, ಎಇಆರ್‌ಓ ಮತ್ತು ಬಿಎಲ್‌ಓ ಅಧಿಕಾರಿಗಳು ಸೇರಿದಂತೆ ಇನ್ನಿತರ ಅಧಿಕಾರಿ ಮತ್ತು ಸಿಬ್ಬಂದಿಗೆ ತರಬೇತಿಗಳು ನಡೆಯಲಿವೆ. ಜು.21ರಿಂದ ಆ.21ರವರೆಗೆ ಮತದಾರರ ಪಟ್ಟಿ ಸುಧಾರಣೆ ಸಂಬಂಧ ಮತಗಟ್ಟೆ ಮಟ್ಟದ ಅಧಿಕಾರಿಗಳು ಮನೆ, ಮನೆಗೆ ಭೇಟಿ ನೀಡಿ, ಪರಿಶೀಲನೆ ನಡೆಸಲಿದ್ದಾರೆ.

ಆ.22ರಿಂದ ಸೆ.29ರವರೆಗೆ ಪರಿಷ್ಕರಣೆ ಪೂರ್ವದ ವಿವಿಧ ಚಟುವಟಿಕೆಗಳು ನಡೆಯಲಿವೆ. ಮತಗಟ್ಟೆಗಳ ರ್‍ಯಾಷನಲೈಜೇಷನ್, ಮರು ವ್ಯವಸ್ಥೆಗೊಳಿಸುವ ಪ್ರಕ್ರಿಯೆ, ದೋಷ ಮುಕ್ತ ಪಟ್ಟಿ ಸಿದ್ಧಪಡಿಸುವುದು, ಪಟ್ಟಿಯಲ್ಲಿ ಮತದಾರರ ಭಾವಚಿತ್ರದ ಗುಣಮಟ್ಟ ಪರಿಶೀಲಿಸಿ ದೋಷ ನಿವಾರಣೆ ಪ್ರಕ್ರಿಯೆ, ಅವಶ್ಯವಿರುವ ಮತಗಟ್ಟೆಗಳ ವಿಭಾಗಗಳು, ಭಾಗಗಳ ಮರುಸ್ಥಾಪನೆ, ಮತಗಟ್ಟೆಗಳ ಸ್ಥಳಗಳು, ಮತಗಟ್ಟೆಗಳ ಪಟ್ಟಿಗೆ ಅನುಮೋದನೆ ಪಡೆಯುವ ಪ್ರಕ್ರಿಯೆ ಹಾಗೂ ಕಂಟ್ರೋಲ್ ಟೇಬಲ್ ಅನ್ನು ಕಾಲೋಚಿತಗೊಳಿಸುವ ಪ್ರಕ್ರಿಯೆ ಈ ಅವಧಿಯಲ್ಲಿ ನಡೆಯಲಿವೆ.

ಪರಿಷ್ಕರಣೆಯ ನಮೂನೆಗಳು

ಸೇರ್ಪಡೆಗೆ ನಮೂನೆ–6, ಅನಿವಾಸಿ ಭಾರತೀಯರು ನೋಂದಾಯಿಸಿಕೊಳ್ಳಲು ನಮೂನೆ–6ಎ, ಮತದಾರರ ಪಟ್ಟಿಯೊಂದಿಗೆ ಆಧಾರ್ ಜೋಡಣೆಗೆ ನಮೂನೆ–6ಬಿ, ಮರಣ, ಸ್ಥಳಾಂತರ, ಪುನರಾವರ್ತನೆ ಹೆಸರು ಕೈಬಿಡಲು ನಮೂನೆ–7ರಡಿ ಅವಕಾಶವಿದೆ. ಅಂತೆಯೇ ಮತದಾರರ ಹೆಸರು, ವಿಳಾಸ, ಭಾವಚಿತ್ರಗಳಿಗೆ ಸಂಬಂಧಿಸಿದಂತೆ ತಿದ್ದುಪಡಿ, ಒಂದು ವಿಧಾನಸಭಾ ಕ್ಷೇತ್ರದಿಂದ ಬೇರೆ ವಿಧಾನಸಭಾ ಕ್ಷೇತ್ರಕ್ಕೆ ವರ್ಗಾವಣೆ, ಒಂದು ವಿಧಾನಸಭಾ ಕ್ಷೇತ್ರದಲ್ಲಿ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ವರ್ಗಾವಣೆ, ಬದಲಿ ಎಪಿಕ್‌ಗೆ ಮನವಿ ಸಲ್ಲಿಸಲು ಹಾಗೂ ಮತದಾರರು ತಮ್ಮ ಅಂಗವೈಕಲ್ಯ ದಾಖಲಿಸಲು ನಮೂನೆ–8ರಡಿ ಅವಕಾಶ ಕಲ್ಪಿಸಲಾಗಿದೆ.

ಸೆ.30ರಿಂದ ಅ.16ರವರೆಗೆ 1ರಿಂದ 8ರವರೆಗಿನ ನಮೂನೆ ತಯಾರಿಸುವ ಪ್ರಕ್ರಿಯೆ ಹಾಗೂ ಅರ್ಹತಾ ದಿನಾಂಕ 2024ರ ಜ.1ರನ್ವಯ ಪೂರಕ ಮತ್ತು ಕರಡು ಮತದಾರರ ಪಟ್ಟಿ ತಯಾರಿಸುವ ಪ್ರಕ್ರಿಯೆ ನಡೆಯಲಿವೆ. ಅ.17ರಿಂದ ಪರಿಷ್ಕರಣೆ ಕಾರ್ಯಕ್ರಮಗಳು ಆರಂಭವಾಗಲಿದ್ದು, ಅಂದು ಕರಡು ಮತದಾರರ ಪಟ್ಟಿ ಪ್ರಕಟಿಸಲಾಗುವುದು. ಅ.17ರಿಂದ ನ.30ರವರೆಗೆ ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಅವಕಾಶವಿದ್ದು, ಇದೇ ಅವಧಿಯಲ್ಲಿ ಹಕ್ಕು, ಆಕ್ಷೇಪಣೆಗಳನ್ನು ಸಲ್ಲಿಸಲು 2 ಶನಿವಾರ ಮತ್ತು 2 ಭಾನುವಾರ ವಿಶೇಷ ಅಭಿಯಾನ ನಡೆಯಲಿವೆ.

ಡಿ.26ರೊಳಗೆ ಹಕ್ಕು ಮತ್ತು ಆಕ್ಷೇಪಣೆಗಳ ವಿಲೇವಾರಿ ಪ್ರಕ್ರಿಯೆ ನಡೆಯಲಿದೆ. ಬಳಿಕ 2024ರ ಜ.1ರೊಳಗಾಗಿ ಅಂತಿಮ ಮತದಾರರ ಪಟ್ಟಿಯ ಗುಣಮಟ್ಟ ಪರಿಶೀಲನೆ ಹಾಗೂ ಪ್ರಕಟಣೆಗೆ ಆಯೋಗದಿಂದ ಅನುಮತಿ ಪಡೆಯಲಾಗುವುದು. ಜೊತೆಗೆ ಡಾಟಬೇಸ್ ಅನ್ನು ಕಾಲೋಚಿತಗೊಳಿಸುವ ಮತ್ತು ಸಪ್ಲಿಮೆಂಟರಿ ಪಟ್ಟಿಗಳ ಮುದ್ರಣ ಪ್ರಕ್ರಿಯೆ ನಡೆಯಲಿವೆ. 2024ರ ಜ.5ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಗೊಳ್ಳಲಿದೆ.

ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಆದ್ಯತೆ: ಅರ್ಹತಾ ದಿನಾಂಕ 2024ರ ಜ.1ರಂದು 18 ವರ್ಷ ಪೂರೈಸುವ ಹಾಗೂ ಮತದಾರರ ಪಟ್ಟಿಗಳಲ್ಲಿ ಈವರೆಗೂ ಹೆಸರನ್ನು ನೋಂದಾಯಿಸದೆ ಇರುವ ಅರ್ಹ ಮತದಾರರ ಹೆಸರುಗಳನ್ನು ಸೇರಿಸಲು ಪರಿಷ್ಕರಣೆಯ ವೇಳಾಪಟ್ಟಿಯನ್ವಯ ಅರ್ಜಿಗಳನ್ನು ಆನ್‌ಲೈನ್ ಮೂಲಕ (Voter Helpline Application, NVSP Website) ಇಲ್ಲವೇ ಸಂಬಂಧಿಸಿದ ಮತಗಟ್ಟೆಗಳಲ್ಲಿ ಸಲ್ಲಿಸಬಹುದು. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಹೆಚ್ಚಿನ ಆದ್ಯತೆ ಇದೆ.

ಈ ಸಂಬಂಧ ಯಾವುದೇ ಮಾಹಿತಿಗಾಗಿ ಸಂಬಂಧಿಸಿದ ಮತಗಟ್ಟೆ ಮಟ್ಟದ ಅಧಿಕಾರಿಗಳು ಅಥವಾ ಮತದಾರರ ನೋಂದಣಿ ಅಧಿಕಾರಿ, ಮೈಸೂರು ಮಹಾನಗರ ಪಾಲಿಕೆ ಆಯುಕ್ತರು, ಮೈಸೂರು ಮತ್ತು ಹುಣಸೂರು ಉಪವಿಭಾಗಾಧಿಕಾರಿಗಳು ಹಾಗೂ ಸಹಾಯಕ ಮತದಾರರ ನೋಂದಣಾಧಿಕಾರಿಗಳಾದ ಜಿಲ್ಲೆಯ ಎಲ್ಲಾ ತಾಲೂಕು ತಹಶೀಲ್ದಾರ್ ಕಚೇರಿಗಳಲ್ಲಿ ಮಾಹಿತಿ ಪಡೆಯಬಹುದು.

ಮತದಾರರ ಪಟ್ಟಿಗೆ ನೋಂದಾಯಿಸಲು ಅರ್ಹತಾ ದಿನಾಂಕವಾದ 'ಜನವರಿ 1'ರವರೆಗೆ ಕಾಯಬೇಕಿಲ್ಲ. ಇದರ ಜೊತೆಗೆ ಏಪ್ರಿಲ್ 1, ಜುಲೈ 1 ಮತ್ತು ಅಕ್ಟೋಬರ್ 1ರ ದಿನಾಂಕಗಳಂದು ಹೆಸರು ಸೇರ್ಪಡೆಗೆ ಅವಕಾಶ ಕಲ್ಪಿಸಲಾಗಿದೆ. 17 ವರ್ಷ ಮೇಲ್ಪಟ್ಟ ವಯಸ್ಸಿನವರು ಮುಂಗಡವಾಗಿ ಅರ್ಜಿ ಸಲ್ಲಿಸಬಹುದು. ಮತದಾರರ ಪಟ್ಟಿಯಲ್ಲಿ ಹೆಸರು, ಇನ್ನಿತರ ತಿದ್ದುಪಡಿಗಳಿಗೆ ಹೊಸ ನಮೂನೆ 8ರ ಸೌಲಭ್ಯ ಕಲ್ಪಿಸಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.



ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರನ್ನು ಬೆಂಗಳೂರಲ್ಲಿ ಅಭಿನಂದಿಸಲಾಯಿತು. ಈ ವೇಳೆ ವಿಧಾನಪರಿಷತ್ ಮಾಜಿ ಸದಸ್ಯ ಎಂ.ಸಿ.ವೇಣುಗೋಪಾಲ್, ಪುಲಕೇಶಿನಗರದ ಶಾಸಕ ಶ್ರೀನಿವಾಸ್, ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್, ಮೈಸೂರು ನಗರ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್, ಪ್ರಧಾನ ಕಾರ್ಯದರ್ಶಿ ಎಸ್.ಯೋಗೀಶ ಉಪ್ಪಾರ, ಉಪಾಧ್ಯಕ್ಷ ರವಿನಂದನ್, ರಾಜ್ಯ ಒಬಿಸಿ ಕಾರ್ಯದರ್ಶಿ ಪ್ರಕಾಶ್ ಇದ್ದರು.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ನನ್ನ ಕಕ್ಷಿದಾರರು ಈ ಕೆಳಗಿನ ಷೆಡ್ಯೂಲಿನಲ್ಲಿ ನಮೂದಿಸಿರುವ ಸ್ವತ್ತನ್ನು ಆದರೆ ಮಾಲೀಕರಾದ ಮೈಸೂರು ಸಿಟಿ, ವಿಜಯನಗರ, 1 ನೇ ಹಂತ, 6ನೇ ಮುಖ್ಯ ರಸ್ತೆ, ಮನೆ ನಂಬರ್ 434 ರಲ್ಲಿ ವಾಸವಾಗಿರುವ ಲೇ. ಬಿ. ತಿಮ್ಮಯ್ಯಚಾರ್ ರವರ ಮಗ ಸುಮಾರು 74 ವರ್ಷ ವಯಸ್ಸಿನ. ಡಾ|| ಬಿ. ಎನ್ ಆಚಾರ್ ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಸದರಿ ಷೆಡ್ಯೂಲ್ ಸ್ವತ್ತು, ಅವರಿಗೆ ಲೇ. ಯು.ಕೆ ಸುಬ್ಬರಾಯಚಾರ್ ಬಿನ್ ಲೇ ಉಡುಪಿ: ಕಾಳಯ್ಯಾಚಾರ್ ರವರು ದಿನಾಂಕ 29-07-1983 ರಂದು ಬರೆದ ನೋಂದಾಯಿತ ಉಯಿಲು ಪತ್ರದ ಮೂಲಕ ಬಂದು ಅದನ್ನು, ಅಸಲು ದಾವ ಸಂಖ್ಯೆ 168/1991, ಲಘು ವ್ಯಾಜ್ಯಗಳ ನ್ಯಾಯಾಲಯ, ಮೈಸೂರು ರವರು ಸದರಿ ಉಯಿಲಿನ ನೈಜತೆ ಬಗ್ಗೆ ನಿರ್ಧರಿಸಿದ್ದು, ಅದನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಆರ್. ಎಫ್. ಎ ನಂಬರ್ 765/2001 ರಲ್ಲಿ ಲಘು ನ್ಯಾಯಾಲಯದ ತೀರ್ಪನ್ನು ಧೃಡೀಕರಿಸಿರುತ್ತದೆ. ಸದರಿ ಸ್ವತ್ತು ಎಫ್. ಡಿ.ಪಿ2/2004 (ಲಘು ವ್ಯಾಜ್ಯಗಳ ನ್ಯಾಯಾಲಯ, ಮೈಸೂರು) ರಲ್ಲಿ ತಯಾರಿಸಿದ ನಕ್ಷೆಯಂತಿರುತ್ತದೆ. ಆದ್ದರಿಂದ ಸದರಿ ಷೆಡ್ಯೂಲ್ ಸತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗಾದರು ಅಥವಾ ಯಾವುದೇ ಬ್ಯಾಂಕ್ ಗಾಗಲಿ ಅಥವಾ ಯಾವುದೇ ಹಣಕಾಸು ಸಂಸ್ಥೆ ಗಾಗಲಿ ಅಥವಾ ಇನ್ನಿತರೆ ಯಾರಿಗಾದರು. ಯಾವುದೇ ರೀತಿಯ ಹಕ್ಕು, ತಂಟೆ, ತಕರಾರು, ಕ್ಲೇಮು, ಇತ್ಯಾದಿಗಳು ಇದ್ದಲ್ಲಿ, ಈ ಕೆಳಗೆ ಹೆಸರಿಸಿರುವ ವಕೀಲರನ್ನು ಪತ್ರಿಕಾ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 07 ದಿನಗಳೊಳಗೆ ಸೂಕ್ತ ದಾಖಲಾತಿಗಳೊಂದಿಗೆ ಸಂಪರ್ಕಿಸತಕ್ಕದ್ದು. ಈ ಅವಧಿಯೊಳಗೆ ಯಾವುದೇ ರೀತಿಯ ಹಕ್ಕು, ತಂಟೆ ತಕರಾರು ಇತ್ಯಾದಿಗಳು ಬಾರದಿದ್ದಲ್ಲಿ, ಯಾವುದೇ ಆಕ್ಷೇಪಣೆ ಇಲ್ಲವೆಂದು ತೀರ್ಮಾನಿಸಲಾಗುವುದು.

ಷೆಡ್ಯೂಲ್: ಮೈಸೂರು ಸಿಟಿ, ದೇವರಾಜ ಮೊಹಲ್ಲ, ಜಯಲಕ್ಷ್ಮಿಪುರಂ, 3ನೇ ಬ್ಲಾಕ್, 7ನೇ ಮುಖ್ಯ ರಸ್ತೆ, ಮನೆ ನಂಬರ್ 23/ಬಿ ರಲ್ಲಿ ಸ್ವತ್ತಿನ ಒಟ್ಟು ವಿಸ್ತೀರ್ಣ 4951.89 ಚ. ಅಡಿ (780 ಚ.ಅಡಿ ಆರ್‌ಸಿಸಿ ಮನೆ ಒಳಗೊಂಡಂತೆ) ಸದರಿ ಸ್ವತ್ತಿಗೆ ಚಕ್ಕುಬಂಧಿ ಈ ಕೆಳಕಂಡಂತಿರುತ್ತದೆ. ಪೂರ್ವಕ್ಕೆ: ನಿವೇಶನ ಸಂಖ್ಯೆ 33, ಪಶ್ಚಿಮಕ್ಕೆ : ನಿವೇಶನ ಸಂಖ್ಯೆ 13 ರ ಒಂದು ಭಾಗ, ಉತ್ತರಕ್ಕೆ : ನಿವೇಶನ ಸಂಖ್ಯೆ 22 , ದಕ್ಷಿಣಕ್ಕೆ : ನಿವೇಶನ ಸಂಖ್ಯೆ 23/ಎ(ಡಾ. ಜಿ. ಸರಸ್ವತಿ ರವರ ಸ್ವತ್ತು) ಮತ್ತು ರಸ್ತೆ

ಸಹಿ/– ಬಿ.ಎಸ್.ಸಾವಂತ್, ವಕೀಲರು #1079/ಎ, 1ನೇ ಮಹಡಿ, ರೇಲ್ವೆ ಸ್ಟೇಷನ್ ರಸ್ತೆ, ಚಾಮರಾಜಪುರಂ, ಮೈಸೂರು–570005, ಮೊ.ನಂ.9740097197 bssavanthassociates@gmail.com
ದಿನಾಂಕ: 30–05–2023

ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಮೈಸೂರು

ಮುಡಾ ಕಛೇರಿ ಆವರಣ, ಜೆ.ಎಲ್.ಬಿ.ರಸ್ತೆ, ಮೈಸೂರು
ದೂರವಾಣಿ/ಕೇಂದ್ರ ಕಛೇರಿ: 0821–2424246 ದೂರವಾಣಿ/ ಶಾಖೆ : 08227–260443

ಮಾನ್ಯ ಗುತ್ತಿಗೆದಾರ ಸದಸ್ಯರುಗಳ ಗಮನಕ್ಕೆ

2023 ಮಾರ್ಚ್ ಹಾಗೂ ಏಪ್ರಿಲ್ ತಿಂಗಳುಗಳಲ್ಲಿ ನಡೆದ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಅತಿ ಹೆಚ್ಚು ಅಂಕ ಪಡೆದಿರುವ ತಲಾ 15 ಜನ ಗುತ್ತಿಗೆದಾರರ ಸದಸ್ಯರುಗಳ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡುವ ಬಗ್ಗೆ ಉಲ್ಲೇಖ: ದಿನಾಂಕ 31.03.2023 ರಂದು ನಡೆದ ಸಂಘದ ಆಡಳಿತ ಮಂಡಳಿ ಸಭೆಯ ತೀರ್ಮಾನ.

ಮೇಲಿನ ವಿಷಯದಲ್ಲಿ ತಿಳಿಸಿರುವಂತೆ ಪ್ರತಿಭಾ ಪುರಸ್ಕಾರವನ್ನು ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಕೇಂದ್ರ ಕಛೇರಿ, ಮೈಸೂರು. ಹಾಗೂ ಶಾಖಾ ಕಛೇರಿ, ಟಿ.ನರಸೀಪುರ ದಲ್ಲಿ ಸದಸ್ಯರಾಗಿರುವ ಗುತ್ತಿಗೆದಾರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲು ಆಡಳಿತ ಮಂಡಳಿಯು ತೀರ್ಮಾನಿಸಿರುವುದನ್ನು ತಮಗೆ ತಿಳಿಸಲು ಹರ್ಷಿಸುತ್ತೇವೆ.

ಆದ್ದರಿಂದ ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳಲ್ಲಿ ಅತೀ ಹೆಚ್ಚು ಅಂಕ ಪಡೆದು ತೇರ್ಗಡೆಯಾಗಿರುವ ಮಕ್ಕಳ ದೃಢೀಕೃತ ಅಂಕಪಟ್ಟಿ ನಕಲು, ಶಾಲೆಯ ವಿಳಾಸ, ಮಕ್ಕಳ ಇತ್ತೀಚಿನ ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ (PHOTO) ಮತ್ತು ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯಲ್ಲಿ ಸದಸ್ಯತ್ವ ಪಡೆದಿರುವ ಬಗ್ಗೆ ಗುರುತಿನ ಚೀಟಿಯ ಜೆರಾಕ್ಸ್ ಪ್ರತಿಯನ್ನು ದಿನಾಂಕ : 21.06.2023ರ ಬುಧವಾರ ಸಾಯಂಕಾಲ 5.30 ಗಂಟೆಯೊಳಗೆ ಸೊಸೈಟಿಗೆ ಅಂಚೆ ಮೂಲಕವಾಗಲಿ ಅಥವಾ ಖುದ್ದಾಗಿ ತಲುಪಿಸಲು ಈ ಮೂಲಕ ಕೋರಲಾಗಿದೆ.

ಸಹಿ/– ಮಹಾಲಿಂಗಂ, ಅಧ್ಯಕ್ಷರು

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯ ಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷೀದಾರರು ಅದರ ಮಾಲೀಕರಾದ, ನಂಬರ್ 1917, 13ನೇ ಅಡ್ಡ ರಸ್ತೆ, ಅಶೋಕಪುರಂ, ಮೈಸೂರು, ಇಲ್ಲಿ ವಾಸವಾಗಿರುವ ಲೇಟ್. ಸಿದ್ದಯ್ಯ ರವರ ಧರ್ಮ ಪತ್ನಿಯಾದ ಶ್ರೀಮತಿ. ಮಂಚಮ್ಮ ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಬಾರೆಯ ವಿಚಾರದಲ್ಲಿ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (7) ದಿನಗಳ ಒಳಗೆ ತಮ್ಮ ಉಚಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್: ಮೈಸೂರು ನಗರ, ದೇವರಾಜ ಮೊಹಲ್ಲಾ, ವಿಜಯನಗರ 4ನೇ ಹಂತ, 2 ನೇ ಫೇಸ್, ಇಲ್ಲಿರುವ ಪೂರ್ವ–ಪಶ್ಚಿಮ: 12 ಮೀಟರ್, ಉತ್ತರ–ದಕ್ಷಿಣ: 09 ಮೀಟರ್, ಒಟ್ಟು ವಿಸ್ತೀರ್ಣ: 108 ಚದರ ಮೀಟರ್ ಅಳತೆಯ ಸ್ವತ್ತಿನ ಸಂಖ್ಯೆ: 8926 ಮತ್ತು ಇದಕ್ಕೆ ಚಕ್ಕುಬಂದಿ. ಪೂರ್ವಕ್ಕೆ:– ರಸ್ತೆ, ಪಶ್ಚಿಮಕ್ಕೆ:– ನಿವೇಶನ ಸಂಖ್ಯೆ: 8899, ಉತ್ತರಕ್ಕೆ: ನಿವೇಶನ ಸಂಖ್ಯೆ: 8925 ದಕ್ಷಿಣಕ್ಕೆ:– ನಿವೇಶನ ಸಂಖ್ಯೆ: 8927.

Sd/-M.N Prakash Kalappa, KAR -1996-2000 Advocate & Legal Consultant # 2-3, First Floor, PRI Complex, 67/7A, New Sayyajirao Road, Fort Mohalla, Mysore 570004 Cell: 93431 12535 E-mail: mnprakashkalappa@gmail.com
ಮೈಸೂರು: 31/05/2023

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷೀದಾರರು ಅದರ ಮಾಲೀಕರಾದ, ಮೇ. ಎಮ್. ಎಸ್. ವಂಡರ್ ವುಡ್ಸ್, ಪಾಲುದಾರಿಕೆ ಸಂಸ್ಥೆ ನಂಬರ್ 6, ಕಾವೇರಿನಗರ, ಆರ್.ಬಿ.ಐ. ರಸ್ತೆ, ಬನ್ನಿಮಂಟಪ, ಮೈಸೂರು–570015 ಇದರ ಪರವಾಗಿ ಪಾಲುದಾರರಾದ ಹೆಚ್. ಸಿ. ಸುಬ್ಬಣ್ಣ ಬಿನ್ ಲೇ. ಎಸ್. ಚಿನ್ನಪ್ಪ ಮತ್ತು ಎಸ್. ಕೆ. ಮುನಿಯರ್ ಬಿನ್ ಚಿನ್ನಸ್ವಾಮಿ, ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಬಾರೆಯ ವಿಚಾರದಲ್ಲಿ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (7) ದಿನಗಳ ಒಳಗೆ ತಮ್ಮ ಉಚಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಸಲಾಗುವುದು.

ಷೆಡ್ಯೂಲ್: ಮೈಸೂರು, ಬೆಳಗೊಳ ಕೈಗಾರಿಕಾ ಬಡಾವಣೆ, ಜೆ.ಸಿ.ಕೆ. ಇಂಡಸ್ಟ್ರಿಯಲ್ ಪಾರ್ಕ್, ಪ್ಲಾಟ್ ನಂ: 99 (part), ಸರ್ವೆ ನಂ: 25 ಮತ್ತು 26 ಹೆಬ್ಬಾಳ ಗ್ರಾಮ, ಕಸಬ ಹೋಬಳ, ಮೈಸೂರು ತಾಲ್ಲೂಕು, ಮೈಸೂರು, ಇದರಲ್ಲಿನ ಕೈಗಾರಿಕಾ ಪ್ಲಾಟ್ ನಂಬರ್. 17, ಸ್ವತ್ತಿನ ಸಂಖ್ಯೆ 667/17, ಯುನಿಕ್ ಕೋಡ್ ನಂ: 152200404166100032, ರಲ್ಲಿನ ಪೂರ್ವದಿಂದ ಪಶ್ಚಿಮ 18 ಮೀಟರ್, ಉತ್ತರ ದಕ್ಷಿಣ 21 ಮೀಟರ್, ಒಟ್ಟು ವಿಸ್ತೀರ್ಣ 378 ಚದರ ಮೀಟರ್, ಮತ್ತು ಇದಕ್ಕೆ ಚಕ್ಕುಬಂದಿ: ಪೂರ್ವಕ್ಕೆ : 15 ಮೀಟರ್ ರಸ್ತೆ, ಪಶ್ಚಿಮಕ್ಕೆ:– ನಿವೇಶನ ಸಂಖ್ಯೆ 15, ಉತ್ತರಕ್ಕೆ: ನಿವೇಶನ ಸಂಖ್ಯೆ 18 ದಕ್ಷಿಣಕ್ಕೆ: ನಿವೇಶನ ಸಂಖ್ಯೆ 16

Sd/-M.N Prakash Kalappa, KAR -1996-2000 Advocate & Legal Consultant # 2-3, First Floor, PRI Complex, 67/7A, New Sayyajirao Road, Fort Mohalla, Mysore 570004, Cell: 93431 12535 E-mail: mnprakashkalappa@gmail.com
ಮೈಸೂರು: 31/05/2023

PUBLIC NOTICE

My Clients, 1)Mr. NARPATH KUMAR S/o AAJI MALI, AND 2) Mrs. SEETHA DEVI, W/o Mr. KAILASH, intends to purchase the Property bearing House bearing No. 424 New No. N-3 situated at 2nd Cross, Bestarageri, Nazarbad Mohalla, MYSORE, measuring 68.0 x (30¾ +27 ½)/2 ft. belonging to 1)M.P. RAMESH, 2) M.P. UMESHA and 3) P.MAHESHA.

If anyone having any kind of sale agreement or any right, title, interest, objection or claim in the said property, he/she is hereby called upon to lodge his/her right, title, interest, claim or objection with legal documentary support within 15 (Fifteen) days from this date to the below mentioned mobile numbers.

If no one comes with any such claim, my client will proceed to transact the same in their favour and thereafter no claim or objection whatsoever will be entertained.

SCHEDULE OF THE PROPERTY: All that piece and parcel of residential House bearing No. 424 New No. N-3 situated at 2nd Cross, Bestarageri, Nazarbad Mohalla, MYSORE, measuring East to West 68.0 ft. and North to South: 30 ¾ +27 ½ ft., with A.C.Sheet with old Country tiled house constructed there on and bounded on: East by: 9.0 Mtrs Road, West by: Property bearing No. 430.North by:Property bearing No. 425, South by: . Property bearing No. 423.

Sd/-(NARPATH KUMAR)
Mobile: 94480 43824.

Sd/- C.R. Seetharam
B.Sc., LL.B. ADVOCATE & NOTARY Room No. 2, Halai Memon Mosque Upstairs, Shivarampet MYSORE-570 001

Place: MYSORE | Date: 31 .03.23